ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1535
2. ಮಾನ್ಯ ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು(ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : 17.03.2026

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯ ಅಡಿಯಲ್ಲಿ ಬರುವ ಕಬ್ಬು ನಿಯಂತ್ರಣ ಮಂಡಳಿ ಎಷ್ಟು ಸಭೆಗಳನ್ನು ನಡೆಸಿರುತ್ತದೆ; (ಸಭೆಯ ನಿರ್ಣಯಗಳ ಪ್ರತಿಯನ್ನು ಒದಗಿಸುವುದು);	ಕಳೆದ ಮೂರು ವರ್ಷಗಳಲ್ಲಿ ದಿನಾಂಕ:23.11.2023, 29.06.2024, 29.11.2024 ಮತ್ತು 10.06.2025 ರಂದು ಒಟ್ಟು 04 ಬಾರಿ ಕಬ್ಬು ನಿಯಂತ್ರಣ ಮಂಡಳಿ ಸಭೆಗಳನ್ನು ನಡೆಸಲಾಗಿರುತ್ತದೆ. ಸಭೆಯ ನಡವಳಿಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಕಬ್ಬು ಹಾಗೂ ಸಕ್ಕರೆ ನಿರ್ದೇಶನಾಲಯವು ಸದರಿ ಕಬ್ಬು ಬೆಳೆಗಾರರಿಂದ ಎಷ್ಟು ಕಬ್ಬು ಖರೀದಿ ಮಾಡಿರುತ್ತದೆ; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು);	ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯವು ಸರ್ಕಾರಿ ಆಡಳಿತ ಇಲಾಖೆಯಾಗಿದ್ದು, ಕಬ್ಬು ಬೆಳೆಗಾರರಿಂದ ಕಬ್ಬನ್ನು ಖರೀದಿ ಮಾಡುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಂದ ಖರೀದಿ ಮಾಡಿ ಅರೆದಿರುವ ಕಬ್ಬಿನ ಪ್ರಮಾಣದ ವಿವರಗಳು ಈ ಕೆಳಗಿನಂತಿವೆ. ಕ್ರ.ಸಂ ‖ ವರ್ಷ ‖ ಅರೆದಿರುವ ಕಬ್ಬಿನ ಪ್ರಮಾಣ (ಲಕ್ಷ ಮೆ.ಟನ್‌ಗಳಲ್ಲಿ) 1 ‖ 2022-23 ‖ 603.55 2 ‖ 2023-24 ‖ 585.08 3 ‖ 2024-25 ‖ 521.61 ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ.
ಇ)	ರಾಜ್ಯವು ಎಷ್ಟು ಕಬ್ಬಿನ ತಳಿಗಳನ್ನು ಹೊಂದಿರುತ್ತದೆ; ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತಳಿಯ ಕಬ್ಬನ್ನು ರೈತರು ಬೆಳೆಯುತ್ತಿದ್ದಾರೆ; ಯಾವ ತಳಿಯ ಮೂಲಕ ಹೆಚ್ಚು ಕಬ್ಬು ಬೆಳೆ ತೆಗೆಯಲು ಸಾಧ್ಯವಿರುತ್ತದೆ; ಕಬ್ಬು ತಳಿಗಳನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರಗಳನ್ನು ಒದಗಿಸುವುದು),	ರಾಜ್ಯದಲ್ಲಿ ರೈತರು ಬೆಳೆಯುತ್ತಿರುವ ಕಬ್ಬಿನ ತಳಿಗಳ ಜಿಲ್ಲಾವಾರು ವಿವರ ಮತ್ತು ಕಬ್ಬಿನ ತಳಿಗಳನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತ ಮಾಹಿತಿಯನ್ನು **ಅನುಬಂಧ-3** ರಲ್ಲಿ ಒದಗಿಸಿದೆ.

ಈ)	ಕಳೆದ ಮೂರು ವರ್ಷಗಳಲ್ಲಿ ಈ ನಿರ್ದೇಶನಾಲಯದಲ್ಲಿ ರಾಜ್ಯ ಸರ್ಕಾರ ತೊಡಗಿಸಿರುವ ಬಂಡವಾಳವೆಷ್ಟು; ನಿರ್ದೇಶನಾಲಯದ ಮೂಲಕ ನಡೆಸಿರುವ ಆರ್ಥಿಕ ಚಟುವಟಿಕೆಗಳು ಏನು; ಇದರಿಂದ ನಿರ್ದೇಶನಾಲಯಕ್ಕೆ ಬಂದಿರುವ ಆರ್ಥಿಕ ಲಾಭ ಎಷ್ಟು; (ವಿವರಗಳನ್ನು ಒದಗಿಸುವುದು)	ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯವು ಸರ್ಕಾರಿ ಆಡಳಿತ ಇಲಾಖೆಯಾಗಿರುತ್ತದೆ. 1. ಇಲಾಖಾ ವ್ಯಾಪ್ತಿಯಲ್ಲಿ 2 ಮುಂದುವರೆದ ಯೋಜನೆಗಳಿದ್ದು, ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ನೀಡಿದ ಅನುದಾನದ ವಿವರಗಳು ಈ ಕೆಳಗಿನಂತಿದೆ. ರೂ.ಲಕ್ಷಗಳಲ್ಲಿ

ಕ್ರ. ಸಂ	ಯೋಜನೆಯ ವಿವರ ಮತ್ತು ಲೆಕ್ಕಶೀರ್ಷಿಕೆ	2023-24ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2025-26ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ
1.	ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ ಮಂಡ್ಯ 2852-08-201-0-09-059	75.00	50.00	200.00
2	ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಯೋಜನೆ 4860-04-004-0-01-172	250.00	567.00	2000.00

2. ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ಕಬ್ಬು ಅರೆಯುವ ಪರವಾನಗಿ ನವೀಕರಣದ ವಾರ್ಷಿಕ ಶುಲ್ಕದಿಂದ ಸಂಗ್ರಹವಾಗಿರುವ ಆದಾಯದ ವಿವರಗಳು.

ಕ್ರ. ಸಂ	ವರ್ಷ	ಕಬ್ಬು ಅರೆಯುವ ಪರವಾನಗಿ ನವೀಕರಣದ ಶುಲ್ಕದಿಂದ ಸಂಗ್ರಹವಾಗಿರುವ ಒಟ್ಟು ಮೊತ್ತ (ರೂ. ಗಳಲ್ಲಿ)
1	2023-2024	9,95,000.00
2	2024-2025	65,40,000.00
3	2025-2026	76,50,000.00
	ಒಟ್ಟು	**1,51,85,000.00**

3. ಸಕ್ಕರೆ ನಿರ್ದೇಶನಾಲಯದಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಸಂಗ್ರಹವಾಗಿರುವ GST ವಿವರಗಳು.

ಕ್ರ. ಸಂ	ವರ್ಷ	GST ಮೊತ್ತ ವಿವರಗಳು (ರೂ.ಗಳಲ್ಲಿ)
1	2023-2024	1,83,879.00
2	2024-2025	2,51,355.00
3	2025-2026	2,49,250.00
	ಒಟ್ಟು	**6,84,484.00**

ಉ)	ಸದರಿ ನಿರ್ದೇಶನಾಲಯವು ಪ್ರತಿ ಆರ್ಥಿಕ ವರ್ಷದಲ್ಲಿ ಆಡಿಟ್ ವ್ಯಾಪ್ತಿಗೆ ಒಳಪಟ್ಟಿರುತ್ತದೆಯೇ; (ಒಳಪಟ್ಟಿದ್ದಲ್ಲಿ ಕಳೆದ ಮೂರು ವರ್ಷಗಳ ಆಡಿಟ್ ವರದಿಯ ಪ್ರತಿಯನ್ನು ನೀಡುವುದು)	ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯವು ಸರ್ಕಾರಿ ಇಲಾಖೆ ಆಗಿರುವುದರಿಂದ ಆಡಿಟ್ ವ್ಯಾಪ್ತಿಗೆ ಒಳಪಡುತ್ತದೆ. ರಾಜ್ಯ ಮಹಾಲೇಖಪಾಲರು ಕಳೆದ ಮೂರು ವರ್ಷಗಳಿಂದ ಆಡಿಟ್ ಕಾರ್ಯವನ್ನು ಇಲಾಖೆಯಲ್ಲಿ ಕೈಗೊಂಡಿರುವುದಿಲ್ಲ.
ಊ)	ಕಳೆದ ಮೂರು ವರ್ಷಗಳಲ್ಲಿ ನಿರ್ದೇಶನಾಲಯವು ಸಕ್ಕರೆ ಕಬ್ಬಿನ ಸಿಪ್ಪೆ, ಕಾಕಂಬಿ ಎಷ್ಟು ಆದಾಯವನ್ನು ಪಡೆದಿರುತ್ತದೆ; (ಪೂರ್ಣ ವಿವರಗಳನ್ನು ಒದಗಿಸುವುದು)	2022-23, 2023-24 ಮತ್ತು 2024-25ನೇ ಸಕ್ಕರೆ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ, ಕಬ್ಬಿನ ಸಿಪ್ಪೆ ಮತ್ತು ಕಾಕಂಬಿಯಿಂದ ಪ್ರಾಪ್ತವಾದ ಆದಾಯದ ಅಂದಾಜು ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಿದೆ.
ಋ)	ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳು ಎಷ್ಟು; ಇವುಗಳಲ್ಲಿ ಸರ್ಕಾರಿ, ಖಾಸಗಿ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳು ಎಷ್ಟು; ಇವುಗಳಲ್ಲಿ ಎಷ್ಟು ಲಾಭದಲ್ಲಿ ಇರುತ್ತವೆ ಮತ್ತು ಎಷ್ಟು ನಷ್ಟದಲ್ಲಿ ಇರುತ್ತವೆ ಸಕ್ಕರೆ ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ ನೀಡಬೇಕಾದ / ಪಾವತಿಸಬೇಕಾದ ಬಾಕಿ ಹಣ ಎಷ್ಟು? (ಜಿಲ್ಲಾವಾರು ಪೂರ್ಣ ಮಾಹಿತಿಯನ್ನು ಒದಗಿಸುವುದು)	ರಾಜ್ಯದಲ್ಲಿ ಒಟ್ಟು 98 ಸಕ್ಕರೆ ಕಾರ್ಖಾನೆಗಳು ನೋಂದಣಿಗೊಂಡಿರುತ್ತವೆ. ಇವುಗಳ ಪೈಕಿ 2025-26ನೇ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ವಲಯವಾರು ಕಾರ್ಖಾನೆಗಳ ವಿವರ ಈ ಕೆಳಕಂಡಂತಿದೆ. **ಕ್ರ. ಸಂ** | **ವಲಯ** | **ಕಾರ್ಯನಿರತ** | **ಸ್ಥಗಿತ** | **ಸಮಾಪನೆ** | **ಒಟ್ಟು** 1 | ಸಾರ್ವಜನಿಕ | 01 | 01 | - | 02 2 | ಜಂಟಿ | - | - | 01 | 01 3 | ಸಹಕಾರಿ | 12 | 04 | 04 | 20 4 | ಸಹಕಾರಿ (ಗುತ್ತಿಗೆ) | 09 | 01 | - | 10 5 | ಖಾಸಗಿ | 59 | 06 | - | 65 | **ಒಟ್ಟು** | **81** | **12** | **05** | **98** ಪೂರ್ಣ ವಿವರಗಳನ್ನು **ಅನುಬಂಧ-5** ರಲ್ಲಿ ಒದಗಿಸಿದೆ. ದಿನಾಂಕ:31.03.2025ಕ್ಕೆ ಇದ್ದಂತೆ ಈ ಕಾರ್ಖಾನೆಗಳ ಲಾಭ-ನಷ್ಟದ ವಿವರಗಳನ್ನು **ಅನುಬಂಧ-6** ರಲ್ಲಿ ಒದಗಿಸಿದೆ.

		2025-26ನೇ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆಗಳು ದಿನಾಂಕ:28.02.2026 ಕ್ಕೆ ಇದ್ದಂತೆ ಒಟ್ಟು 550.06 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ, 47.35 ಲಕ್ಷ ಮೆ.ಟನ್ ಸಕ್ಕರೆ ಉತ್ಪಾದಿಸಿರುತ್ತವೆ. ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕಬ್ಬು ಬಿಲ್ಲು ರೂ.22171.14 ಕೋಟಿಗಳಾಗಿರುತ್ತದೆ. ಈ ಪೈಕಿ ರೂ.17430.84 ಕೋಟಿಗಳಷ್ಟು ಪಾವತಿಯಾಗಿದ್ದು, ಇನ್ನು ರೂ.4746.08 ಕೋಟಿಯಷ್ಟು ಪಾವತಿಸಬೇಕಾಗಿರುತ್ತದೆ. ಕೆಲವು ಸಕ್ಕರೆ ಕಾರ್ಖಾನೆಗಳು ರಾಜ್ಯ ಸರ್ಕಾರವು ಘೋಷಿಸಿರುವ ಕಬ್ಬಿನ ಬೆಲೆಗಿಂತ ಹೆಚ್ಚಿನ ಮೊತ್ತವನ್ನು ಪಾವತಿಸಿರುತ್ತವೆ. ಕಾರ್ಖಾನೆವಾರು ವಿವರಗಳನ್ನು **ಅನುಬಂಧ-7** ರಲ್ಲಿ ಒದಗಿಸಿದೆ.

ಸಂಖ್ಯೆ: ಸಿಇ 109 ಎಸ್‌ಜಿಎಫ್ 2026

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ - 1A

ದಿನಾಂಕ: 23.11.2023 ರಂದು ಬೆಳಗ್ಗೆ 11.00 ಗಂಟೆಗೆ ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು – ಕಬ್ಬು ನಿಯಂತ್ರಣ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಗಳು.

ಸಭೆಗೆ ಹಾಜರಿದ್ದವರ ಪಟ್ಟಿ ಲಗತ್ತಿಸಿದೆ

ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಮಾತನಾಡಿ, ಶ್ರೀ.ಶಿವಾನಂದ ಎಸ್. ಪಾಟೀಲ್, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರನ್ನು ಸಭೆಗೆ ಆಹ್ವಾನಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕಾರ್ಯಸೂಚಿಯಂತೆ ಸಭೆಯನ್ನು ಜರುಗಿಸುವಂತೆ ಕೋರಿದರು. ಅದರಂತೆ ಕಬ್ಬು ನಿಯಂತ್ರಣ ಮಂಡಳಿ ಸಭೆಗೆ ಆಗಮಿಸಿದ ಸರ್ಕಾರದ ಎಲ್ಲಾ ಅಧಿಕಾರಿಗಳು, ರೈತ ಪ್ರತಿನಿಧಿ ಸದಸ್ಯರು ಹಾಗೂ ವಿಶೇಷ ಆಹ್ವಾನಿತರು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಮಾತನಾಡುತ್ತ, ಸರ್ಕಾರದ ಆದೇಶ ದಿನಾಂಕ 17.10.2023 ರಿಂದ ಹಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಕಬ್ಬು ನಿಯಂತ್ರಣ ಮಂಡಳಿಯ ನಾಮ ನಿರ್ದೇಶನಗೊಂಡ ಸದಸ್ಯರುಗಳ ಪಟ್ಟಿಯನ್ನು ಸಭೆಗೆ ಮಂಡಿಸಿದರು. ಹೊಸದಾಗಿ ನಾಮ ನಿರ್ದೇಶನಗೊಂಡ ಕಬ್ಬು ಬೆಳೆಗಾರ ರೈತ ಪ್ರತಿನಿಧಿಗಳನ್ನು, ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳನ್ನು ಹಾಗೂ ಇತರೆ ಅಧಿಕಾರಿಗಳನ್ನು ಪ್ರತ್ಯೇಕವಾಗಿ ಸಭೆಗೆ ಪರಿಚಯಿಸುವಂತೆ ವಿನಂತಿಸಿಕೊಂಡರು.

ಸಭೆಯ ಅಧ್ಯಕ್ಷತೆ ವಹಿಸಿದ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಮಾತನಾಡಿ, ರಾಜ್ಯದಲ್ಲಿ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಮತ್ತು ಸಕ್ಕರೆ ಉದ್ದಿಮೆಯ ಪ್ರಗತಿಯ ದೃಷ್ಟಿಯಿಂದ ಪ್ರಗತಿ ಪರ ನಿರ್ಧಾರಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ ಎಂದರು. ಒಟ್ಟಾರೆಯಾಗಿ, ಹೊಸದಾಗಿ ನಾಮನಿರ್ದೇಶಿತ ಕಬ್ಬು ಬೆಳೆಗಾರ ರೈತ ಪ್ರತಿನಿಧಿಗಳು ಹಾಗೂ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಕಬ್ಬು ಬೆಳೆಯ ಮತ್ತು ಸಕ್ಕರೆ ಉದ್ದಿಮೆಯ ವಿವಿಧ ಚಟುವಟಿಕೆಗಳ ನಿಯಮ ಮತ್ತು ರೂಪರೇಷೆಗಳನ್ನು ಜರುಗಿಸುವಲ್ಲಿ ತಮ್ಮ ಅಮೂಲ್ಯ ಸಲಹೆಯನ್ನು ನೀಡುವಂತೆ ಕೋರಿದರು. ಮಾನ್ಯ ಸಚಿವರು ಮಾತನಾಡಿ, ಹಾಲಿ ಇರುವ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಚುನಾವಣೆ ಕಾರ್ಯಕ್ಕಾಗಿ ತೆಲ್ಲಂಗಾಣ ರಾಜ್ಯಕ್ಕೆ ತೆರಳಿರುವುದರಿಂದ ಅವರ ಪರವಾಗಿ ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಸಭೆಯ ಕಾರ್ಯಸೂಚಿಯಂತೆ ವಿಷಯಗಳನ್ನು ಮಂಡಿಸುವಂತೆ ಸೂಚಿಸಿದರು.

ಶಿವಾನಂದ ಎಸ್ ಪಾಟೀಲ
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು

ವಿಷಯ 1: ದಿನಾಂಕ 05.12.2022 ರಂದು ನಡೆದ ಸಭೆಯ ನಡವಳಿಗಳನ್ನು ಓದಿ ದೃಢೀಕರಿಸುವುದು.

ದಿನಾಂಕ 05.12.2022 ರಂದು ನಡೆದ ಸಭೆಯ ನಡವಳಿಗಳನ್ನು ಓದಿ ದೃಢೀಕರಿಸಲಾಯಿತು.

ವಿಷಯ 2: ದಿನಾಂಕ 05.12.2022ರ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳು:

ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಮಾತನಾಡಿ, ಈಗಾಗಲೇ ಸದಸ್ಯರಿಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಟಿಪ್ಪಣಿಯನ್ನು ನೀಡಲಾಗಿದೆ ಎಂದು ತಿಳಿಸುತ್ತಾ, ಸಭೆಯ ನಡವಳಿಗಳನ್ವಯ ಈ ಕೆಳಗಿನ ಅಂಶಗಳಂತೆ ಕ್ರಮ ಕೈಗೊಳ್ಳಲಾಗಿರುವುದನ್ನು ಸಭೆಯ ಅವಗಾಹನೆಗೆ ಈ ಕೆಳಕಂಡಂತೆ ಸಲ್ಲಿಸಿದರು.

1. ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013 ಹಾಗೂ ತಿದ್ದುಪಡಿ ಅಧಿನಿಯಮ 2014ರ ಕಲಂ 4(ಎ) ರಡಿ ಎಥನಾಲ್ ಉತ್ಪಾದಿಸುವ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಮೊದಲ ಕಂತಿನಲ್ಲಿ ಕೇಂದ್ರ ಸರ್ಕಾರವು 2022-23ನೇ ಸಾಲಿಗೆ ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ (FRP) ಹೊತೆಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.50/- (ಐವತ್ತು ರೂಪಾಯಿಗಳು ಮಾತ್ರ) ಗಳನ್ನು ಹೆಚ್ಚುವರಿಯಾಗಿ ಪಾವತಿಸುವ ಬಗ್ಗೆ. ಸದರಿ ವಿಷಯದ ಬಗ್ಗೆ ವಿಷಯ ಸಂಖ್ಯೆ 7 ರಲ್ಲಿ ವಿವರವಾಗಿ ವಿವರಿಸಲಾಗಿದೆ.

2. ಸಕ್ಕರೆ ಇಲಾಖೆಗೆ ಸಕ್ಕರೆ ಕಾರ್ಖಾನೆಗಳಿಂದ ಅವಶ್ಯವಿರುವ ಮಾಹಿತಿಗಳನ್ನು ಕ್ರೂಢೀಕರಿಸಲು ಒಂದು ತಂತ್ರಾಂಶವನ್ನು (ಸಾಫ್ಟ್‌ವೇರ್) ಅಭಿವೃದ್ಧಿಪಡಿಸುವ ಬಗ್ಗೆ:

ಸಕ್ಕರೆ ಇಲಾಖೆಗೆ ಸಕ್ಕರೆ ಕಾರ್ಖಾನೆಗಳಿಂದ ಅವಶ್ಯವಿರುವ ಮಾಹಿತಿಗಳನ್ನು ಕ್ರೂಢೀಕರಿಸಲು ಒಂದು ತಂತ್ರಾಂಶವನ್ನು (ಸಾಫ್ಟ್‌ವೇರ್) ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ M/s. Deavnet Solutions, Pune ರವರಿಗೆ ರೂ.12,39,000/- (ಜಿಎಸ್‌ಟಿ ಒಳಗೊಂಡಂತೆ) ಗಳನ್ನು ನೀಡಿ, ಒಂದು ವರ್ಷದ ಅವಧಿಯೊಳಗೆ ಅನುಷ್ಠಾನಗೊಳಿಸಲು ದಿನಾಂಕ:16.03.2023 ರಂದು ನೀಡಲಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ನಿರ್ದೇಶಕರು ಮಾತನಾಡಿ, ಸದರಿ ಸಾಫ್ಟ್‌ವೇರನ್ನು ಅಳವಡಿಸುವ ನಿಟ್ಟಿನಲ್ಲಿ ಪ್ರತಿ ಕಾರ್ಖಾನೆಗೆ ಭೇಟಿ ನೀಡಿ ಕಾರ್ಖಾನೆಯವರು ಒದಗಿಸುವ ಮಾಹಿತಿ

ಮತ್ತು ನಮೂನೆಗಳ ಬಗ್ಗೆ ರಾಜ್ಯದ ದಕ್ಷಿಣ ಭಾಗದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ತರಬೇತಿಯನ್ನು ನೀಡಲಾಗಿದೆ. ಉತ್ತರ ಕರ್ನಾಟಕ ಸಕ್ಕರೆ ಕಾರ್ಖಾನೆಗಳಿಗೂ ಕೂಡ ಸದರಿ ತರಬೇತಿಯನ್ನು ಜರುಗಿಸಲಾಗುತ್ತಿದೆ ಎಂದು ಹೇಳಿದರು. ಸದರಿ ವಿಷಯವು ವಿಳಂಬವಾಗಿರುವುದನ್ನು ಸಭೆಯಲ್ಲಿ ಗಂಭೀರವಾಗಿ ಪರಿಗಣಿಸಲಾಯಿತು. ಇದನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಕ್ರಮವನ್ನು ಕೈಗೊಳ್ಳುವಂತೆ ಮಾನ್ಯ ಸಚಿವರು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸೂಚಿಸಿದರು. ತದನಂತರ ಮುಂದಿನ ಸಭೆಗೆ ಸದರಿ ಸಾಫ್ಟ್‌ವೇರ್‌ನ ವಿವಿಧ ಅಂಶಗಳ ಬಗ್ಗೆ M/s. Deavnet Solutions, Pune ರವರಿಂದ ಒಂದು ಸಂಪೂರ್ಣವಾದ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುವಂತೆ ಹೇಳಿದರು.

<u>ನಿರ್ಣಯ</u>: M/s. Deavnet Solutions, Pune ಇವರು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ತರಬೇತಿಯನ್ನು ನೀಡುವುದು ಮತ್ತು ಅನುಷ್ಠಾನಗೊಳಿಸುವುದು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

ವಿಷಯ 3: 2022-23ನೇ ಸಾಲಿನಲ್ಲಿ ಕಾರ್ಖಾನೆಗಳು ನುರಿಸಿರುವ ಕಬ್ಬಿನ ಪ್ರಮಾಣ, ಉತ್ಪಾದಿಸಿರುವ ಸಕ್ಕರೆ, ಇಳುವರಿ ಹಾಗೂ ಕಬ್ಬು ಬಿಲ್ಲು ಪಾವತಿಯ ವಿವರಗಳ ಕುರಿತು.

ಈ ವಿಷಯದ ಬಗ್ಗೆ ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಮಾತನಾಡುತ್ತಾ 2022-23ನೇ ಹಂಗಾಮಿನಲ್ಲಿ ರಾಜ್ಯದ 74 ಸಕ್ಕರೆ ಕಾರ್ಖಾನೆಗಳು ಒಟ್ಟು 603.55 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ, 59.81 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಿ ಶೇ.9.91 ಸಕ್ಕರೆ ಇಳುವರಿಯನ್ನು (ಎಥನಾಲ್ ಉತ್ಪಾದನೆಗೆ ಪೂರೈಸಿದ ಸಕ್ಕರೆ ಹೊರತುಪಡಿಸಿ) ಪಡೆದಿರುತ್ತವೆ. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ನುರಿಸಿರುವ ಕಬ್ಬಿಗೆ ರೂ.19747.85 ಕೋಟಿಗಳಷ್ಟು ಮೊತ್ತವನ್ನು ಪಾವತಿಸಬೇಕಾಗಿದ್ದು, ರೂ.20,138.93 ಕೋಟಿಗಳಷ್ಟು ಪಾವತಿಸಿರುತ್ತವೆ. ಅಂದರೆ ಸದರಿ ಹಂಗಾಮಿಗೆ ಕಾರ್ಖಾನೆಗಳು ನೀಡಿರುವ ಮಾಹಿತಿಯ ಆಧಾರದ ಮೇಲೆ 31 ಸಕ್ಕರೆ ಕಾರ್ಖಾನೆಗಳು ಎಫ್.ಆರ್.ಪಿ. ದರಕ್ಕಿಂತ ಅಂದರೆ, ರೂ.391.08 ಕೋಟಿ ಮೊತ್ತದಷ್ಟು ಹೆಚ್ಚಿಗೆ ಕಬ್ಬಿನ ಬಿಲ್ಲನ್ನು ರೈತರಿಗೆ ಸನ್ 2022-23ನೇ ಹಂಗಾಮಿನಲ್ಲಿ ಪಾವತಿಸಿರುತ್ತವೆ. ಅವುಗಳಲ್ಲಿ 20 ಕಾರ್ಖಾನೆಗಳು ರೂ.100/- ಮತ್ತು ಮೇಲ್ಪಟ್ಟು ಹಾಗೂ 5 ಕಾರ್ಖಾನೆಗಳು ರೂ.150/- ಮತ್ತು ಮೇಲ್ಪಟ್ಟು ಹೆಚ್ಚಿಗೆ ಪಾವತಿಸಿರುತ್ತವೆ. ಇನ್ನುಳಿದ 11 ಕಾರ್ಖಾನೆಗಳು

ಶಿವಾನಂದ ಎಸ್ ಪಾಟೀಲ
ಕೃಷಿ ಮಾರುಕಟ್ಟೆ ಸಚಿವರು
ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ

ಎಫ್.ಆರ್.ಪಿ.ಗಿಂತ ಹೆಚ್ಚು ಹಾಗೂ ರೂ.100/- ಕ್ಕಿಂತ ಕಡಿಮೆ ಪಾವತಿಸಿರುತ್ತವೆ ಎಂದು ತಿಳಿಸಿದರು. ಮುಂದುವರೆದು, ಹಿಂದಿನ ವರ್ಷಗಳ ಕಬ್ಬು ಬಿಲ್ಲಿನ ಬಾಕಿ ನಿಟ್ಟಿನಲ್ಲಿ 2018-19ನೇ ಸಾಲಿನಲ್ಲಿ ಈ ಕೆಳಕಂಡ 3 ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬು ಬಿಲ್ಲಿನ ಬಾಕಿ ಉಳಿಸಿಕೊಂಡಿರುತ್ತವೆ. ಇದನ್ನು ಹೊರತುಪಡಿಸಿ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಾದ ಯಾವುದೇ ಹಳೆಯ ಬಾಕಿ ಇರುವುದಿಲ್ಲ. ಅವುಗಳ ವಿವರ ಕೆಳಗಿನಂತಿದೆ.

(ರೂ.ಕೋಟಿಗಳಲ್ಲಿ)

ವರ್ಷ	ಕಾರ್ಖಾನೆಯ ಹೆಸರು	ಬಾಕಿಯಿರುವ ಮೊತ್ತ
2018-19	1. ಬೀದರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್, ಹುಮನಾಬಾದ ತಾಲ್ಲೂಕು, ಬೀದರ್ ಜಿಲ್ಲೆ	0.89
	2. ಭವಾನಿ ಶುಗರ್ಸ್ ಲಿ., ಬರೂರ, ಬೀದರ್ ಜಿಲ್ಲೆ	1.80
	3. ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ., ಇಂಡಿ, ವಿಜಯಪುರ ಜಿಲ್ಲೆ	1.25
	ಒಟ್ಟು	3.94

ಈ ಮೂರು ಕಾರ್ಖಾನೆಗಳ ವಿರುದ್ಧ ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಈ ದಿಸೆಯಲ್ಲಿ ಮಾತನಾಡಿದ, ಶ್ರೀ. ಬಾಬುರಾವ್ ತುಂಬಾ, ನಿರ್ದೇಶಕರು, ಮಹಾತ್ಮಾಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹುಂಜಿ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ ಇವರು ಮಾತನಾಡಿ, ಬೀದರ ಸಹಕಾರಿ ಸಕ್ಕರೆ ಕಾರ್ಖಾನೆಯ ಕಬ್ಬಿನ ಬಿಲ್ ಪಾವತಿ ಬಗ್ಗೆ ಕಬ್ಬು ಬೆಳೆಗಾರರಿಗೆ ಪಾವತಿಸುವುದು ಅತಿ ಅವಶ್ಯವಿದೆ ಎಂದು ಹೇಳಿ, ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಹಾರಿಗೊಳಿಸುವುದು ಅವಶ್ಯವಿದೆ ಎಂದು ಹೇಳಿದರು. ಶ್ರೀ.ದರ್ಶನ ಪ್ಯಟ್ಟಣ್ಣಯ್ಯ, ಮಾನ್ಯ ಶಾಸಕರು, ಮೇಲುಕೋಟೆ ವಿಧಾನ ಸಭಾ ಕ್ಷೇತ್ರ ಇವರು ಮಾತನಾಡಿ, ರೈತರ ಹಿತದೃಷ್ಟಿಯಿಂದ ಸರ್ಕಾರದ ನಿಯಮದಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ 14 ದಿನಗಳೊಳಗಾಗಿ ಕಬ್ಬಿನ ಬಿಲ್ಲನ್ನು ಪಾವತಿಸುವ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ತಿಳಿಸಿದರು. ಅದರಂತೆ, ಶ್ರೀ.ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ಮೈಸೂರು ಇವರು ಸಹ ಸಹಮತಿಸಿದರು. ಮಾನ್ಯ ಸಕ್ಕರೆ ಸಚಿವರು ಕಬ್ಬಿನ ಬೆಲೆಯನ್ನು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಸರ್ಕಾರವು ಘೋಷಿಸಿದ ದರದಂತೆ ನೀಡುವ

ನಿಟ್ಟಿನಲ್ಲಿ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಸಕ್ಕರೆ ಇಲಾಖೆಯು ಇನ್ನು ಮುಂದೆ ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಲಾಗುವುದೆಂದು ಸಭೆಗೆ ಭರವಸೆ ನೀಡಿದರು.

<u>ನಿರ್ಣಯ</u>:ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಹಾಲಿ ಇರುವ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನಿಯಮಗಳ ಪ್ರಕಾರ ಕಬ್ಬು ಬೆಳೆಗಾರರಿಗೆ ಕಬ್ಬಿನ ಬಿಲ್ಲನ್ನು ಪಾವತಿಸುವುದು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

ವಿಷಯ 4: 2023-24ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭವಾಗಿದ್ದು, ಕಬ್ಬು ಅರೆದಿರುವ ಪ್ರಮಾಣ, ಸಕ್ಕರೆ ಉತ್ಪಾದನೆ, ಇಳುವರಿ ಹಾಗೂ ಪಾವತಿ ವಿವರಗಳ ಬಗ್ಗೆ.

2023-24ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭವಾಗಿದ್ದು, ಕಬ್ಬು ಅರೆದಿರುವ ಪ್ರಮಾಣ, ಸಕ್ಕರೆ ಉತ್ಪಾದನೆ, ಇಳುವರಿ ಹಾಗೂ ಪಾವತಿ ವಿವರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. 2023-24ನೇ ಸಾಲಿನ ಕಬ್ಬು ನುರಿಸುವ ಹಂಗಾಮನ್ನು ರಾಜ್ಯದ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳು ದಿನಾಂಕ:01.11.2023 ರಿಂದ ಪ್ರಾರಂಭಿಸುವಂತೆ ಮೊದಲಿಗೆ ಸೂಚಿಸಲಾಗಿತ್ತು. ಆದರೆ, ರಾಜ್ಯದಲ್ಲಿ ಬರಗಾಲ ಮತ್ತು ವಿದ್ಯುತ್ ಅಭಾವದ ಹಿನ್ನೆಲೆಯಲ್ಲಿ ದಿನಾಂಕ:24.10.2023ರ ನಂತರ ಪ್ರಾರಂಭಿಸುವಂತೆ ಸೂಚಿಸಿದ್ದನ್ನು ಸಕ್ಕರೆ ಸಚಿವರು ಸಭೆಗೆ ತಿಳಿಸಿದರು. ತದನಂತರ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜಾದ 15 ದಿನಗಳ ಒಳಗಾಗಿ ಕಬ್ಬಿನ ಬಿಲ್ಲನ್ನು ಪಾವತಿಸಲು ಕ್ರಮವಿಡುವಂತೆ ಸಕ್ಕರೆ ಇಲಾಖೆಗೆ ಸೂಚಿಸಿದರು.

<u>ನಿರ್ಣಯ</u>: 2023-24 ನೇ ಸಾಲಿನಲ್ಲಿ ಕಬ್ಬು ನುರಿಸುತ್ತಿರುವ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ 14 ದಿನಗಳೊಳಗಾಗಿ ಕಬ್ಬಿನ ಬಿಲ್ಲನ್ನು ರೈತರಿಗೆ ಪಾವತಿಸುವಂತೆ ಕ್ರಮವಿಡುವುದು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

ವಿಷಯ 5: ದಿನಾಂಕ 06.11.2023 ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ 2023-24ನೇ ಹಂಗಾಮಿಗೆ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಮಾರ್ಗಸೂಚಿಗಳನ್ನು ನಿಗದಿಪಡಿಸುವ ಸಂಬಂಧ ನಡೆದ ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿ ಸಭೆಯ ನಿರ್ಣಯಗಳ ವರದಿಯನ್ನು ಮಂಡಿಸುವ ಬಗ್ಗೆ.

ಶಿವಾನಂದ ಎಸ್ ಪಾಟೀಲ
ದಿವಾ. ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಕಾರ್ಖಾನೆ
ಕೃಷಿ ಮಾರುಕಟ್ಟೆ ಸಚಿವರು

2023-24ನೇ ಹಂಗಾಮಿಗೆ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಮಾರ್ಗಸೂಚಿಗಳನ್ನು ನಿಗದಿಪಡಿಸುವ ಕುರಿತು ದಿನಾಂಕ 06.11.2023 ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿ ಸಭೆಯ ನಿರ್ಣಯಗಳನ್ನು ಕಬ್ಬು ನಿಯಂತ್ರಣ ಮಂಡಳಿಯ ಮುಂದೆ ಅನುಮೋದನೆಗಾಗಿ ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಪ್ರಸ್ತಾಪಿಸಿದರು. ಈ ನಿಟ್ಟಿನಲ್ಲಿ ಕೋರಮಂಡಲ್ ಸಕ್ಕರೆ ಕಾರ್ಖಾನೆಯ ಶ್ರೀ ವಿ.ಹೆ.ರವಿ ರವರು ಮಾತನಾಡಿ, ದಕ್ಷಿಣ ಭಾಗದಲ್ಲಿ ರೈತರು ಕಬ್ಬು ಬೆಳೆಯುವ ಗದ್ದೆಗಳು ಕಿರಿದಾಗಿರುವುದರಿಂದ ಯಾಂತ್ರೀಕೃತ ಕಟಾವು ಅಷ್ಟೊಂದು ಯಶಸ್ವಿಯಾಗಿರುವುದಿಲ್ಲ ಎಂದು ಹೇಳಿದರು ಮತ್ತು ಸಾಗಾಣಿಕೆ ಗುತ್ತಿಗೆದಾರರು ಸರ್ಕಾರವು ಹೊರಡಿಸಿದ ಮಾರ್ಗಸೂಚಿಯಂತೆ ದರಗಳನ್ನು ನೀಡಲು ಒತ್ತಾಯಿಸುತ್ತಿದ್ದಾರೆ ಎಂದು ಹೇಳಿದರು. ಈ ದಿಸೆಯಲ್ಲಿ ಮಾತನಾಡಿದ ಮಾನ್ಯ ಸಚಿವರು ಈ ವಿಷಯವು ಸರ್ಕಾರದ ಮಾರ್ಗಸೂಚಿಯಂತೆ ಇರುವುದರಿಂದ ಸದರಿ ದರದಲ್ಲಿ ಸಕ್ಕರೆ ಕಾರ್ಖಾನೆಗಳು ಸಾಗಾಣಿಕೆ ವೆಚ್ಚವನ್ನು ಕಡಿಮೆಗೊಳಿಸಿದರೆ ರೈತರಿಗೆ ಇನ್ನೂ ಹೆಚ್ಚಿನ ಕಬ್ಬಿನ ಬಿಲ್ಲ ದೊರೆಯಲು ಸಹಾಯವಾಗುವುದೆಂದು ಹೇಳಿದರು.

ಯಾಂತ್ರೀಕೃತ ಕಬ್ಬು ಕಟಾವು ವಿಧಾನದ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿ, ಸಭೆಯಲ್ಲಿ ಮಾತನಾಡಿದ ಆಯುಕ್ತರು, ಕೃಷಿ ಇಲಾಖೆ ಇವರು ಯಾಂತ್ರೀಕೃತ ಕಬ್ಬಿನ ಕಟಾವಿನಿಂದ ಆಗುವ ಅನೇಕ ಅನುಕೂಲತೆಗಳನ್ನು ಸಭೆಗೆ ತಿಳಿಸಿದರು ಮತ್ತು ಇದು ವೈಜ್ಞಾನಿಕವಾಗಿ ಹಲವಾರು ಪ್ರದೇಶಗಳಲ್ಲಿ ದೃಢೀಕೃತವಾಗಿದೆ ಎಂದು ಹೇಳಿದರು. ಆದ್ದರಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಮುಂದಿನ ದಿನಗಳಲ್ಲಿ ಯಾಂತ್ರೀಕೃತ ಕಬ್ಬು ಕಟಾವು ಅನಿವಾರ್ಯವಾಗಬಹುದೆಂದು ಹೇಳಿದರು. ಆದರೆ, ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಾಬುರಾವ್ ತುಂಬಾ ಇವರು ಮಾತನಾಡಿ, ಯಾಂತ್ರೀಕೃತ ಕಬ್ಬು ಕಟಾವಿನಿಂದ ಕೂಳೆ ಕಬ್ಬಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಆದರೆ ಉತ್ತರ ಭಾಗದ ರೈತ ಪ್ರತಿನಿಧಿಗಳಾದ ಶ್ರೀ.ಗಿರೀಶ ಚಂದ್ರಪ್ಪ ಕೋರೆಡ್ಡಿ ಇವರು ಮಾತನಾಡಿ, ಯಾಂತ್ರೀಕೃತ ಕಬ್ಬು ಕಟಾವಿನ ಬಗ್ಗೆ ತಮ್ಮ ಸಮ್ಮತಿ ಇರುವುದನ್ನು ತಿಳಿಸಿದರು. ಅದರಂತೆ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳಾದ ಶ್ರೀ. ಬಾಲು ಭಕ್ಷಿ, ಗೋದಾವರಿ ಬಯೋರಿಫೈನರಿಸ್ ಲಿ., ಸಮೀರವಾಡಿ, ಇವರು ಉತ್ತರ ಭಾಗಕ್ಕೆ ಯಾಂತ್ರೀಕೃತ ಕಬ್ಬು ಕಟಾವು ಸೂಕ್ತವಾಗಿದ್ದು ಹಾಗೂ ಈಗಾಗಲೇ ಹಲವಾರು ಸಕ್ಕರೆ ಕಾರ್ಖಾನೆಗಳು ಇದನ್ನು ಅನುಷ್ಠಾನಗೊಳಿಸುತ್ತಿರುವುದಾಗಿ ತಿಳಿಸಿದರು. ಶ್ರೀ.ಕದಮ, ಅರಿಹಂತ (ಓಂ) ಶುಗರ್ಸ್ ಲಿ.,

ಜೈನಾಮರ ಇವರು ಮಾತನಾಡಿ, ಕಬ್ಬು ಕಟಾವು ಕಾರ್ಮಿಕರ ಕೊರತೆ ಹಾಗೂ ಸಾಮರ್ಥ್ಯದ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಯಾಂತ್ರೀಕೃತ ಕಬ್ಬು ಕಟಾವು ಅತ್ಯವಶ್ಯಕ ಎಂದು ಹೇಳಿದರು. ಮುಂದುವರೆದು, ಶ್ರೀ. ಕಿಶನ್, ಪ್ರತಿನಿಧಿ, ರಾಜ್ಯ ಕಬ್ಬು ಬೆಳೆಗಾರ ಸಂಘ ಇವರು ಮಾತನಾಡಿ, ಯಾಂತ್ರೀಕೃತ ಕಬ್ಬು ಕಟಾವಿನ ವೆಚ್ಚವು ಕಾರ್ಮಿಕರ ಕಟಾವಿನ ವೆಚ್ಚಕ್ಕಿಂತ ಕಡಿಮೆಯಾಗಬೇಕು ಎಂದು ಮಂಡಿಸಿದರು.

ಮೇಲೆ ತಿಳಿಸಿದ ಸಾಧಕ-ಬಾಧಕಗಳನ್ನು ಅವಲೋಕಿಸಿ ಮಾತನಾಡಿದ ಮಾನ್ಯ ಸಕ್ಕರೆ ಸಚಿವರು 2023-24 ನೇ ಹಂಗಾಮಿಗೆ ಕಬ್ಬು ಕಟಾವು ಮತ್ತು ಸಾಗಾಣಿಕೆಯ ವೆಚ್ಚದ ವಿವರಗಳನ್ನು ವೈಜ್ಞಾನಿಕ ರೀತಿಯಲ್ಲಿ ಮತ್ತು ಕಾರ್ಖಾನೆಗಳಿಗೆ ಸದರಿ ಮಾರ್ಗಸೂಚಿಗಳನ್ನು ಅಳವಡಿಸಲು ಸಹಾಯವಾಗುವ ರೀತಿಯಲ್ಲಿ ತಯಾರಿಸಲಾಗಿದೆ ಎಂದು ಹೇಳಿ ಸದರಿ ಮಾರ್ಗಸೂಚಿಗಳಿಂದ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವು ರೈತರಿಗೆ ಪ್ರತಿಕೂಲ ಪರಿಣಾಮವಾಗದಂತೆ ಅನುಕೂಲಕರವಾಗಿ ಸಕ್ಕರೆ ಕಾರ್ಖಾನೆಗಳು ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಗರಿಷ್ಠ ವೆಚ್ಚವನ್ನು ಮೀರದಂತೆ ಹತೋಟಿಯಲ್ಲಿ ಇಡಲು ಸಾಧ್ಯವಿದೆ ಎಂದರು. ಆದರೆ ಯಾಂತ್ರೀಕೃತ ಕಬ್ಬು ಕಟಾವಿನ ಮತ್ತು ಸಾಗಾಣಿಕೆ ವೆಚ್ಚಕ್ಕೆ ಸಂಬಂಧಿಸಿದಂತೆ ದಿನಾಂಕ:06.11.2023 ರಂದು ನಡೆದ ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿಯು ಅನುಮೋದನೆಗಾಗಿ ಸಲ್ಲಿಸಿದ್ದ ಮಾರ್ಗಸೂಚಿಗಳಲ್ಲಿ ಯಾಂತ್ರೀಕೃತ ಕಬ್ಬು ಕಟಾವಿಗೆ ಪ್ರಸ್ತಾಪಿಸಿದ ರೂ.100/- ರಿಂದ ರೂ.150/- ಗಳ ಹೆಚ್ಚಿನ ದರವನ್ನು ರೈತರ ಒಪ್ಪಿಗೆ ಮೇರೆಗೆ ಪಡೆಯುವುದನ್ನು ಹೊರುತಪಡಿಸಿ ಉಳಿದ ಎಲ್ಲಾ ಮಾರ್ಗಸೂಚಿಗಳನ್ನು ಅನುಮೋದಿಸಿ ಸನ್ 2023-24 ನೇ ಸಾಲಿಗೆ ಅನ್ವಯವಾಗುವಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಸೂಚಿಸುವಂತೆ ಸಕ್ಕರೆ ಇಲಾಖೆಗೆ ತಿಳಿಸಿದರು.

<u>ನಿರ್ಣಯ</u>: ಸನ್ 2023-24 ನೇ ಕಬ್ಬು ನುರಿಸುವ ಹಂಗಾಮಿಗೆ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಮಾರ್ಗಸೂಚಿಯನ್ನು ಹೊರಡಿಸುವುದು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

ವಿಷಯ 6: ರಾಜ್ಯದಲ್ಲಿ ಕಬ್ಬಿನ ತೂಕ ಮತ್ತು ಸಕ್ಕರೆ ಇಳುವರಿಯಲ್ಲಿನ ಲೋಪದೋಷಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು.

ಶಿವಾನಂದ ಎಸ್ ಪಾಟೀಲ
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು

ಶ್ರೀ ದರ್ಶನ್ ಪುಟ್ಟಣ್ಣಯ್ಯ, ಶಾಸಕರು, ಮೇಲುಕೋಟೆ ವಿಧಾನ ಸಭಾಕ್ಷೇತ್ರ ಹಾಗೂ ರೈತ ಪ್ರತಿನಿಧಿಗಳು ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಕಾನೂನು ಮಾಪನಾಶಾಸ್ತ್ರ ಇಲಾಖೆಯ ಉಪ ನಿಯಂತ್ರಕರು ಮತ್ತೊಮ್ಮೆ ಕಾರ್ಖಾನೆಗಳಿಗೆ ಭೇಟಿ ನೀಡಿ, ತೂಕ ಮತ್ತು ಅಳತೆಯ ಬಗ್ಗೆ ಪರಿಶೀಲಿಸುವಂತೆ ಕೋರಿದರು. ತೂಕದಲ್ಲಿ ೨೦ ಕೆ.ಜಿ.ಗಿಂತಲೂ ಹೆಚ್ಚಿನ ವ್ಯತ್ಯಾಸ ಕಂಡು ಬಂದಲ್ಲಿ, ಸೂಕ್ತ ಕ್ರಮ ಜರುಗಿಸುವಂತೆ ಕೋರಿದರು. ಈ ದಿಸೆಯಲ್ಲಿ ಶ್ರೀ. ಬಾಬುರಾವ್ ತುಂಬಾ ಇವರು ಮಾತನಾಡಿ, ಕಬ್ಬಿನ ತೂಕದಲ್ಲಿ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಮೋಸವಾಗುತ್ತಿದೆ ಎಂದು ಹೇಳಿದರು. ವಿಶೇಷವಾಗಿ ಬೀದರ ಜಿಲ್ಲೆಯಲ್ಲಿ ಬಹುತೇಕ ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ತೂಕದಲ್ಲಿ ಮೋಸ ಮಾಡುತ್ತಿರುವುದಾಗಿ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಸಕ್ಕರೆ ಸಚಿವರಿಗೆ ಮನವಿ ಮಾಡಿಕೊಂಡರು. ಈ ದಿಸೆಯಲ್ಲಿ ಸಕ್ಕರೆ ಇಲಾಖೆಯಿಂದ ಕೈಗೊಂಡ ಕ್ರಮಗಳ ಬಗ್ಗೆ ಕೆಳಗಿನಂತೆ ವಿವರಿಸಲಾಯಿತು.

1) ಕಬ್ಬಿನ ತೂಕದಲ್ಲಿನ ನ್ಯೂನತೆಯ ಬಗ್ಗೆ ರಾಜ್ಯದ ವಿಧಾನ ಮಂಡಲದ ಅಧಿವೇಶನದಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿದೆ. ಸನ್ಮಾನ್ಯ ಸಕ್ಕರೆ ಸಚಿವರು ಸರ್ಕಾರದಿಂದ ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಭರವಸೆಯನ್ನು ನೀಡಿರುತ್ತಾರೆ.

2) ದಿನಾಂಕ 24.08.2023 ರಂದು "ಪ್ರಜಾವಾಣಿ" ಮತ್ತು "ವಿಜಯವಾಣಿ" ದಿನಪತ್ರಿಕೆಗಳಲ್ಲಿ ರಾಜ್ಯ ವ್ಯಾಪ್ತಿ ಪ್ರಕಟಣೆ ನೀಡಿ, ತೂಕದಲ್ಲಿ ಮೋಸ ಮಾಡುವ ಕಾರ್ಖಾನೆಗಳ ಬಗ್ಗೆ ಇಲಾಖೆಗೆ ದೂರು ನೀಡುವಂತೆ/ ದೂರವಾಣಿ ಮುಖಾಂತರ ಸಂಪರ್ಕಿಸುವಂತೆ ರೈತರನ್ನು ಕೋರಲಾಗಿದೆ.

3) ಈ ಸಂಬಂಧ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಸಚಿವರ ಸಮ್ಮುಖದಲ್ಲಿ ಸಭೆ ನಡೆಸಿ, ಸದರಿ ಸಭೆಯಲ್ಲಿ ಮಹಾರಾಷ್ಟ್ರ ರಾಜ್ಯದ ಮಾದರಿಯಲ್ಲಿ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ತೂಕದ ಯಂತ್ರಗಳಿಗೆ ಡಿಜಿಟಲೈಸೇಷನ್‌ಗೊಳಿಸುವ ರೂಪುರೇಷೆಗಳನ್ನು ಕಾನೂನು ಮಾಪನ ಶಾಸ್ತ್ರ ಇಲಾಖೆಯು ಕೈಗೊಳ್ಳುವಂತೆ ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದಿಂದ ಕ್ರಮ ಜರುಗಿಸಲಾಗುತ್ತಿದೆ.

4) ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿನ ಕಬ್ಬಿನ ತೂಕ ಮತ್ತು ಸಕ್ಕರೆ ಇಳುವರಿಯನ್ನು ಪರಿಶೀಲಿಸಲು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲು ಹಾಗೂ ಈ ಸಮಿತಿಯು ಕಬ್ಬು ನುರಿಸುವ ಹಂಗಾಮಿನಲ್ಲಿ ತಿಂಗಳಲ್ಲಿ ಕನಿಷ್ಟ ಎರಡು ಬಾರಿ ಯಂತ್ರಗಳ ನಿಖರತೆಯನ್ನು ಮತ್ತು ಇಳುವರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಲು

ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ದಿನಾಂಕ 09.11.2023 ರಂದು ಸಕ್ಕರೆ ನಿರ್ದೇಶನಾಲಯದಿಂದ ಸೂಚನೆ ನೀಡಲಾಗಿದೆ.

ಮಾನ್ಯ ಸಕ್ಕರೆ ಸಚಿವರು ಮಾತನಾಡಿ, ಸಹಾಯಕ ನಿಯಂತ್ರಕರು, ಕಾನೂನು ಮಾಪನಾಶಾಸ್ತ್ರ ಇವರನ್ನೊಳಗೊಂಡ ತಂಡ ಕಾರ್ಖಾನೆಗಳಿಗೆ ದಿಢೀರ್ ಭೇಟಿ ನೀಡಿ, ಕಬ್ಬು ಸಾಗಿಸುತ್ತಿರುವ ವಾಹನವನ್ನು ಬೇರೊಂದು ತೂಕದ ಯಂತ್ರದಲ್ಲಿ ತೂಕ ಮಾಡಿಸಿ, ನಂತರ ಸಕ್ಕರೆ ಕಾರ್ಖಾನೆಯ ತೂಕದ ಯಂತ್ರದಲ್ಲಿ ತೂಕ ಮಾಡಿಸಿ, ವ್ಯತ್ಯಾಸ ಕಂಡು ಬಂದಲ್ಲಿ ಕೂಡಲೇ ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ನಿಯಂತ್ರಕರು, ಕಾನೂನು ಮಾಪನಾಶಾಸ್ತ್ರ ಇಲಾಖೆ ಇವರಿಗೆ ಸೂಚಿಸುವುದರ ಜೊತೆಗೆ ಈಗಾಗಲೇ ದಿನಾಂಕ: 19.10.2023 ರಂದು ಜರುಗಿದ ಸಭೆಯಲ್ಲಿ ತೀರ್ಮಾನಿಸಿದಂತೆ ಕಡ್ಡಾಯವಾಗಿ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಮಹಾರಾಷ್ಟ್ರ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಅನಲಾಗ್ ತೂಕದ ಯಂತ್ರದ ಬದಲಾಗಿ, ಡಿಜಿಟಲ್ ತೂಕದ ಯಂತ್ರಗಳನ್ನು ಅಳವಡಿಸಿ ವಿವರವಾದ ಎಸ್.ಓ.ಪಿ. ಯನ್ನು ತಯಾರಿಸಿ ಸಕ್ಕರೆ ಕಾರ್ಖಾನೆಗಳು ಸದರಿ ಎಸ್.ಓ.ಪಿ. ಯನ್ನು ಪಾಲಿಸುವ ಕ್ರಮ ಜರುಗಿಸುವಂತೆ ಸೂಚಿಸಿದರು.

<u>ನಿರ್ಣಯ:</u> ಸನ್ 2023-24 ನೇ ಕಬ್ಬು ನುರಿಸುವ ಹಂಗಾಮಿನಿಂದ ತಕ್ಷಣದಿಂದ ಜಾರಿಗೆ ಬರುವಂತೆ ಕಡ್ಡಾಯವಾಗಿ ಎಸ್.ಓ.ಪಿ. ಯನ್ನು ಕಾನೂನು ಮಾಪನಾಶಾಸ್ತ್ರ ಇಲಾಖೆ ಇವರು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಅನುಷ್ಠಾನಗೊಳಿಸುವುದು.

ಕ್ರಮ: ನಿಯಂತ್ರಕರು, ಕಾನೂನು ಮಾಪನಾಶಾಸ್ತ್ರ ಇಲಾಖೆ.

ವಿಷಯ 7: 2022-23ನೇ ಹಂಗಾಮಿನಲ್ಲಿ ಪ್ರತಿ ಮೆ. ಟನ್‌ಗೆ ಎಫ್‌ಆರ್‌ಪಿ ದರಕ್ಕೂ ಮೇಲ್ಪಟ್ಟು ರೂ.100/- ರಂತೆ ಮತ್ತು ಎಥನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ರೂ.50/- ಹೀಗೆ ಒಟ್ಟು ರೂ.150/- ಗಳನ್ನು ಪಾವತಿಸುವಂತೆ ರಾಜ್ಯ ಸರ್ಕಾರವು ಹೊರಡಿಸಿರುವ ಆದೇಶಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 06.10.2023 ರಂದು ನೀಡಿರುವ ಆದೇಶದ ವಿವರಗಳನ್ನು ಚರ್ಚಿಸುವ ಕುರಿತು.

- ಈ ವಿಷಯದ ಕುರಿತು ದಿನಾಂಕ 09.11.2022 ರಂದು ರಾಜ್ಯ ಸರ್ಕಾರವು ತಾಂತ್ರಿಕ ಸಮಿತಿಯನ್ನು ರಚಿಸಿ, ಕೇಂದ್ರ ಸರ್ಕಾರವು ಘೋಷಿಸಿದ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಹೆಚ್ಚಿಗೆ ಕಬ್ಬಿನ ದರವನ್ನು ಸಕ್ಕರೆ, ಎಥನಾಲ್ ಮತ್ತು ಉಪ

ಶಿವಾನಂದ ಎಸ್. ಪಾಟೀಲ
ಆಯುಕ್ತರು ಆಹಾರ ಮತ್ತು ಸಕ್ಕರೆ ಇಲಾಖೆ
ಸಕ್ಕರೆ ಸಚಿವರು

ಉತ್ಪನ್ನಗಳನ್ನು ಪರಿಗಣಿಸಿ ಸದರಿ ಸಮಿತಿಯು ವರದಿಯನ್ನು ದಿನಾಂಕ:17.11.2022 ರಂದು ಸಲ್ಲಿಸಿರುತ್ತದೆ. ಮುಂದುವರೆದು, 2022-23ನೇ ಹಂಗಾಮಿನಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ಎಫ್‌ಆರ್‌ಪಿ ದರಕ್ಕೂ ಮೇಲ್ಪಟ್ಟು ಹೆಚ್ಚುವರಿ ಕಬ್ಬಿನ ಬಿಲ್ಲನ್ನು ಘೋಷಿಸಬೇಕೆಂದು ಚಳುವಳಿ ನಡೆಸಿದ ಹಿನ್ನೆಲೆಯಲ್ಲಿ ಸರ್ಕಾರವು ದಿನಾಂಕ 18.11.2022 ರಂದು ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಿ, ಸದರಿ ಭಾಗದ ಎಥನಾಲ್ ಹೊಂದಿದ ಸಕ್ಕರೆ ಕಾರ್ಖಾನೆಗಳು ಪ್ರತಿ ಮೆ.ಟನ್ ಕಬ್ಬಿಗೆ ರೂ.2850/- ರಂತೆ ನಿಗದಿಪಡಿಸುವುದು ಸೂಕ್ತವೆಂದು ಭಾವಿಸಿ, ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಜಾರಿಗೊಳಿಸಲು ಸೂಚಿಸಲಾಗಿತ್ತು. ಮುಂದುವರೆದು ತದನಂತರ ದಿನಾಂಕ 05.12.2022 ರಂದು ನಡೆದ ಕಬ್ಬು ನಿಯಂತ್ರಣ ಮಂಡಳಿಯ ಸಭೆಯಲ್ಲಿ ನಿರ್ಣಯಿಸಿದಂತೆ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013, ತಿದ್ದುಪಡಿ ಅಧಿನಿಯಮ 2014ರ 4(ಎ) ಪ್ರಕಾರ ಅಧಿಸೂಚನೆ ಹೊರಡಿಸಿ, ಎಥನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಪ್ರತಿ ಮೆ. ಟನ್ ಒಂದಕ್ಕೆ ಎಫ್.ಆರ್.ಪಿ. ದರದ ಮೇಲೆ ಹೆಚ್ಚುವರಿಯಾಗಿ ರೂ.50/-ನ್ನು ಪಾವತಿಸುವಂತೆ ಸೂಚಿಸಲಾಗಿತ್ತು. ನಂತರ ತಾಂತ್ರಿಕ ಸಮಿತಿಯ ಅಂಕಿ-ಅಂಶಗಳ ಆಧಾರದ ಮೇಲೆ ಮತ್ತು ಕಾರ್ಖಾನೆಗಳು ಎಥನಾಲ್ ಒಳಗೊಂಡಂತೆ ಇತರೆ ಉಪ ಉತ್ಪನ್ನಗಳ ಉತ್ಪಾದನೆಯಿಂದ ಪಡೆಯಬಹುದಾದ ಹೆಚ್ಚಿನ ಲಾಭಾಂಶವನ್ನು ಪರಿಗಣಿಸಿ, ರಾಜ್ಯದ ಎಲ್ಲಾ ಕಾರ್ಖಾನೆಗಳು ಪ್ರತಿ ಮೆ. ಟನ್ನಿಗೆ ರೂ.100/-ಅನ್ನು ಕೇಂದ್ರ ಸರ್ಕಾರವು ಘೋಷಿಸಿದ ನ್ಯಾಯಯುತ ಮತ್ತು ಲಾಭದಾಯಕ ದರ (ಎಫ್.ಆರ್.ಪಿ)ದ ಮೇಲೆ ಹೆಚ್ಚುವರಿಯಾಗಿ ನೀಡಲು ದಿನಾಂಕ 29.12.2022 ರಂದು ಆದೇಶಿಸಲಾಗಿದೆ.

- ಸದರಿ ತೀರ್ಮಾನಗಳನ್ನು ಅಂದರೆ ದಿನಾಂಕ 09.11.2022 ರಂದು ರಚಿಸಿದ ತಾಂತ್ರಿಕ ಸಮಿತಿ ಹಾಗೂ ದಿನಾಂಕ 18.11.2022 ರಂದು ಹೊರಡಿಸಿದ ಆದೇಶಗಳನ್ನು ಪ್ರಶ್ನಿಸಿ ದಿನಾಂಕ 26.11.2022 ರಂದು ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ (SISMA) ಮತ್ತು ಇತರರು ರಿಟ್ ಅರ್ಜಿಯನ್ನು ಸಲ್ಲಿಸಿದ ಕಾರಣ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ದಿನಾಂಕ 30.11.2022 ರಂದು ಮಧ್ಯಂತರ ತಡೆಯಾಜ್ಞೆ ನೀಡಿ, ಕೇಂದ್ರ ಸರ್ಕಾರವು ಘೋಷಿಸಿದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ)ಗಿಂತ ಹೆಚ್ಚಿನ ಬೆಲೆಯನ್ನು ಘೋಷಿಸಬಾರದೆಂದು ಹಾಗೂ ಸದರಿ ವಿಷಯಕ್ಕೆ

ಸಂಬಂಧಿಸಿದಂತೆ ಸರ್ಕಾರವು ಯಾವುದೇ ದುಡುಕಿನ ಕ್ರಮಗಳನ್ನು ಜರುಗಿಸಬಾರದೆಂದು ಆದೇಶ ಹೊರಡಿಸಲಾಗಿದೆ. ಆದರೆ ಕಬ್ಬು ಬೆಳೆಗಾರರು ಫ್ರೀಡಂ ಪಾರ್ಕ್ ನಲ್ಲಿ ಅಹೋರಾತ್ರಿ ಧರಣಿ ಹಾಗೂ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆಸಿ, ಹೆಚ್ಚುವರಿ ಕಬ್ಬಿನ ದರವನ್ನು ಘೋಷಿಸುವಂತೆ ಒತ್ತಾಯಿಸಿದ ಹಿನ್ನೆಲೆಯಲ್ಲಿ ಸರ್ಕಾರದಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 16.01.2023 ರಂದು ಕಂಡಿಕಾವಾರು ಷರಾವನ್ನು ಸಲ್ಲಿಸಲಾಗಿದೆ.

- ಈ ವಿಷಯ ಸಂಬಂಧ ದಿನಾಂಕ 06.10.2023 ರಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ತೀರ್ಮಾನದ ಪ್ರಮುಖ ಅಂಶಗಳು ಕೆಳಗಿನಂತೆ ಇವೆ:

1. ದಿನಾಂಕ 05.10.2023 ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು (ಪ್ರಭಾರ), ಬೆಂಗಳೂರು ಇವರು ಸಲ್ಲಿಸಿರುವ ಅಫಿಡವಿಟ್ ಕಡೆಗೆ ಅಡಿಷನಲ್ ಅಡ್ವೊಕೇಟ್ ಜನರಲ್ ರವರು ಮಾನ್ಯ ನ್ಯಾಯಾಲಯದ ಗಮನ ಸೆಳೆದು, ಕಬ್ಬಿಗೆ 2022-23ನೇ ಸಾಲಿಗೆ ಆಕ್ಷೇಪಿತ ಹೆಚ್ಚುವರಿ ದರವನ್ನು ನಿಗದಿಪಡಿಸಿದಾಗ 2022-23ನೇ ಹಂಗಾಮು ಚಾಲ್ತಿಯಲ್ಲಿತ್ತು. ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುವಾಗಲೇ 2022-23ನೇ ಹಂಗಾಮು ಮುಕ್ತಾಯಗೊಂಡಿದ್ದು, ವರ್ಷಾಂತ್ಯದ ಆದಾಯ ಪ್ರಾಪ್ತಿ ವಿವರಗಳು ಸಕ್ಕರೆ ಕಾರ್ಖಾನೆಗಳ ಬಳಿ ಇರುತ್ತದೆ. ಆದ್ದರಿಂದ 2022-23ನೇ ಸಾಲಿನ ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸುವಂತೆ ರಾಜ್ಯದ ಎಲ್ಲಾ 74 ಕಾರ್ಯನಿರತ ಸಕ್ಕರೆ ಕಾರ್ಖಾನೆಗಳಿಗೆ ಪತ್ರ ಬರೆಯಲಾಗಿತ್ತು. ಇದಕ್ಕೆ 35 ಕಾರ್ಖಾನೆಗಳು ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸಿದ್ದು, ಮಾಹಿತಿ ಸಲ್ಲಿಸದ ಉಳಿದ ಕಾರ್ಖಾನೆಗಳಿಗೆ ಸದರಿ ಮಾಹಿತಿಯನ್ನು ಶೀಘ್ರವಾಗಿ ಪಡೆಯುವಂತೆ ಸೂಚನೆ ನೀಡಲಾಗಿದೆ.
2. ಪ್ರತಿವಾದಿ ರಾಜ್ಯವು ಉಳಿದ ಸಕ್ಕರೆ ಕಾರ್ಖಾನೆಗಳು ಇನ್ನೊಂದು ವಾರದೊಳಗೆ ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸಬಹುದೆಂದು ನಿರೀಕ್ಷಿಸುತ್ತಾ, ಆದಾಯ ಪ್ರಾಪ್ತಿ ಬಗ್ಗೆ ಸೆಕ್ಷನ್ 4-ಸಿ ಎಕ್ಸ್‌ಪರ್ಟ್ ಕಮಿಟಿಯವರು ಆದಷ್ಟು ಶೀಘ್ರವಾಗಿ ವರದಿ ನೀಡಲು ಅನುವಾಗುವಂತೆ ರಿಟ್ ಅರ್ಜಿ ಸಂಖ್ಯೆ 23741/2022ರ ಒಂದನೇ ಅರ್ಜಿದಾರರಾದ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ ರವರಿಗೆ ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸಲು ನಿರ್ದೇಶಿಸುವಂತೆ ಕೋರಿದ್ದರು.

ಶಿವಾನಂದ ಎಸ್ ಪಾಟೀಲ
ಜಿಲ್ಲಾ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು

3. ರೈತ ಪ್ರತಿನಿಧಿಗಳ ಪರ ವಕೀಲರು ಕಬ್ಬು ಬೆಳೆಗಾರರು ಸಂಕಟದಲ್ಲಿರುವುದರಿಂದ ಸದರಿ ವಿಷಯದ ಕುರಿತು ಸೆಕ್ಷನ್ 4-ಸಿ ಎಕ್ಸ್‌ಪರ್ಟ್ ಕಮಿಟಿಯು ಕಬ್ಬಿಗೆ ಹೆಚ್ಚುವರಿ ದರ ನಿಗದಿಗೊಳಿಸುವ ವಿಷಯವಾಗಿ ನಿರ್ಧಾರ ತೆಗೆದುಕೊಳ್ಳುವರೆಗೆ ಪ್ರಕರಣವನ್ನು ಇತ್ಯರ್ಥಗೊಳಿಸದೆ ಬಾಕಿಯಿರಿಸಬೇಕೆಂದು ಕೋರಿದ್ದಾರೆ.

4. ಈ ಹಿನ್ನೆಲೆಯಲ್ಲಿ ವಾದ-ಪ್ರತಿವಾದವನ್ನು ಆಲಿಸಿದ ನ್ಯಾಯಾಲಯವು ಸನ್ 2022-23ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ 74 ಸಕ್ಕರೆ ಕಾರ್ಖಾನೆಗಳ ಪೈಕಿ 34 ಕಾರ್ಖಾನೆಗಳು ಮಾತ್ರ ಆದಾಯ ಪ್ರಾಪ್ತಿ ಅಂಕಿ-ಅಂಶಗಳ ಮಾಹಿತಿಯನ್ನು ಸಲ್ಲಿಸಿರುತ್ತವೆ. ಇನ್ನುಳಿದ ಕಾರ್ಖಾನೆಗಳು ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಮಾಹಿತಿ ಸಲ್ಲಿಸದೆ ಇರುವ ಕಾರ್ಖಾನೆಗಳು 2 ವಾರಗಳ ಒಳಗಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸುವಂತೆ ನಿರ್ದೇಶನ ನೀಡಿ, ಸದರಿ ಪ್ರಕರಣವನ್ನು ವಿಚಾರಣೆಗೆ ಮುಕ್ತವಿರಿಸಿ, ಈಗಾಗಲೇ ಹೆಚ್ಚುವರಿಯಾಗಿ ಕಬ್ಬಿನ ಬಿಲ್ಲನ್ನು ಪಾವತಿಸಿದ ಕೆಲವು ಕಾರ್ಖಾನೆಗಳನ್ನು ಹೊರತುಪಡಿಸಿ ಇದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ವಿಚಾರಣೆಗೆ ಮುಕ್ತವಾಗಿರಿಸಿ, ರಿಟ್ ಅರ್ಜಿಗಳನ್ನು ವಿಲೇಗೊಳಿಸಲಾಗಿದೆ.

5. ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 06.11.2023 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದೆ. ಈ ಸಂಬಂಧ 34 ಸಕ್ಕರೆ ಕಾರ್ಖಾನೆಗಳು ಸಲ್ಲಿಸಿದ ಆದಾಯ ಪ್ರಾಪ್ತಿಯ ವಿಶ್ಲೇಷಣೆಯನ್ನು ಮಾಡಲಾಗಿದ್ದು, ಇನ್ನುಳಿದ 40 ಕಾರ್ಖಾನೆಗಳು ಮಾಹಿತಿಯನ್ನು ಸಲ್ಲಿಸಿದ ನಂತರ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ ಆದಾಯ ಪ್ರಾಪ್ತಿಯ ವಿಶ್ಲೇಷಣೆಯನ್ನು ಮಾಡುವುದು ಸೂಕ್ತವಿರುತ್ತದೆ. ಈ ಮಧ್ಯೆ ಇಲ್ಲಿಯವರೆಗೆ ಸಕ್ಕರೆ ಇಲಾಖೆಯು 69 ಸಕ್ಕರೆ ಕಾರ್ಖಾನೆಗಳಿಂದ ಮಾಹಿತಿಯನ್ನು ಪಡೆಯಲಾಗಿದ್ದು, ಇನ್ನುಳಿದ ಕೆಳಗೆ ಕಾಣಿಸಿದ 5 ಕಾರ್ಖಾನೆಗಳಿಂದ ಮಾಹಿತಿ ಪಡೆಯುವುದು ಬಾಕಿ ಇರುತ್ತದೆ ಎಂದು ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಸಭೆಗೆ ತಿಳಿಸಿದರು.

(1) ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನಾನಗರ

(2) ಜಮಖಂಡಿ ಶುಗರ್ಸ್ ಲಿ., ನಾದ್ ಕೆ.ಡಿ.

(3) ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ

(4) ಶಿರಗುಪ್ಪಿ ಶುಗರ್ಸ್ ಲಿ., ಕಾಗವಾಡ

(೫) ಸೌಭಾಗ್ಯಲಕ್ಷ್ಮಿ ಶುಗರ್ಸ್ ಅ. ಹಿರೇನಂದಿ

ಈ ಹಿನ್ನೆಲೆಯಲ್ಲಿ ಸಭೆಯಲ್ಲಿ ಭಾಗವಹಿಸಿದ ಕಬ್ಬು ನಿಯಂತ್ರಣ ಮಂಡಳ ಸದಸ್ಯರು ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

- ಶ್ರೀ. ಕಿಶನ್, ರೈತಪ್ರತಿನಿಧಿ (ವಕೀಲರು) ಇವರು ಮಾತನಾಡಿ, ಸದರಿ ವಿಷಯವು ನ್ಯಾಯಾಲಯದಲ್ಲಿ ಇರುವುದರಿಂದ ಸರ್ಕಾರದ ವಕೀಲರು ರೈತರಿಗೆ ಹೆಚ್ಚುವರಿ ಹಣ ಕೊಡಿಸುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣ ಸೂಕ್ತ ದಾಖಲೆಗಳನ್ನು ಒದಗಿಸುವಲ್ಲಿ ವಿಫಲರಾಗಿರುವುದಾಗಿ ಹೇಳಿದರು. ಮುಂದುವರೆದು, ರೂ.೨೦.೦೦ ರೈತರಿಗೆ ನೀಡಲು ಈಗಾಗಲೇ 4ಸಿ ಸಮಿತಿ ಅನುಮೋದನೆಯನ್ನು ಪಡೆಯಲಾಗಿದೆ. ಅದರಂತೆ ಕಬ್ಬು ನಿಯಂತ್ರಣ ಮಂಡಳಯಲ್ಲಿಯೂ ಕೂಡ ಅನುಮೋದನೆ ನೀಡಲಾಗಿದ್ದು ಸದರಿ ದರವನ್ನು ಈಗಾಗಲೇ ನೀಡಬೇಕಾಗಿತ್ತು ಎಂದು ಹೇಳಿದರು. ಆದ್ದರಿಂದ ನಿರ್ದಿಷ್ಟ ಕಾಲಮಿತಿಯೊಳಗೆ (1 ರಿಂದ 2 ವಾರದೊಳಗಾಗಿ) 4-ಸಿ ಸಮಿತಿಯಲ್ಲಿ ಮಂಡಿಸಿ ನಂತರ ಕಬ್ಬು ನಿಯಂತ್ರಣ ಮಂಡಳಯಲ್ಲಿ ಅನುಮೋದನೆ ಪಡೆದು ಆದಷ್ಟುಬೇಗ ರೂ.೫೦/- ಪ್ರತಿ ಮೆ.ಟನ್‌ಗೆ ನೀಡಬೇಕೆಂದು ಮಾನ್ಯ ಸಕ್ಕರೆ ಸಚಿವರಲ್ಲಿ ಮನವಿ ಮಾಡಿಕೊಂಡರು.
- ರೈತ ಮುಖಂಡರಾದ ಶ್ರೀ. ಬಡಗಲಪುರ ನಾಗೇಂದ್ರ ಇವರು ಮಾತನಾಡಿ, ಪ್ರತಿ ಟನ್ ಕಬ್ಬಿಗೆ ಹೆಚ್ಚುವರಿ ರೂ.೫೦/- ಮತ್ತು ರೂ.೧೦೦/- ಗಳನ್ನು ಮಾನ್ಯ ಸಕ್ಕರೆ ಸಚಿವರು ಆಸಕ್ತಿ ವಹಿಸಿ ಆದಷ್ಟು ತುರ್ತಾಗಿ ನೀಡಲು ಕ್ರಮಕೈಗೊಳ್ಳುವಂತೆ ಕೋರಿದರು.
- ಮಾನ್ಯ ಕೃಷಿ ಆಯುಕ್ತರು ಮಾತನಾಡಿ, ನ್ಯಾಯಾಲಯದ ಆದೇಶವನ್ನು ವಿವರಿಸಿದರು.
- ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಮಾತನಾಡಿ, ಕಾರ್ಖಾನೆಗಳು ಈಗಾಗಲೇ ಎಫ್.ಆರ್.ಪಿ. ದರಕ್ಕಿಂತ ಹೆಚ್ಚಿನ ದರಗಳನ್ನು ನೀಡುತ್ತಿರುವುದಾಗಿ ತಿಳಿಸಿ ನ್ಯಾಯಾಲಯದ ಆದೇಶಗಳನ್ನು ಪಾಲಿಸುವುದಾಗಿ ತಿಳಿಸಿದರು.
- ಮಾನ್ಯ ಸಕ್ಕರೆ ಸಚಿವರು ಮಾತನಾಡಿ, ಇದು ಕಾನೂನಾತ್ಮಕ ಹಾಗೂ ಗೌರವ ಉಚ್ಚನ್ಯಾಯಾಲಯದಲ್ಲಿರುವ ವಿಷಯವಾಗಿರುವುದರಿಂದ ಇದನ್ನು ಆತುರದಿಂದ ಕ್ರಮ ಜರುಗಿಸುವುದು ಸೂಕ್ತವಲ್ಲವೆಂದು ತಿಳಿಸಿದರು. ತದನಂತರ ಸಭೆಯಲ್ಲಿ

ಶಿವಾನಂದ ಎಸ್ ಪಾಟೀಲ
ಜಿಪಂ. ಕಬ್ಬು ಅಭಿವೃದ್ಧಿ ಮತ್ತು
ಕೃಷಿ ಮಾರುಕಟ್ಟೆ ಸಚಿವರು

ಸದರಿ ವಿಷಯದ ಕುರಿತು ಅನೇಕ ಸಾಧಕ-ಬಾಧಕಗಳನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

<u>ನಿರ್ಣಯ:</u>

1. ಸನ್ 2022-23 ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನ ಆದಾಯ ಪ್ರಾಪ್ತಿ ವಿವರಗಳನ್ನು ಸಲ್ಲಿಸದೆ ಇರುವ ಸಕ್ಕರೆ ಕಾರ್ಖಾನೆಗಳಿಗೆ ತಕ್ಷಣವೇ ಜಿಲ್ಲಾಧಿಕಾರಿಗಳ ಮುಖಾಂತರ ನೋಟೀಸು ಜಾರಿಗೊಳಿಸಿ ಮಾಹಿತಿಯನ್ನು ಪಡೆಯುವುದು.
2. ತದನಂತರ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಸಂಗ್ರಹಿಸಿದ ಆದಾಯ ಪ್ರಾಪ್ತಿ ವಿವರಗಳನ್ನು ಕರ್ನಾಟಕ ಕಬ್ಬು (ಖರೀದಿ ಮತ್ತು ಸಾಗಾಣಿಕೆ ನಿಯಂತ್ರಣ) ತಿದ್ದುಪಡಿ 2014 ರ 4-ಸಿ ಸಮಿತಿಯಲ್ಲಿ ಮಂಡಿಸಿ, ಸದರಿ ಸಮಿತಿಯ ವರದಿಯನ್ನು ಆಧರಿಸಿ ಅವಶ್ಯವಿರುವ ಕಾನೂನಾತ್ಮಕ ಕ್ರಮ ಜರುಗಿಸುವುದು.
3. ಸಕ್ಕರೆ ಇಲಾಖೆಗೆ ಸಂಬಂಧಪಟ್ಟ ಹಲವಾರು ಕಾನೂನಾತ್ಮಕ ವಿಷಯಗಳನ್ನು ನಿರ್ವಹಿಸಲು ನುರಿತ ಕಾನೂನು ತಜ್ಞರನ್ನು ನೇಮಿಸಿಕೊಂಡು ಅವರ ಸಲಹೆ ಪಡೆಯುವುದು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

ಇತರ ನಿರ್ಣಯಗಳು:

1. ನಾಮನಿರ್ದೇಶಿತ ರೈತ ಪ್ರತಿನಿಧಿ ಸದಸ್ಯರಿಗೆ ಕಬ್ಬು ನಿಯಂತ್ರಣ ಮಂಡಳಿಯ ಸದಸ್ಯತ್ವದ ಗುರುತಿನ ಚೀಟಿಯನ್ನು ನೀಡುವುದು.
2. ಕಬ್ಬು ನಿಯಂತ್ರಣ ಮಂಡಳಿ ಸಭೆಯನ್ನು ಕನಿಷ್ಠ ಮೂರು ತಿಂಗಳಿಗೆ ಒಮ್ಮೆಯಾದರೂ ನಡೆಸಲು ಕ್ರಮವಹಿಸುವುದು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

(ಶಿವಾನಂದ ಎಸ್. ಪಾಟೀಲ್)
ಶಿವಾನಂದ ಎಸ್ ಪಾಟೀಲ
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ - 1B

ದಿನಾಂಕ: 29.06.2024 ರಂದು ಮಧ್ಯಾಹ್ನ 02.00 ಗಂಟೆಗೆ ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು – ಕಬ್ಬು ನಿಯಂತ್ರಣ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮಾರಾಟ ಮಂಡಳಿಯ ಸಭಾಂಗಣ, ಬೆಂಗಳೂರಿನಲ್ಲಿ ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಯ ನಡವಳಿಗಳು.

ಸಭೆಗೆ ಹಾಜರಿದ್ದವರ ಪಟ್ಟಿ ಲಗತ್ತಿಸಿದೆ

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡಿ, ಸನ್ಮಾನ್ಯ ಶ್ರೀ. ಶಿವಾನಂದ ಎಸ್. ಪಾಟೀಲ್, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರನ್ನು ಸಭೆಗೆ ಆಹ್ವಾನಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕಾರ್ಯಸೂಚಿಯಂತೆ ಸಭೆಯನ್ನು ಜರುಗಿಸುವಂತೆ ಕೋರಿದರು. ಅದರಂತೆ ಕಬ್ಬು ನಿಯಂತ್ರಣ ಮಂಡಳಿ ಸಭೆಗೆ ಆಗಮಿಸಿದ ಸರ್ಕಾರದ ಎಲ್ಲಾ ರೈತ ಪ್ರತಿನಿಧಿ ಸದಸ್ಯರು, ಅಧಿಕಾರಿಗಳು ಹಾಗೂ ವಿಶೇಷ ಆಹ್ವಾನಿತರು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಮುಂದುವರೆದು, ಸದರಿ ಸಭೆಯಲ್ಲಿ ಭಾಗವಹಿಸಿದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಬೆಂಗಳೂರು ಡಾ॥ ಡಿಸೋಜಾ ಇವರು ದಿನಾಂಕ 30.06.2024 ರಂದು ವಯೋನಿವೃತ್ತಿ ಹೊಂದುತ್ತಿರುವುದರಿಂದ ಅವರು ಸಕ್ಕರೆ ಇಲಾಖೆಗೆ ನೀಡಿರುವ ಸೇವೆಯನ್ನು ಶ್ಲಾಘಿಸಿ ಅವರನ್ನು ಸಭೆಯಲ್ಲಿ ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಇವರು ಇಲಾಖೆಯ ಪರವಾಗಿ ಸನ್ಮಾನ ಮಾಡಬೇಕೆಂದು ವಿನಂತಿಸಿಕೊಂಡರು. ನಂತರ ಮಾತನಾಡಿದ ಸನ್ಮಾನ್ಯ ಸಚಿವರು ಡಾ॥ ಡಿಸೋಜಾ ಇವರು ಸಕ್ಕರೆ ಇಲಾಖೆ ಮತ್ತು ಜವಳಿ ಖಾತೆಗೆ ಸಲ್ಲಿಸಿರುವ ಸೇವೆಯು ಅತೀ ಅಮೂಲ್ಯವಾಗಿರುತ್ತದೆ. ಅವರು ಯಾವುದೇ ಕಠಿಣ ವಿಷಯಗಳನ್ನು ಕೂಡ ನಿಯಮಾನುಸಾರವಾಗಿ ಪರಿಶೀಲಿಸಿ ಅವುಗಳನ್ನು ಪರಿಹರಿಸಲು ಸೂಕ್ತ ಮಾರ್ಗದರ್ಶನವನ್ನು ನೀಡಿ ಕ್ರಮ ಜರುಗಿಸುತ್ತಿದ್ದರು. ಇದರಿಂದ ಸಕ್ಕರೆ ಹಾಗೂ ಜವಳಿ ಇಲಾಖೆಗಳ ಅಭಿವೃದ್ಧಿ ಹಾಗೂ ಹೊಸ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗಿರುತ್ತದೆ ಎಂದು ಹೇಳಿ, ಅವರ ವಯೋನಿವೃತ್ತಿಯ ಜೀವನವು ಸುಖಮಯವಾಗಿ ಸಾಗಲಿ ಹಾಗೂ ನಂತರದ ದಿನಗಳಲ್ಲಿ ಅವರ ಸೇವೆಯನ್ನು ಇಲಾಖೆಯು ಕೂಡ ಪಡೆಯಬಹುದಾಗಿದೆಯೆಂದು ಅಭಿಪ್ರಾಯ ಪಟ್ಟರು. ಈ ದಿಶೆಯಲ್ಲಿ ಮಾತನಾಡಿದ ಡಾ॥ ಡಿಸೋಜಾ ಇವರು ಸನ್ಮಾನ್ಯ ಸಚಿವರ ಅಭೂತಪೂರ್ವವಾದ ಅನುಭವ ಹಾಗೂ ಅವರು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಕಾರ್ಯನಿರ್ವಹಿಸಲು ತಮಗೆ ಒದಗಿಬಂದ ವಿಶೇಷ ಸದಾವಕಾಶವೆಂದು ಹೇಳಿದರು. ಮುಂದುವರೆದು ಅವರು ಮಾನ್ಯ ಸಚಿವರು ನೀಡುತ್ತಿರುವ ಮಾರ್ಗದರ್ಶನ ಹಾಗೂ ಇತರ ಉದ್ದೇಶಗಳು ಕಬ್ಬು ಬೆಳೆದ ರೈತರ ಹಾಗೂ ಕಾರ್ಖಾನೆಗಳ ಹಿತದೃಷ್ಟಿಯಿಂದ ಅತ್ಯಂತ ಉಪಯೋಗಕಾರಿ ಆಗಿರುತ್ತದೆ ಎಂದು ಹೇಳಿದರು. ಈ ದಿಶೆಯಲ್ಲಿ ಇಲಾಖೆಯ ಎಲ್ಲ ಸಿಬ್ಬಂದಿಯವರಿಗೆ ಕೂಡ ಅವರು

ತಮ್ಮ ಧನ್ಯವಾದಗಳನ್ನು ತಿಳಿಸಿದರು. ತದನಂತರ ಸಭೆಯನ್ನು ಮಾನ್ಯ ಆಯುಕ್ತರು, ಕಬ್ಬು ಅಭಿ ೨ ಹಾಗೂ ಸಕ್ಕರೆ ನಿರ್ದೇಶಕರು ವಿಷಯಗಳ ಕಾರ್ಯಸೂಚಿಯಂತೆ ಸಭೆಗೆ ವಿಷಯಗಳನ್ನು ಮಂಡಿಸಿದರು.

1. ಸಭಾ ನೋಟಿಸು ಓದಿ ದಾಖಲಿಸಲಾಯಿತು.
2. ದಿನಾಂಕ 23.11.2023 ರ ಸಭೆಯ ನಡುವಳಿ ಹಾಗೂ ಅದರ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಯಲ್ಲಿ ದೃಢೀಕರಿಸಲಾಯಿತು.
3. ಸಕ್ಕರೆ ಇಲಾಖೆಗೆ ಸಕ್ಕರೆ ಕಾರ್ಖಾನೆಗಳಿಂದ ಅವಶ್ಯವಿರುವ ಮಾಹಿತಿಗಳನ್ನು ಕ್ರೂಢೀಕರಿಸಲು ಒಂದು ತಂತ್ರಾಂಸವನ್ನು (ಸಾಫ್ಟ್‌ವೇರ್) ಅಭಿವೃದ್ಧಿಪಡಿಸುವ ಬಗ್ಗೆ :

ಈ ನಿಮಿತ್ತ ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರದಿಂದ ಕೈಗೊಂಡ ಕ್ರಮಗಳ ಬಗ್ಗೆ ವಿವರಗಳನ್ನು ನೀಡಿದರು.

- ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯಕ್ಕೆ, ಸಕ್ಕರೆ ಕಾರ್ಖಾನೆಗಳಿಂದ ಅಗತ್ಯ ಮಾಹಿತಿಗಳಾದ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ, ಅರೆಯಲಾದ ಕಬ್ಬಿನ ಪ್ರಮಾಣ, ಉತ್ಪಾದಿಸಲಾದ ಸಕ್ಕರೆ, ಇಳುವರಿ, ಕಬ್ಬು ಬಿಲ್ಲು ಪಾವತಿ ವಿವರ, ಸಕ್ಕರೆ ಮತ್ತು ಕಾಕಂಬಿ ದಾಸ್ತಾನು ಹಾಗೂ ಇತರೆ ಉಪ ಉತ್ಪನ್ನಗಳ ವಿವರ ಇತ್ಯಾದಿಗಳನ್ನು ಸಂಗ್ರಹಿಸುವ ಮತ್ತು ನಿಗದಿತ ನಮೂನೆಗಳಲ್ಲಿ ವರದಿಗಳನ್ನು ಕ್ರೋಢೀಕರಣ ಮಾಡುವ ತಂತ್ರಾಂಶದ (Software) ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕ ಅಧಿನಿಯಮ, ಅಧಿನಿಯಮ, 1999 ಹಾಗೂ ನಿಯಮಗಳು 2000 ರನ್ವಯ ಸಕ್ಕರೆ ನಿರ್ದೇಶನಾಯಲಕ್ಕೆ ತಂತ್ರಾಂಶ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ "ಕನ್ನಡ ಪ್ರಭ" ದಿನ ಪತ್ರಿಕೆಯಲ್ಲಿ ದಿನಾಂಕ 22.07.2022 ರಂದು ಟೆಂಡರ್ ಪ್ರಕಟಣೆ ನೀಡಲಾಗಿತ್ತು.
- ಟೆಂಡರ್ ವೇಳಾ ಪಟ್ಟಿಯಂತೆ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ 30.07.2022 ಅಂತಿಮ ದಿನವೆಂದು ಮತ್ತು ದಿನಾಂಕ 01.08.2022 ರಂದು ಟೆಂಡರ್‌ಗಳನ್ನು ತೆರೆಯಲಾಗುವುದೆಂದು ದಿನಾಂಕ ನಿಗದಿಗೊಳಿಸಲಾಗಿತ್ತು. ಅದರಂತೆ ಈ ಕೆಳಕಂಡ ಟೆಂಡರ್‌ದಾರರು ನಿಗದಿತ ನಮೂನೆಯಲ್ಲಿ ದರ ಪಟ್ಟಿಯೊಂದಿಗೆ ಟೆಂಡರ್ ಅರ್ಜಿಯನ್ನು ಸಲ್ಲಿಸಿದ್ದರು.
    1. ಮೆ॥ ದೇವನೆಟ್ ಸಲ್ಯೂಷನ್ಸ್, ಪುಣೆ
    2. ಸಾಯಿಟೆಕ್ ಸಾಫ್ಟ್‌ವೇರ್ ಪ್ರೈ.ಲಿ., ಬೆಂಗಳೂರು.
    3. ಮೆ॥ ಪಿಕ್ಸೆಲ್ ಸಾಫ್ಟ್‌ವೇರ್ ಪ್ರೈ.ಲಿ., ಬೆಂಗಳೂರು

- ಸದರಿ ಟೆಂಡರ್ ಅರ್ಜಿಗಳನ್ನು ಪರಿಶೀಲಿಸಲಾಗಿ ಮೆ॥ ದೇವನೆಟ್ ಸಲ್ಯೂಷನ್ಸ್, ಪುಣೆ, ಇವರು ನೆರೆಯ ಮಹಾರಾಷ್ಟ್ರ ರಾಜ್ಯದ ಸಕ್ಕರೆ ನಿರ್ದೇಶನಾಲಯಕ್ಕೆ ಈಗಾಗಲೇ ತಾಂತ್ರಿಕ ಸೇವೆಯನ್ನು ಒದಗಿಸುತ್ತಿರುವುದರಿಂದ ಹಾಗೂ ಟೆಂಡರ್ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿರುವುದರಿಂದ ಇವರು ಸಲ್ಲಿಸಿರುವ ಬಿಡ್‌ನ್ನು ಪರಿಗಣಿಸಿ ಸಕ್ಕರೆ ನಿರ್ದೇಶನಾಲಯಕ್ಕೆ ತಾಂತ್ರಿಕ ಸೇವೆಯನ್ನು ಒದಗಿಸಲು ಆಯ್ಕೆ ಮಾಡಲು ನಿರ್ಣಯಿಸಲಾಯಿತು.
- ಸದರಿ ಸಂಸ್ಥೆಯವರು ನೀಡಿರುವ ಟೆಂಡರ್ ಮೊತ್ತ ಜಿಎಸ್‌ಟಿ ಹೊರತುಪಡಿಸಿ ರೂ.10,50,000/- ಗಳಾಗಿರುತ್ತದೆ. ಅದರಂತೆ ಸಕ್ಕರೆ ನಿರ್ದೇಶನಾಲಯದ ಆದೇಶ ಸಂಖ್ಯೆ ಡಿಎಸ್‌ಕೆ/ಇಎಪಿ/31/2019-20 ದಿನಾಮಖ 02.08.2022 ರನ್ವಯ ಸಕ್ಕರೆ ನಿರ್ದೇಶನಾಲಯಕ್ಕೆ ತಾಂತ್ರಿಕ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಮೆ॥ ದೇವನೆಟ್ ಸಲ್ಯೂಷನ್ಸ್, ಪುಣೆ, ಇವರಿಗೆ ರೂ.10,50,000/- (ಜಿಎಸ್‌ಟಿ ಹೊರತುಪಡಿದಿ) ಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಒಂದು ವರ್ಷದ ಅವಧಿಗೆ ಕಾರ್ಯಾದೇಶ ನೀಡಲಾಗಿತ್ತು.
    1. ಟೆಂಡರ್ ಷರತ್ತು ಮತ್ತು ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸತಕ್ಕದ್ದು.
    2. ತಂತ್ರಾಂಶ ಸೇವೆಯು ಅಬಾಧಿತವಾಗಿ ಯಾವುದೇ ತೊಂದರೆಯಿಲ್ಲದಂತೆ ನಿರ್ವಹಿಸಲು ಕ್ರಮ ಕೈಗೊಳ್ಳತಕ್ಕದ್ದು.
    3. ಇಲಾಖೆಯ ತಂತ್ರಾಂಶ ಸೇವೆ ಸಂಬಂಧ ಸರ್ಕಾರದ ಹಂತದಲ್ಲಿ ಕರೆಯುವ ಸಭೆಗಳಿಗೆ ಸಂಸ್ಥೆಯ ಪರವಾಗಿ ಪ್ರತಿನಿಧಿಯೊಬ್ಬರು ತಪ್ಪದೆ ಹಾಜರಾಗತಕ್ಕದ್ದು.
- ಸದರಿ ಸಂಸ್ಥೆಯವರಿಗೆ ಮೊತ್ತವನ್ನು ಪಾವತಿಸಲು ಅನುದಾನದ ಕೊರತೆಯಿದ್ದು ರೂ.14,00,000/-ಗಳನ್ನು 051-ಸಾಮಾನ್ಯ ವೆಚ್ಚದಡಿ ಬಿಡುಗಡೆ ಮಾಡುವಂತೆ ಕೋರಿ ದಿನಾಂಕ 19.10.2022 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ತದನಂತರ ಮೆ॥ ದೇವನೆಟ್ ಸಲ್ಯೂಷನ್ಸ್, ಪುಣೆ ಇವರಿಗೆ ದಿನಾಂಕ 16.03.2023 ರಂದು ರೂ.12,39,000/- (ಜಿಎಸ್‌ಟಿ ಸೇರಿ) ಪಾವತಿಸಲಾಗಿರುತ್ತದೆ.
- ಸಕ್ಕರೆ ನಿರ್ದೇಶನಾಲಯದ ಪತ್ರ ದಿನಾಂಕ 23.11.2022 ರಂದು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಪತ್ರ ಬರೆದು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಕ್ಕರೆ ನಿರ್ದೇಶನಾಲಯದ ಜಾಲತಾಣದಲ್ಲಿ ಕ್ರೋಢೀಕರಿಸಬೇಕಾಗಿರುವುದರಿಂದ ಕಾರ್ಖಾನೆಗಳ ಪರವಾಗಿ ನೋಡಲ್/ಸಹಾಯಕ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡುವಂತೆ ಕೋರಲಾಗಿತ್ತು. ಅದರಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ನೋಡಲ್/ಸಹಾಯಕ ನೋಡಲ್ ಅಧಿಕಾರಿಗಳನ್ನು ಸಹ ನೇಮಿಸಲಾಗಿರುತ್ತದೆ.

- ಸಕ್ಕರೆ ನಿರ್ದೇಶನಾಲಯಕ್ಕೆ ಅವಶ್ಯವಿರುವ ಮಾಹಿತಿಗಳನ್ನು ಕ್ರೋಢೀಕರಿಸಲು ಸಿದ್ಧಪಡಿಸುತ್ತಿರುವ ತಂತ್ರಾಂಶಕ್ಕೆ (Software) ದತ್ತಾಂಶವನ್ನು ಒದಗಿಸುವ ಸಂಬಂಧ ಮೆ॥ ದೇವನೆಟ್ ಸಲ್ಯೂಷನ್ಸ್, ಪುಣೆ ರವರು ಬೆಳಗಾವಿ ವಿಭಾಗದ ಸಕ್ಕರೆ ಕಾರ್ಖಾನೆಗಳ ನೋಡಲ್/ಸಹಾಯಕ ನೋಡಲ್ ಅಧಿಕಾರಿಗಳಿಗೆ ದಿನಾಂಕ 26.05.2023 ರಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು.
- ರಾಜ್ಯದ ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳಿಗೆ ಸದರಿ ತಂತ್ರಾಂಶರನ್ನು ಅಳವಡಿಸಲು ಪ್ರತ್ಯೇಕವಾಗಿ ಎಲ್ಲಾ ಕಾರ್ಖಾನೆಗಳಿಗೆ ಮೆ॥ ದೇವನೆಟ್ ಸಲ್ಯೂಷನ್ಸ್, ಪುಣೆ ಇವರ ಪ್ರತಿನಿಧಿ ಹಾಗೂ ಇಲಾಖೆಯ ಸಿಬ್ಬಂದಿಯವರು ಭೇಟಿ ನೀಡಿ ಕಾರ್ಖಾನೆಯವರು ತಂತ್ರಾಂಶವನ್ನು ಅಳವಡಿಸಿ, ಅದರ ಮೂಲಕ ಸಕ್ಕರೆ ನಿರ್ದೇಶನಾಲಯಕ್ಕೆ ಮಾಹಿತಿಯನ್ನು ನೀಡಲು ನಿರ್ದೇಶಿಸಲಾಗಿದೆ.

ಈ ದಿಶೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾದ ಶ್ರೀ ಕುರುಬೂರು ಶಾಂತಕುಮಾರ್ ರವರು ಉತ್ತರ ಪ್ರದೇಶದಲ್ಲಿ ಈಗಾಗಲೇ ಸಾಫ್ಟ್‌ವೇರ್ ಅಳವಡಿಸಿ ಹಲವಾರು ಮಾಹಿತಿಗಳನ್ನು ರೈತರಿಗೆ ಕಬ್ಬು ಕಟಾವಿನ ಮತ್ತು ಕಬ್ಬಿನ ಬೆಲೆಯ ಪಾವತಿ ಬಗ್ಗೆ ಸಾಫ್ಟ್‌ವೇರ್ ಮುಖಾಂತರ ರೈತರಿಗೆ ನೀಡಲಾಗುತ್ತಿದೆ. ಇದರಿಂದ ರೈತರಿಗೆ ಹಲವಾರು ಅನುಕೂಲತೆಗಳು ಆಗಿವೆ ಎಂದರು. ಇದು ಸಕ್ಕರೆ ಇಳುವರಿ ಹಾಗೂ ಕಬ್ಬಿನ ತೂಕದ ಬಗ್ಗೆ ಪಾರದರ್ಶಕತೆಯನ್ನು ತರಲು ಅನುಕೂಲವಾಗುವುದೆಂದು ಹೇಳಿದರು. ಕಲಬುರ್ಗಿ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ ಎಂದು ಅವರು ಹೇಳಿದರು. ಸದರಿ ಸಾಫ್ಟ್‌ವೇರ್ ಅನುಷ್ಠಾನ ತುರ್ತಾಗಿ ಆಗಬೇಕೆಂದು ಹೇಳಿದರು. ಈ ದಿಶೆಯಲ್ಲಿ ಗೋದಾವರಿ ಬೈಯೋರೀಫೈನರಿ ಸಮೀರವಾಡಿಯ ಶ್ರೀ ಭಕ್ಷಿ ಅವರು ಮಾತನಾಡಿ ಈಗಾಗಲೇ ಸಾಫ್ಟ್‌ವೇರ್ ಮುಖಾಂತರ ರೈತರ ಕಬ್ಬಿನ ಬಿಲ್ಲು, ಕಬ್ಬಿನ ತೂಕ, ಕಬ್ಬಿನ ಸರ್ವೇ ಇತ್ಯಾದಿಗಳನ್ನು ಕಾರ್ಖಾನೆಯಿಂದ ಮಾಡಲಾಗುತ್ತಿದೆ ಎಂದು ಹೇಳಿದರು. ಮುಂದುವರೆದು ಶ್ರೀ ಬಾಬುರಾವ್ ಖೂಬಾ, ನಿರ್ದೇಶಕರು ಮಹಾತ್ಮಾಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ, ಬೀದರ ಇವರು ಮಾತನಾಡಿ ಈಗಾಗಲೇ ಕಾರ್ಖಾನೆಯಲ್ಲಿ ವೇ-ಬ್ರಿಡ್ಜ್‌ನಲ್ಲಿ ಕಬ್ಬಿನ ತೂಕ ಆದ ನಂತರ ಎಸ್.ಎಂ.ಎಸ್ ಮುಖಾಂತರ ಮಾಹಿತಿಯನ್ನು ರೈತರಿಗೆ ಕಾರ್ಖಾನೆಯಿಂದ ನೀಡಲಾಗುತ್ತಿದೆ ಎಂದು ಹೇಳಿದರು. ಸನ್ಮಾನ್ಯ ಸಕ್ಕರೆ ಸಚಿವರು ಕೂಡ ಇದರ ಬಗ್ಗೆ ಗಮನ ಸೆಳೆಯುತ್ತ ಸದರಿ ಸಾಫ್ಟ್‌ವೇರ್‌ಅನ್ನು ಅಳವಡಿಸಲು ನಿಗಧಿತ ಸಮಯವನ್ನು ನಿಗದಿಪಡಿಸಬೇಕೆಂದು ಸೂಚಿಸಿದರು. ಈ ನಿಟ್ಟಿನಲ್ಲಿ ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮಾತನಾಡಿ ಸದರಿ ಸಾಫ್ಟ್‌ವೇರ್ ಬಗ್ಗೆ ಈಗಾಗಲೇ ಸಕ್ಕರೆ ಕಾರ್ಖಾನೆಯಿಂದ ನೋಡಲ್ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ ಎಂದು ಹೇಳಿ ಈ ಅವಧಿಯಲ್ಲಿ ದಕ್ಷಿಣ ಕರ್ನಾಟಕದ ಕಾರ್ಖಾನೆಗಳಿಗೆ ಫೆಬ್ರುವರಿಯಲ್ಲಿ ತರಬೇತಿ ನೀಡಲು ತೀರ್ಮಾನಿಸಲಾಯಿತು. ಆದರೆ ಸದರಿ ಅವಧಿಯಲ್ಲಿ ಕಾರ್ಖಾನೆಗಳು ಕಾರ್ಯನಿರ್ವಹಿಸಿರುವುದನ್ನು ಸಗಿತಗೊಳಿಸಿದ್ದವು. ಅದರಂತೆ ಉತ್ತರ ಕರ್ನಾಟದ ಕಾರ್ಖಾನೆಗಳು ಕೂಡ ಕಬ್ಬು ನುರಿಸುವ ಹಂಗಾಮು

ಕೂಡ ಮುಕ್ತಾಯವಾಗುವ ಹಂತಕ್ಕೆ ಬಂದಿರುವುದರಿಂದ ಸದರಿ ಸಾಫ್ಟ್‌ವೇರ್‌ಅನ್ನು ಅಳವಡಿಸಲು ವಿಳಂಬವಾಗಿದೆಯೆಂದು ಹೇಳಿದರು. ಮುಂದುವರೆದು ಇವರು ದಕ್ಷಿಣ ಕರ್ನಾಟಕದ ಕಾರ್ಖಾನೆಗಳು 31 ಜುಲೈ-2024 ರಿಂದ ಪ್ರಾರಂಭವಾಗುವುದರಿಂದ ಈ ಭಾಗದ ಕಾರ್ಖಾನೆಗಳಿಗೆ ಅಗಸ್ಟ್ 2ನೇ ವಾರದಲ್ಲಿ ತರಬೇತಿಯನ್ನು ನೀಡಿ ಸಾಫ್ಟ್‌ವೇರ್ ಅನುಷ್ಠಾನದ ಕ್ರಮ ಜರುಗಿಸಲಾಗುವುದು. ಅದರಂತೆ ನವೆಂಬರ್ 2ನೇ ವಾರದಲ್ಲಿ ಉತ್ತರ ಕರ್ನಾಟಕದ ಕಾರ್ಖಾನೆಗಳಲ್ಲಿ ಸಾಫ್ಟ್‌ವೇರ್ ಅಳವಡಿಸುವ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು. ಈ ವಿಷಯದ ಕುರಿತು ಸಭೆಯಲ್ಲಿ ಭಾಗವಹಿಸಿದ ರೈತ ಮುಖಂಡರು ಮತ್ತು ಇತರರು ಈ ಕ್ರಮವನ್ನು ಪಾಲಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ವಿಷಯ : **ಸಕ್ಕರೆ ಇಲಾಖೆಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದ ಅವಶ್ಯವಿರುವ ಮಾಹಿತಿಗಳನ್ನು ಕ್ರೂಢೀಕರಿಸಲು ಒಂದು ತಂತ್ರಾಂಶವನ್ನು (ಸಾಫ್ಟ್‌ವೇರ್) ಅನುಷ್ಠಾನಗೊಳಿಸುವ ಬಗ್ಗೆ**

ಕ್ರಮ : ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ.

4. ಸನ್ 2023-24ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮಿನಿಂದ ತಕ್ಷಣದಿಂದ ಜಾರಿಗೆ ಬರುವಂತೆ ಕಡ್ಡಾಯವಾಗಿ ಎಸ್.ಓ.ಪಿ. ಯನ್ನು ಕಾನೂನು ಮಾಪನಾಶಾಸ್ತ್ರ ಇಲಾಖೆ ಇವರು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಅನುಷ್ಠಾನಗೊಳಿಸುವುದು.

ಈ ವಿಷಯದ ಕುರಿತು ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮಾತನಾಡಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯು ದಿನಾಂಕ 27.11.2023 ರಂದು ಹೊರಡಿಸಿರುವ ಎಸ್.ಓ.ಪಿ ಯನ್ನು ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಯು ಕಟ್ಟುನಿಟ್ಟಾಗಿ ಪಾಲಿಸುವಂತೆ ದಿನಾಂಕ 01.12.2023 ರಂದು ಸೂಚನೆ ನೀಡಲಾಗಿದೆ ಎಂದು ಸಭೆಗೆ ಹೇಳಿದರು. ತದನಂತರ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯ ಉಪನಿರ್ದೇಶಕರಿಗೆ ಸದರಿ ವಿಷಯದ ಕುರಿತು ವಿವರಣೆಯನ್ನು ನೀಡುವಂತೆ ಸನ್ಮಾನ್ಯ ಸಚಿವರು ತಿಳಿಸಿದರು. ಈ ದಿಶೆಯಲ್ಲಿ ಅವರು ಮಾತನಾಡಿ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ತೂಕದ ಯಂತ್ರಗಳಿಗೆ ಎಸ್.ಓ.ಪಿ ಯನ್ನು ಅಳವಡಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದ್ದು, ರಾಜ್ಯದ ಒಟ್ಟು 39 ಕಾರ್ಖಾನೆಗಳು ಈಗಾಗಲೇ ಇಲಾಖೆಯು ಹೊರಡಿಸಿದ ಎಸ್.ಓ.ಪಿ ಯನ್ನು ಅಳವಡಿಸಿರುತ್ತಾರೆ. ಅದರಂತೆ 19 ಸಕ್ಕರೆ ಕಾರ್ಖಾನೆಗಳು ಸದರಿ ಎಸ್.ಓ.ಪಿ ಯನ್ನು ಅಳವಡಿಸುವ ಅಂತಿಮ ಹಂತದಲ್ಲಿ ಇರುತ್ತದೆ ಎಂದು ಹೇಳಿ ಇನ್ನೂ 13 ಕಾರ್ಖಾನೆಗಳು ಕೂಡ ಈ ನಿಟ್ಟಿನಲ್ಲಿ ಕ್ರಮ ಜರುಗಿಸುತ್ತಿವೆ ಎಂದು ಹೇಳಿದರು. ಐದು ಕಾರ್ಖಾನೆಗಳು ಈ ಸಂಬಂಧ ಯಾವುದೇ ಕ್ರಮವಹಿಸಿಲ್ಲ. ಅವುಗಳ Crushing licence ರದ್ದು ಪಡಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಈ ಮಧ್ಯೆ ಸನ್ಮಾನ್ಯ ಸಕ್ಕರೆ ಸಚಿವರು ಮಾತನಾಡಿ ಕಬ್ಬಿನ ತೂಕ ಮಾಡುವ ಯಂತ್ರಗಳ ಲೋಡ್‌ಶೇಲ್‌ಗಳಿಗೆ ಅನ್‌ಲಾಗ್ ದಿಂದ ಡಿಜಿಟಲ್ ಮಾರ್ಗವನ್ನು ಅನುಸರಿಸುವುದರಿಂದ ಕಬ್ಬಿನ ತೂಕದಲ್ಲಿ ವ್ಯತ್ಯಾಸ ಮಾಡಲು ಸಾಧ್ಯವಿಲ್ಲವೆಂದು ಸಭೆಯ ಗಮನಕ್ಕೆ

ತಂದರು. ಈ ನಿಟ್ಟಿನಲ್ಲಿ ಅವರು ಮಾತನಾಡಿ ರಾಜ್ಯದ ಬಹುತೇಕ ಕಾರ್ಖಾನೆಗಳು ಸಕ್ಕರೆ ಇಳುವರಿ ಕೈಗೊಂಡಿರುವ ಕ್ರಮಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಮುಂದುವರೆಯುವುದರಿಂದ ಇದು ಕಬ್ಬು ಬೆಳೆಗಾರರಿಗೆ ಪ್ರಯೋಜನವಾಗುವುದೆಂದು ಸಭೆಗೆ ಹೇಳಿದರು. ಈ ವಿಷಯದ ಕುರಿತು ಮಾತನಾಡುವಾಗ ಶ್ರೀ ಕುರುಬೂರು ಶಾಂತಕುಮಾರ ಇವರು ಮಾತನಾಡಿ ಕಬ್ಬಿನ ತೂಕದಲ್ಲಿ ಮಾಡಿರುವ ಪರಿಶೀಲನೆ ಬಗ್ಗೆ ವಿವರಗಳನ್ನು ನೀಡುವಂತೆ ಉಪನಿರ್ದೇಶಕರು, ಕಾನೂನು ಮಾಪನಾಶಾಸ್ತ್ರ ಇಲಾಖೆ, ಇವರಿಗೆ ಕೇಳಿದರು. ಈ ನಿಮಿತ್ತ ಅವರ ಹತ್ತಿರ ಮಾಹಿತಿ ಇಲ್ಲದೇ ಇರುವುದರಿಂದ ತದನಂತರ ಸದರಿ ಮಾಹಿತಿಯನ್ನು ನೀಡಲಾಗುವುದೆಂದು ಸಭೆಗೆ ಹೇಳಿದರು. ಈ ದಿಶೆಯಲ್ಲಿ ಶ್ರೀ ತೇಜಶ್ವಿನಿ ಪಟೇಲ್ ಮಾತನಾಡಿ ಇಂತಹ ವರದಿಗಳನ್ನು ಇಲಾಖೆಯ ವೆಬ್‌ಸೈಟ್‌ದಲ್ಲಿ ಅಪ್‌ಲೋಡ್ ಮಾಡುವುದರಿಂದ ರೈತರಿಗೆ ಹೆಚ್ಚಿನ ಮಾಹಿತಿಯು ದೊರಕಲು ಅನುಕೂಲವಾಗುವುದೆಂದು ಹೇಳಿದರು. ಮುಂದುವರೆದು ಶ್ರೀ ಕುರುಬೂರು ಶಾಂತಕುಮಾರ ಇವರು ಮಾತನಾಡಿ ಕಬ್ಬು ಕಟಾವು ಮಾಡುವ ಯಂತ್ರಗಳನ್ನು ಬಳಿಸಿದಾಗ ಸಕ್ಕರೆ ಕಾರ್ಖಾನೆಗಳು ಶೇ. 8 ರಿಂದ 10 ರಷ್ಟು ಕಬ್ಬಿನ ತೂಕದಲ್ಲಿ ಕಡಿತ ಮಾಡುತ್ತಿದ್ದಾರೆ. ಆದ್ದರಿಂದ ಸದರಿ ವಿಷಯಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಅವಶ್ಯವಿದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಸನ್ಮಾನ್ಯ ಸಚಿವರು ಮಾತನಾಡಿ ಇದನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿ ಮಹಾರಾಷ್ಟ್ರ ರಾಜ್ಯದಲ್ಲಿ ಪಾಲಿಸುತ್ತಿರುವ ನಿಯಮದಂತೆ ಯಂತ್ರೋಪಕರಣದಿಂದ ಕಬ್ಬು ಕಟಾವು ಮಾಡುವ ಕ್ರಮದಿಂದ ಆಗುವ ನಷ್ಟವನ್ನು ಕಬ್ಬಿನ ತೂಕದಲ್ಲಿ ಕಡಿತ ಮಾಡಲು ಅಗತ್ಯ ಕ್ರಮವಹಿಸಲು ಸೂಚನೆ ನೀಡಿದರು. ಇದಕ್ಕೆ ಸಭೆಯು ಅನುಮೋದಿಸಿತು.

ವಿಷಯ : 1	ಕಬ್ಬಿನ ತೂಕದ ಬಗ್ಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಪರಿಶೀಲಿಸಿದ ವರದಿಯನ್ನು ನೀಡುವ ಬಗ್ಗೆ.
ಕ್ರಮ :	ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಇಲಾಖೆ, ಬೆಂಗಳೂರು
ವಿಷಯ : 2	ಯಂತ್ರೋಪಕರಣಗಳಿಂದ ಕಬ್ಬನ್ನು ಕಟಾವು ಮಾಡಿದಲ್ಲಿ ತೂಕದಲ್ಲಿ ಕನಿಷ್ಠ ಪ್ರಮಾಣದಲ್ಲಿ ಕಡಿತ ಮಾಡಲು ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡುವುದು.
ಕ್ರಮ :	ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು

5. 2023-24ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿರುವ ಕಬ್ಬಿನ ಪ್ರಮಾಣ, ಉತ್ಪಾದಿಸಿರುವ ಸಕ್ಕರೆ, ಸಕ್ಕರೆ ಇಳುವರಿ ಹಾಗೂ ಕಬ್ಬು ಬಿಲ್ಲು ಪಾವತಿಸಿರುವ ಹಾಗೂ ಹಿಂದಿನ ಸಾಲುಗಳ ಬಾಕಿ ಬಗ್ಗೆ.

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ 2023-24ನೇ ಸಾಲಿಗೆ ಭಾರತ ಸರ್ಕಾರವು ಶೇ.10.25 ಸಕ್ಕರೆ ಇಳುವರಿಗೆ ಪ್ರತಿ ಮೆ.ಟನ್‌ಗೆ ರೂ.3,150/- ನ್ಯಾಯಯುತ ಮತ್ತು ಲಾಭದಾಯಕ (ಎಫ್.ಆರ್.ಪಿ) ಕಬ್ಬಿನ ದರವನ್ನು ನಿಗಧಿಪಡಿಸಿ ಕನಿಷ್ಠ ಕಬ್ಬಿನ ಬೆಲೆಯನ್ನು ಪ್ರತಿ ಮೆ.ಟನ್‌ಗೆ ರೂ.2,920/- ಎಂದು ನಿಗಧಿಪಡಿಸಲಾಗಿದೆ ಮತ್ತು ರಾಜ್ಯದಲ್ಲಿ 2023-24ನೇ ಹಂಗಾಮಿನಲ್ಲಿ 76 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸಿ ಒಟ್ಟು 585.08 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ, 529.17 ಲಕ್ಷ ಕ್ವಿಂಟಲ್ ಸಕ್ಕರೆಯನ್ನು ಉತ್ಪಾದಿಸಿವೆ. ರಾಜ್ಯದ ಸರಾಸರಿ

ಸಕ್ಕರೆ ಇಳುವರಿ ಶೇ.9.04 (ಇಥನಾಲ್ ಉತ್ಪಾದನೆಗೆ ಬಳಕೆಯಾದ ಸಕ್ಕರೆಯನ್ನು ಹೊರತುಪಡಿಸಿ). ರಾಜ್ಯದ 76 ಸಕ್ಕರೆ ಕಾರ್ಖಾನೆಗಳ ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ 501800 ಟಿ.ಸಿ.ಡಿಗಳಾಗಿದ್ದು, 38 ಕಾರ್ಯನಿರತ ಸಕ್ಕರೆ ಕಾರ್ಖಾನೆಗಳಲ್ಲಿ ಡಿಸ್ಟಿಲರಿ/ಎಥನಾಲ್ ಉತ್ಪಾದಿಸುತ್ತಿದ್ದು, ಇವುಗಳ ದಿನವಹಿ ಸಾಮರ್ಥ್ಯ 6429 ಕೆಎಲ್‌ಡಿ ಆಗಿದ್ದು, ಸನ್ 2023-24ನೇ ಸಾಲಿನಲ್ಲಿ ಇಲ್ಲಿಯವರೆಗೆ 81 ಕೋಟಿ ಲೀಟರ್ ಎಥನಾಲ್ ಉತ್ಪಾದಿಸಲಾಗಿದೆ. 64 ಸಕ್ಕರೆ ಕಾರ್ಖಾನೆಗಳಲ್ಲಿ ಸಹವಿದ್ಯುತ್ ಉತ್ಪಾದನೆ ಮಾಡುತ್ತಿದ್ದು, ಇವುಗಳ ದಿನವಹಿ ಸಾಮರ್ಥ್ಯ 1820 ಮೆ.ವ್ಯಾಟ್ ಆಗಿದ್ದು, 2023-24ನೇ ಸಾಲಿನಲ್ಲಿ 172900 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮುಂದುವರೆದು, ರಾಜ್ಯದ ಸಕ್ಕರೆ ಕಾರ್ಖಾನೆಗಳು ದಿನಾಂಕ 26.06.2024ರ ಅಂತ್ಯಕ್ಕೆ ರೂ.19890.05 ಕೋಟಿ ಕಬ್ಬಿನ ಬಿಲ್‌ನ್ನು ಪಾವತಿಸಬೇಕಾಗಿತ್ತು, ಆದರೆ ರೂ.20019.54 ಕೋಟಿ ರೈತರಿಗೆ ಪಾವತಿಸಿರುತ್ತವೆ. ಇದರಿಂದ ರಾಜ್ಯದಲ್ಲಿ ಶೇ.99 ರಷ್ಟು ಕಬ್ಬಿನ ಬಿಲ್ಲನ್ನು ಪಾವತಿಸಿದಂತಾಗಿದೆ. 10 ಸಕ್ಕರೆ ಕಾರ್ಖಾನೆಗಳಿಂದ ಇನ್ನೂ ರೂ.196.29 ಕೋಟಿ ಕಬ್ಬಿನ ಬಿಲ್ಲನ್ನು ಪಾವತಿಸಲು ಬಾಕಿಯಿರುತ್ತದೆ. ಈ ಬಾಕಿ ವಸೂಲಾತಿ ಸಂಬಂಧ ಕಾರ್ಖಾನೆಗಳಿಗೆ ವಸೂಲಾತಿ ದೃಢೀಕರಣ ಪತ್ರ ಹೊರಡಿಸಲಾಗಿದೆ ಹಾಗೂ ರಾಜ್ಯದಲ್ಲಿ 45 ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರವು ಘೋಷಿಸಿದ ನ್ಯಾಯಯುತ ಮತ್ತು ಲಾಭದಾಯಕ ಮೊತ್ತಕ್ಕಿಂತ ಹೆಚ್ಚಿಗೆ ಪಾವತಿಸಿರುತ್ತವೆ. ಬಾಕಿ ಹೊಂದಿರುವ ಸಕ್ಕರೆ ಕಾರ್ಖಾನೆಗಳ ವಿವರಗಳನ್ನು ಕೆಳಗಿನಂತೆ ಇರುತ್ತದೆ ಎಂದು ಹೇಳಿದರು.

ಅ. ನಂ	ಕಾರ್ಖಾನೆಯ ಹೆಸರು	ಬಾಕಿ ಇರುವ ಮೊತ್ತ (ರೂ.ಲಕ್ಷಗಳಲ್ಲಿ)
1	ಬೀಳಗಿ ಶುಗರ್ ಮಿಲ್ ಲಿ., ಬೀಳಗಿ	7485
2	ಶ್ರೀ ಬಸವೇಶ್ವರ ಶುಗರ್ಸ್ ಲಿ., ಕಾಜೋಳ	5322
3	ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗ	1680
4	ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ವಿಜಯಮರ	1278
5	ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ	792
6	ಜೆಮ್ ಶುಗರ್ಸ್ ಲಿ., ಬೀಳಗಿ	1010
7	ಶ್ರೀ ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ, ಮರಗೂರು	430
8	ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ, ಕಾಕತಿ	628
9	ಕೋರ್‌ಗ್ರೀನ್ ಶುಗರ್ & ಫ್ಯೂಯಲ್ಸ್ ಪ್ರೈ.ಲಿ., ಸಹಮರ	554
10	ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮೊಗದಾಳ	440
	ಒಟ್ಟು	**19629.20**

ಈ ನಿಟ್ಟಿನಲ್ಲಿ ಸಕ್ಕರೆ ಕಾರ್ಖಾನೆಯಿಂದ ಕಬ್ಬಿನ ಬಾಕಿ ಬಿಲ್ಲನ್ನು ವಸೂಲಾತಿಗಾಗಿ ಈಗಾಗಲೇ ವಸೂಲಾತಿ ಪ್ರಮಾಣ ಪತ್ರ (ಆರ್.ಸಿ) ವನ್ನು ನೀಡಲಾಗಿತ್ತು. ಶೀಘ್ರವೇ ಉಳಿದ ಬಾಕಿ ಮೊತ್ತವನ್ನು ರೈತರಿಗೆ ಪಾವತಿಸುವ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು. ಈ ವಿಷಯದ ಕುರಿತು ಮಾತನಾಡಿದ ಶ್ರೀ ಕುರುಬೂರು ಶಾಂತಕುಮಾರ ಇವರು ಹಾಲಿ ನೀಡಿರುವ ಪಟ್ಟಿಯ ಪ್ರಕಾರ ಕೇವಲ ಕಾರ್ಖಾನೆಯು ಪಾವತಿಸಬೇಕಾದ ಎಫ್.ಆರ್.ಪಿ ಯನ್ನು ಗಣನೆಗೆ ತೆಗೆದುಕೊಂಡು ಕಬ್ಬಿನ ಬಿಲ್ ಪಾವತಿಸಿರುವ ಬಗೆ

ಮಾಹಿತಿ ಇರುತ್ತದೆ. ಆದರೆ ರೈತರಿಗೆ ಪ್ರತಿ ಟನ್‌ಗೆ ಕಬ್ಬಿನ ಬೆಲೆ ಪಾವತಿಸಿರುವ ಮಾಹಿತಿ ಕಬ್ಬು ಸರ್ಕಾರ ಮತ್ತು ಸಾಗಾಣಿಕೆ ವೆಚ್ಚವನ್ನು ಕಡಿತಗೊಳಿಸಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಇದನ್ನು ಇನ್ನೂ ಮುಂದೆ ನಡೆಯುವ ಸಭೆಗಳಲ್ಲಿ ನೀಡುವಂತೆ ತಿಳಿಸಿದರು. ಆದ್ದರಿಂದ ಸದರಿ ಪಟ್ಟಿಯನ್ನು ತಯಾರಿಸುವಾಗ ಕಾರ್ಖಾನೆಗಳು ನಿಖರವಾಗಿ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಕೂಡ ಸದರಿ ಪಟ್ಟಿಯಲ್ಲಿ ದಾಖಲಿಸುವುದು ಅವಶ್ಯವಿದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಸನ್ಮಾನ್ಯ ಸಚಿವರು ಕೂಡ ಸಹಮತ ವ್ಯಕ್ತಪಡಿಸಿದರು. ಮುಂದುವರೆದು ಶ್ರೀ. ಕುರುಬೂರು ಶಾಂತಕುಮಾರ ರವರು ಇ.ಐ.ಡಿ ಪ್ಯಾರಿಯ ಮೂರು ಕಾರ್ಖಾನೆಗಳು ಬೇರೆ ಬೇರೆ ರೀತಿಯ ಕಬ್ಬು ಕಟಾವು ಮತ್ತು ವೆಚ್ಚವನ್ನು ತೋರಿಸುತ್ತಿದ್ದಾರೆ ಎಂದು ದೂರಿದರು. ಸದರಿ ವಿಷಯದ ಕುರಿತು ಕೈಗೊಂಡ ಕ್ರಮದ ಬಗ್ಗೆ ವಿವರಣೆ ನೀಡುವಂತೆ ಕೇಳಿದರು. ಈ ನಿಟ್ಟಿನಲ್ಲಿ ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ ಇ.ಐ.ಡಿ ಪ್ಯಾರಿ, ಹಳಿಯಾಳ ಇವರ ವಿರುದ್ಧ ಕ್ರಮವನ್ನು ಜರುಗಿಸಲಾಗಿದೆ ಎಂದು ತಿಳಿಸಿದರು. ಈ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ಶ್ರೀ ಕುರುಬುರ ಶಾಂತಕುಮಾರ ಅವರು ಪ್ರತಿಕ್ರೀಯಿಸಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಅಧಿಕೃತ ಅಧಿಕಾರಿ ಆಗಿರುವುದರಿಂದ ಈ ನಿಟ್ಟಿನಲ್ಲಿ ಅವರೇ ಕ್ರಮ ಕೈಗೊಂಡರೆ ಉತ್ತಮವೆಂದರು. ಸದರಿ ವಿಷಯದ ಕುರಿತು ಮಾತನಾಡಿದ ಸನ್ಮಾನ್ಯ ಸಕ್ಕರೆ ಸಚಿವರು, ಈ ನಿಟ್ಟಿನಲ್ಲಿ ಇ.ಐ.ಡಿ ಪ್ಯಾರಿಯ ಮೂರು ಕಾರ್ಖಾನೆಗಳಿಗೆ ಸೂಕ್ತ ನೋಟೀಸ್ ಜಾರಿಗೊಳಿಸುವಂತೆ ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರಿಗೆ ಸೂಚಿಸಿದರು.

ವಿಷಯ : ಸನ್ 2023–24ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಬಾಕಿ ಉಳಿಸಿದ ಮೊತ್ತವನ್ನು ಕಬ್ಬು ಬೆಳೆಗಾರರಿಗೆ ಪಾವತಿಸುವ ಕ್ರಮ.

ಕ್ರಮ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು

6. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಮತ್ತು ಎಥನಾಲ್ ಘಟಕಗಳ ಸ್ಥಾಪನೆ ಸಂಬಂಧ ಹೊಸ ನೀತಿಯನ್ನು ರೂಪಿಸುವ ಕುರಿತು ರಚಿಸಿರುವ ಪರಿಶೀಲನಾ ಸಮಿತಿಯ ಬಗ್ಗೆ.

ಈ ವಿಷಯದ ಕುರಿತು ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ ಸರ್ಕಾರದ ಆದೇಶ ಸಂಖ್ಯೆ ಸಿಐ/184/ಎಸ್‌ಜಿಎಫ್/2022 ದಿನಾಂಕ 25.08.2023 ರನ್ವಯ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಮತ್ತು ಎಥನಾಲ್ ಘಟಕಗಳ ಸ್ಥಾಪನೆ / ಸಕ್ಕರೆ ಕಾರ್ಖಾನೆಗಳಿಗೆ ಮೂಲಭೂತವಾಗಿ ಬೇಕಾಗಿರುವಂತಹ ಕಬ್ಬಿನ ಲಭ್ಯತೆ, ನೀರಿನ ಲಭ್ಯತೆ, ಕಾರ್ಖಾನೆಯಿಂದ ಕಾರ್ಖಾನೆಗೆ ಇರುವ ಅಂತರ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಕೈಗೊಳ್ಳಲು ಮತ್ತು ಕಬ್ಬು ಮೀಸಲು ಕ್ಷೇತ್ರದ ಹಂಚಿಕೆ, ಹಿಂಪಡೆಯುವಿಕೆ ಮತ್ತು ಮರು ಹಂಚಿಕೆಗಳ ಕುರಿತು ನಿಯಮಗಳನ್ನು ಪುನರ್ ರಚಿಸುವ ಸಂಬಂಧ ವೈಜ್ಞಾನಿಕ / ತಾಂತ್ರಿಕ ಅಂಶಗಳ ಕುರಿತು ಅಧ್ಯಯನ ಮಾಡಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸರ್ಕಾರದ ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ ಎಂದು ಸಭೆಗೆ ಹೇಳಿದರು. ಈ

ಿಯಲ್ಲಿ ಸನ್ಮಾನ್ಯ ಸಕ್ಕರೆ ಸಚಿವರು ಮಾತನಾಡಿ ಮಹಾರಾಷ್ಟ್ರ ಮತ್ತು ಉತ್ತರಪ್ರದೇಶ ರಾಜ್ಯಗಳಲ್ಲಿ ಅನುಸರಿಸುತ್ತಿರುವ ನಿಯಮಗಳನ್ನು ಅಧ್ಯಯನ ಮಾಡಿ ಹೊಸ ಸಕ್ಕರೆ ಕಾರ್ಖಾನೆ ಅಥವಾ ಎಥನಾಲ್ ಘಟಕವನ್ನು ಸ್ಥಾಪಿಸಲು ಅವಶ್ಯವಿರುವ ಎರಡು ಕಾರ್ಖಾನೆಗಳ ನಡುವಿನ ಅಂತರ, ಕಬ್ಬಿನ ಲಭ್ಯತೆ, ನೀರಾವರಿಯ ಪ್ರದೇಶ, ಮಣ್ಣಿನ ಗುಣವನ್ನು, ಇತ್ಯಾದಿಗಳನ್ನು ಪರಿಗಣಿಸಿ ಮುಂದುವರೆಯುವುದು ಅವಶ್ಯಕತೆಯಿದೆ ಎಂದರು. ಈ ನಿಟ್ಟಿನಲ್ಲಿ ಶ್ರೀ ಕುರುಬುರ ಶಾಂತಕುಮಾರ ಮಾತನಾಡಿ ಈಗಾಗಲೇ ಡಾ. ಶ್ರೀ ರಂಗರಾಜನ್ ವರದಿಯ ಪ್ರಕಾರ ರೈತರು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಕಳುಹಿಸಲು ಮುಕ್ತ ಅವಕಾಶವನ್ನು ಕಲ್ಪಿಸಬೇಕೆಂದು ತಿಳಿಸಿರುವುದರಿಂದ ಹಾಲಿ ಇರುವ 15 ಕಿ.ಮೀ ಕ್ಕಿಂತ ಅಂತರವನ್ನು ಹೆಚ್ಚಿಸುವ ಬಗ್ಗೆ ಮತ್ತೊಮ್ಮೆ ಪುನರ್‌ವಿಮರ್ಶೆ ಮಾಡಲು ತಿಳಿಸಿದರು. ಈ ದಿಶೆಯಲ್ಲಿ ಸನ್ಮಾನ್ಯ ಸಕ್ಕರೆ ಸಚಿವರು ಮಾತನಾಡಿ ವರದಿ ಬಂದ ನಂತರ ಅದರ ಸಾಧಕ-ಬಾಧಕಗಳನ್ನು ಪರಿಗಣಿಸಿ ಮುಂದಿನ ಕ್ರಮವಿಡಲಾಗುವುದೆಂದು ಸಭೆಗೆ ಹೇಳಿದರು.

ವಿಷಯ: ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಮತ್ತು ಎಥನಾಲ್ ಘಟಕಗಳ ಸ್ಥಾಪನೆ ಸಂಬಂಧ ಹೊಸ ನೀತಿಯನ್ನು ರೂಪಿಸುವ ಕುರಿತು ರಚಿಸಿರುವ ಪರಿಶೀಲನಾ ಸಮಿತಿಯ ಬಗ್ಗೆ.

ಕ್ರಮ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು

7. ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಮೂಲಕ ಸ್ಥಾಪಿಸುವ ಕುರಿತು.

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ 2024-25ನೇ ಸಾಲಿನ ಆಯವ್ಯಯ ಘೋಷಣೆಯಂತೆ ರಾಜ್ಯದ ಕಬ್ಬು ಬೆಳೆಗಾರರ ಹಿತ ಕಾಯಲು ಮತ್ತು ತೂಕದಲ್ಲಾಗುವ ಮೋಸವನ್ನು ತಡೆಗಟ್ಟಲು ಎಪಿಎಂಸಿ ಮೂಲಕ ಸಕ್ಕರೆ ಕಾರ್ಖಾನೆಗಳ ಬಳಿ ವೇಬ್ರಿಡ್ಜ್‌ಗಳನ್ನು ಸ್ಥಾಪಿಸಲು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಕೃಷಿ ಮಾರಾಟ ಇಲಾಖೆಯಿಂದ ಯೋಜನೆ ಅನುಷ್ಠಾನಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ಹೇಳಿದರು. ಈ ನಿಟ್ಟಿನಲ್ಲಿ ಮಾತನಾಡಿದ ಸನ್ಮಾನ್ಯ ಸಕ್ಕರೆ ಸಚಿವರು, ಎಪಿಎಂಸಿ ಮುಖಾಂತರ ಇವರ 10 ರಿಂದ 15 ಡಿಜಿಟೈಸ್ಡ್ ತೂಕದ ಯಂತ್ರಗಳನ್ನು ಸ್ಥಾಪಿಸಲು ಮಾತ್ರ ಸಾಧ್ಯವಿದೆ ಎಂದು ಹೇಳಿದರು. ಈ ದಿಶೆಯಲ್ಲಿ ಶ್ರೀ ಕುರುಬೂರು ಶಾಂತಕುಮಾರ ಅವರು ಮಾತನಾಡಿ ಭಾರತ ಸರ್ಕಾರದ ಎಫ್.ಪಿ.ಓ (ರೈತ ಉತ್ಪಾದಕ ಸಂಸ್ಥೆ) ಗಳಿಗೆ ಸದರಿ ವೇಬ್‌ಬ್ರಿಡ್ಜ್‌ಗಳನ್ನು ನಿರ್ವಹಣೆಗಾಗಿ ನೀಡಬಹುದಾಗಿದೆ ಎಂದು ಹೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ಸನ್ಮಾನ್ಯ ಸಕ್ಕರೆ ಸಚಿವರು, ವೇಬ್ರಿಡ್ಜ್‌ಗಳ ನಿರ್ವಹಣೆ ಬಗ್ಗೆ ಸ್ಥಳೀಯವಾಗಿ ಎಫ್.ಪಿ.ಓ ಗಳಿಗೆ ಗುತ್ತಿಗೆಯನ್ನು ನೀಡಲು ಕೂಡ ಪರಿಶೀಲಿಸಲಾಗುತ್ತಿದೆ. ಅದರ ಜೊತೆಗೆ ಇನ್ನೂ ಯಾವುದೇ ಸಾಧ್ಯತೆಗಳಿದ್ದರೆ ಅವುಗಳನ್ನು ಕೂಡ ಪರಿಶೀಲಿಸಿ ಮುಂದಿನ ಕ್ರಮ

ಕೈಗೊಳ್ಳಲಾಗುವುದೆಂದು ಹೇಳಿದರು. ಮುಂದುವರೆದು, ಅವರು ಸಭೆಯಲ್ಲಿದ್ದ ಎಲ್ಲ ರೈತ ಮುಖಂ ಕೂಡ ಕಾರ್ಖಾನೆಗೆ ಸಮೀಪದಲ್ಲಿರುವ ಯಾವುದೇ ಎಪಿಎಂಸಿ ಗಳಿಗೆ ಸಂಬಂಧಿಸಿದ ಸ್ಥಳಗಳ ಬಗ್ಗೆ ಮಾಹಿತಿಯನ್ನು ಸಕ್ಕರೆ ಇಲಾಖೆಗೆ ನೀಡಿದ್ದಲ್ಲಿ ಅನುಕೂಲವಾಗುವುದು ಎಂದು ಹೇಳಿದರು.

ವಿಷಯ : ಕಾರ್ಖಾನೆಗಳಿಗೆ ಸಮೀಪದಲ್ಲಿರುವ ಎಪಿಎಂಸಿ ಯ ಸ್ಥಳವನ್ನು ಗುರುತಿಸಿ ಆಯಾ ಭಾಗದ ರೈತ ಮುಖಂಡರು ಮಾಹಿತಿ ನೀಡುವ ಬಗ್ಗೆ.

ಕ್ರಮ : ಕಬ್ಬು ನಿಯಂತ್ರಣ ಮಂಡಳಿಯ ರೈತ ಮುಖಂಡರು.

8. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ/214/ಸಿಓಎಫ್/2021 ದಿನಾಂಕ 24.02.2023 ರನ್ವಯ 2024–25ನೇ ಹಂಗಾಮಿನಲ್ಲಿ ಕಬ್ಬು ಅರೆಯುವ ಪರವಾನಗಿ ನವೀಕರಣ ಹಾಗೂ ಈ ಸಂಬಂಧಿತ ವಿಷಯಗಳ ಕುರಿತು.

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ ಕಬ್ಬು ಅರೆಯುವ ನವೀಕರಣ ಹಾಗೂ ಈ ಸಂಬಂಧಿತ ವಿಷಯಗಳ ಕುರಿತು ಕೆಳಗಿನಂತೆ ಮಾಹಿತಿಯನ್ನು ನೀಡಿದರು.

ಅ) ರಾಜ್ಯದ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಪರವಾನಗಿ ನವೀಕರಣ ಸಂಬಂಧ ಸರ್ಕಾರವು ದಿನಾಂಕ 24.02.2023 ರಂದು ಅಧಿಸೂಚನೆ ಸಂಖ್ಯೆ ಸಿಐ/214/ಸಿಓಎಫ್/2021 ಹೊರಡಿಸಿ, ಕರ್ನಾಟಕ ಸಕ್ಕರೆ (ಉತ್ಪಾದನೆಯ ನಿಯಂತ್ರಣ) ಆದೇಶ, 2022 ಅನ್ನು ಜಾರಿಗೊಳಿಸಲಾಗಿದೆ.

ಆ) ಈ ಆದೇಶದನ್ವಯ ಸಕ್ಕರೆ ಕಾರ್ಖಾನೆಗಳನ್ನು ಸಕ್ಕರೆ ಉತ್ಪಾದನೆಗಾಗಿ ಪಾಲಿಸಬೇಕಾದ ಷರತ್ತುಗಳನ್ನು ನಮೂದಿಸಲಾಗಿದೆ. ಅದರಲ್ಲಿ ನಿಯಮ 3ರ ಪ್ರಕಾರ ರಾಜ್ಯದ ಎಲ್ಲಾ ನೋಂದಾಯಿತ ಅಥವಾ ಕಾರ್ಯನಿರತ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಹಂಗಾಮಿನ ಕೊನೆಯಲ್ಲಿ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇದರ ಚಂದಾದಾರಿಕೆಯನ್ನು ಪಡೆದುಕೊಳ್ಳತಕ್ಕದ್ದು. ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದ ದರದಲ್ಲಿ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ವಂತಿಕೆಯನ್ನು ಪಾವತಿಸತಕ್ಕದ್ದು ಎಂದು ತಿಳಿಸಲಾಗಿದೆ.

ಇ) ಅದರಂತೆ ನಿಯಮ 4ರ ಪ್ರಕಾರ ಕಾರ್ಖಾನೆಗಳು ನಿರ್ದಿಷ್ಟಪಡಿಸಿದ ದಾಖಲೆಗಳೊಂದಿಗೆ ಪ್ರತಿ ವರ್ಷದ ಮಾರ್ಚ್ 31 ರೊಳಗಾಗಿ ಸಕ್ಕರೆ ನಿರ್ದೇಶಕರಿಗೆ ಪರವಾನಗಿ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ನಮೂನೆ–1 ರಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ತರುವಾಯ ಪ್ರತಿ ವರ್ಷದ ಮೇ–30ರ ಒಳಗಾಗಿ ಅರ್ಜಿಯನ್ನು ಮತ್ತು ದಾಖಲೆಗಳನ್ನು ಅದರ ವಿವರಣಾಂಶಗಳು ಮತ್ತು ಶಿಫಾರಸ್ಸುಗಳೊಂದಿಗೆ ಸಕ್ಕರೆ ನಿರ್ದೇಶಕರು ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕಾಗಿರುತ್ತದೆ.

ಕಾರ್ಖಾನೆಗಳು ನಿಗದಿತ ನಮೂನೆಯ ಅರ್ಜಿಯೊಂದಿಗೆ ಪಾವತಿಸಬೇಕಾದ ಅರ್ಜಿ ಶುಲ್ಕದ ವಿವರ ಕೆಳಕಂಡಂತೆ ಇರುತ್ತದೆ.

ಅ.ನಂ	ವಿವರ	ಶುಲ್ಕ (ರೂ.)
(ಎ)	5,000 ಟಿಸಿಡಿಯನ್ನು ಮೀರದ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ	50,000/-
(ಬಿ)	5001 ಟಿಸಿಡಿ ಯಿಂದ 10,000 ಟಿ.ಸಿ.ಡಿ ಯವರೆಗೆ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ	1,00,000/-
(ಸಿ)	10,001 ಟಿಸಿಡಿ ಯಿಂದ 15,000 ಟಿ.ಸಿ.ಡಿ ಯವರೆಗೆ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ	1,50,000/-
(ಡಿ)	15,000 ಟಿಸಿಡಿ ಯನ್ನು ಮೀರಿದ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ	2,00,000/-

ಕಬ್ಬು ಅರೆಯುವ ಪರವಾನಗಿ ನವೀಕರಣಕ್ಕಾಗಿ ಅರ್ಜಿಯೊಡನೆ ಈ ಕೆಳಕಂಡ ದಸ್ತಾವೆಜುಗಳನ್ನು ಸಲ್ಲಿಸಬೇಕಾಗಿರುತ್ತದೆ.

1. ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಮಾಡಲಾದ ವಂತಿಗೆಗೆ ಸಂಬಂಧಿಸಿದ ರಸೀದಿ;
2. ಪರವಾನಗಿ ಅರ್ಜಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪಡೆದ ಸಿಂಧುವಾದ ಅನುಮತಿ ಪತ್ರವನ್ನು ಸಲ್ಲಿಸತಕ್ಕದ್ದು.
3. ಮಾಡಲಾದ ದ್ವಿಪಕ್ಷೀಯ ಕರಾರಿನ ಕ್ರೋಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
4. ಹಿಂದಿನ ಹಂಗಾಮುಗಳಲ್ಲಿ ಕಾರ್ಖಾನೆಗೆ ಕಬ್ಬನ್ನು ಪೂರೈಸಿದ ರೈತರಿಗೆ ಕಾರ್ಖಾನೆಯ ಅಧಿಭೋಗದಾರನು ಪೂರ್ತಿಯಾಗಿ ಪಾವತಿಸಿದ ಕಬ್ಬು ಬಿಲ್ಲಿನ ಕುರಿತಾದ ಕ್ರೋಢೀಕೃತ ದಾಖಲೆ.
5. ಪರವಾನಗಿಯು ನವೀಕರಣಗೊಳ್ಳದಿರುವ ಸಂದರ್ಭದಲ್ಲಿ ಸಂಬಂಧಿತ ಕಬ್ಬು ಅರೆಯುವ ಹಂಗಾಮಿನ ಪ್ರಾರಂಭಕ್ಕೂ ಮೊದಲು ಕಾರ್ಖಾನೆಯ ಅಧಿಭೋಗದಾರನು ರೂ.50,000/- ಗಳ ಜುಲ್ಮಾನೆಯನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು ಹಾಗೂ ಅಂಥ ಜುಲ್ಮಾನೆಯನ್ನು ಸೂಕ್ತ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸರ್ಕಾರಿ ಖಜಾನೆಗೆ ಪಾವತಿಸತಕ್ಕದ್ದು.

ಈ) ಇವುಗಳ ಜೊತೆಗೆ ಷರತ್ತು (5)ರನ್ವಯ ಪರವಾನಿಗೆದಾರನು ಸದರಿ ಆದೇಶದ ಯಾವುದೇ ಉಪಬಂಧಗಳನ್ನು ಅಥವಾ ಪರವಾನಿಗೆ ಮಂಜೂರಾತಿಯ ಷರತ್ತುಗಳನ್ನು ಉಲ್ಲಂಘಿಸಿದರೆ ಪರವಾನಿಗೆ ಅಮಾನತು ಅಥವಾ ರದ್ದತಿ ಬಗ್ಗೆ ಕೂಡ ಅವಕಾಶ ಕಲ್ಪಿಸಲಾಗಿದೆ.

ಉ)2024-25ನೇ ಸಾಲಿನಲ್ಲಿ ಕಬ್ಬು ಅರೆಯುವ ಪರವಾನಗಿ ನವೀಕರಣ ಸಂಬಂಧ ಸ್ವೀಕೃತವಾಗಿರುವ ಪ್ರಸ್ತಾವನೆಗಳ ವಿವರ ಕೆಳಕಂಡಂತೆ ಇರುತ್ತದೆ.

ಸಕ್ಕರೆ ನಿರ್ದೇಶನಾಲಯದಲ್ಲಿ ಸ್ವೀಕೃತವಾದ ಪ್ರಸ್ತಾವನೆಗಳ ಸಂಖ್ಯೆ	ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಪ್ರಸ್ತಾವನೆಗಳ ಸಂಖ್ಯೆ	ಅಪೂರ್ಣ ಪ್ರಸ್ತಾವನೆಗೆ ಅಗತ್ಯ ಹೆಚ್ಚುವರಿ ಮಾಹಿತಿ ಕೋರಿ ಸಕ್ಕರೆ ನಿರ್ದೇಶನಾಲಯದಿಂದ ಪತ್ರ ಬರೆದಿರುವ ಪ್ರಸ್ತಾವನೆಗಳ ಸಂಖ್ಯೆ	ಸರ್ಕಾರದಿಂದ ನವೀಕರಣಗೊಂಡ ಪ್ರಸ್ತಾವನೆಗಳ ಸಂಖ್ಯೆ
72	41	31	-

ಸದರಿ ಮಾಹಿತಿಯನ್ನು ಸಭೆಯಲ್ಲಿ ಚರ್ಚಿಸಿ ಸ್ವೀಕರಿಸಲಾಯಿತು.

9. ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ ಬಿಲ್ಲು ಪಾವತಿ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ, ಪರಿಶೀಲಿಸಿ ವರದಿ ನೀಡಲು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಕ್ಕೆ ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನೊಳಗೊಂಡ ಪ್ರತ್ಯೇಕ ಸಮಿತಿಗಳನ್ನು ರಚಿಸುವ ಬಗ್ಗೆ.

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ ರಾಜ್ಯದಲ್ಲಿ ಹಲವಾರು ರೈತ ಪ್ರತಿನಿಧಿಗಳು ಮತ್ತು ರೈತರು ಕಬ್ಬಿನ ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ ಬಿಲ್ಲು ಪಾವತಿ ಮತ್ತು ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರ / ಇಲಾಖೆಗೆ ದೂರುಗಳನ್ನು ನೀಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನು ಒಳಗೊಂಡಂತೆ ರಾಜ್ಯದ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಭಾಗಗಳಿಗೆ ಸೂಕ್ತವಿರುವ ಪ್ರತ್ಯೇಕ ಸಮಿತಿಗಳನ್ನು ರಚಿಸಿದಲ್ಲಿ, ರೈತರಿಗೆ ಕಾರ್ಖಾನೆಗಳು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಮಾಹಿತಿ ಲಭ್ಯವಾಗುವುದು ಮತ್ತು ಕಾರ್ಖಾನೆಗಳು ಎಚ್ಚರವಹಿಸಿ ಕಾರ್ಯನಿರ್ವಹಿಸಲು ಸಹಕಾರಿಯಾಗುವುದು. ಆದ್ದರಿಂದ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಭಾಗಗಳಿಗೆ ಎರಡು ಪ್ರತ್ಯೇಕ ಸಮಿತಿಗಳನ್ನು ರಚಿಸುವ ಸಂಬಂಧ ಮಂಡಳಿಯ ಅನುಮೋದನೆ ಕೋರಿದ ವಿಷಯವನ್ನು ಚರ್ಚಿಸಲಾಯಿತು. ಸದರಿ ವಿಷಯಕ್ಕೆ ಎಲ್ಲರೂ ಸಹಮತಿಯನ್ನು ವ್ಯಕ್ತಪಡಿಸಿದರು. ಮಾನ್ಯ ಸಚಿವರು ಮಾತನಾಡಿ ಇಂತಹ ಸಮಿತಿಗಳನ್ನು ರಚಿಸಲು ಹಾಲಿ ಇರುವ ಕಾಯ್ದೆಯಲ್ಲಿ ಅವಕಾಶದ ಬಗ್ಗೆ ಪರಿಶೀಲಿಸುವ ಅವಶ್ಯಕತೆ ಎಂದು ಹೇಳಿದರು. ಸದರಿ ಅವಕಾಶ ಇದ್ದರೆ ಮಾತ್ರ ಮುಂದಿನ ಕ್ರಮ ಜರುಗಿಸುವುದು ಸೂಕ್ತವೆಂದು ಹೇಳಿದರು.

ವಿಷಯ : ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ ಬಿಲ್ಲು ಪಾವತಿ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ, ಪರಿಶೀಲಿಸಿ ವರದಿ ನೀಡಲು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಕ್ಕೆ ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನೊಳಗೊಂಡ ಪ್ರತ್ಯೇಕ ಸಮಿತಿಗಳನ್ನು ರಚಿಸುವ ಬಗ್ಗೆ.

ಕ್ರಮ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು

10. 2024–25ನೇ ಸಾಲಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.) ನಿಗದಿಗೊಳಿಸುವ ಬಗ್ಗೆ.

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೃಷಿ ಭವನ, ನವದೆಹಲಿ ಇವರ ಪತ್ರ ಸಂಖ್ಯೆ 3(1)/2023–ಎಸ್‌ಪಿ I ದಿನಾಂಕ 27.02.2024 ರನ್ವಯ 2024–25ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಪಡಿಸಿದೆ.

1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.3400/–
2. ಶೇಡಕ 10.25ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆ.ಟನ್‌ಗೆ ರೂ. 332/– ರಂತೆ ಹೆಚ್ಚುವರಿ ಬೆಲೆ.
3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಡಕ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆ.ಟನ್‌ಗೆ ರೂ.332/–ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.
4. ಶೇಕಡ 9.50 ಅಥವಾ 9.50 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳೀಗೆ ಪ್ರತಿ ಮೆ.ಟನ್‌ಗೆ ರೂ.3151/– ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ.

ರಾಜ್ಯದ ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳು 2024–25ನೇ ಸಾಲಿನ ಕಬ್ಬು ನುರಿಸುವ ಕಾರ್ಯವನ್ನು ಜುಲೈ/ಆಗಸ್ಟ್ 2024ರ ಮಾಹೆಯಲ್ಲಿ ಪ್ರಾರಂಭಿಸುವುದರಿಂದ ಸದರಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ದರ ನಿಗದಿಗೊಳಿಸಿ, ಆದೇಶಿಸಬೇಕಾಗಿರುತ್ತದೆ ಎಂದು ಹೇಳಿದರು. ಈ ಹಿನ್ನಲೆಯಲ್ಲಿ 2023–24ನೇ ಸಾಲಿನಲ್ಲಿ ರಾಜ್ಯದ ದಕ್ಷಿಣ ಭಾಗದಲ್ಲಿ ಕಾರ್ಯನಿರ್ವಹಿಸಿರುವ 11 ಸಕ್ಕರೆ ಕಾರ್ಖಾನೆಗಳು ಸಲ್ಲಿಸಿದ ಆರ್.ಟಿ 8 (ಸಿ) ವರದಿಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2024–25ನೇ ಕಬ್ಬು ನುರಿಸುವ ಹಂಗಾಮಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ–2024ರ ಕಲಂ

9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಪ್ರಕಟಿಸಬೇಕಾಗಿರುತ್ತದೆ ಎಂದರು. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಗಳು ಸಕ್ಕರೆ ಇಳುವರಿಯನ್ನು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿಯಿಂದ ದೃಢೀಕರಿಸುವ ಪ್ರಮಾಣ ಪತ್ರವನ್ನು ಪಡೆದರೆ ಕಾರ್ಖಾನೆಗಳು ದಾಖಲಿಸುವ ಸಕ್ಕರೆ ಇಳುವರಿ ಖಚಿತವಾಗುವುದೆಂದು ಸಭೆಯಲ್ಲಿ ಭಾಗವಹಿಸಿದ ಶ್ರೀ. ಸಿ.ಬಿ. ಪಾಟೀಲ, ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಹೇಳಿದರು. ಈ ನಿಟ್ಟಿನಲ್ಲಿ ಸದರಿ ವಿಷಯವನ್ನು ಪರಿಗಣಿಸಿ ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಗಳಿಗೆ 2024-25ನೇ ಸಾಲಿಗೆ ಅನ್ವಯವಾಗುವ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವನ್ನು ನಿಯಮಾನುಸಾರ ನಿಗಧಿಪಡಿಸಲು ಸಭೆಯಲ್ಲಿ ಅನುಮೋದಿಸಲಾಯಿತು.

ವಿಷಯ : 2024-25ನೇ ಸಾಲಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.) ನಿಗದಿಗೊಳಿಸುವ ಬಗ್ಗೆ.

ಕ್ರಮ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು

11. ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಪ್ರತಿ ಮೆ. ಟನ್ ಕಬ್ಬಿಗೆ ರೂ.1/- ರಂತೆ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ವಂತಿಕೆ ಪಾವತಿಸುವ ಸಂಬಂಧ ಸಕ್ಕರೆ ಕಾರ್ಖಾನೆಗಳು ಮಾನ್ಯ ನ್ಯಾಯಾಲಯದಿಂದ ತಂದಿರುವ ತಡೆಯಾಜ್ಞೆಯನ್ನು ತೆರವುಗೊಳಿಸುವ ಬಗ್ಗೆ.

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ ರಾಜ್ಯದ ಕೆಲವು ಸಕ್ಕರೆ ಕಾರ್ಖಾನೆಗಳು ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಪ್ರತಿ ಮೆ. ಟನ್ ಕಬ್ಬಿಗೆ ರೂ.1/- ರಂತೆ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ವಂತಿಕೆ ಪಾವತಿಸುವ ಸಂಬಂಧ ಸಕ್ಕರೆ ಕಾರ್ಖಾನೆಗಳು ಮಾನ್ಯ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುತ್ತಾರೆ. ಸದರಿ ವಿಷಯದ ಕುರಿತು ಸನ್ಮಾನ್ಯ ಸಚಿವರೊಂದಿಗೆ ಚರ್ಚಿಸಿ ಈ ನಿಮಿತ್ತ ನ್ಯಾಯಾಲಯದಲ್ಲಿರುವ ಎಲ್ಲ ತಡೆಯಾಜ್ಞೆಗಳನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಹಾಲಿ ಇರುವ ನ್ಯಾಯವಾದಿಗಳಾದ ಶ್ರೀ ಮೂರ್ತಿ ದಯಾನಂದ ನಾಯಕ ಇವರ ಬದಲಾಗಿ ನ್ಯಾಯವಾದಿಗಳಾದ ಶ್ರೀ. ಪ್ರಶಾಂತ ಗೌಡರ, ಬೆಳಗಾವಿ ಇವರನ್ನು ನಿಯಮಿಸುವಂತೆ ಸೂಚಿಸಿರುತ್ತಾರೆ. ಈ ನಿಟ್ಟಿನಲ್ಲಿ ಸಭೆಯಲ್ಲಿ ಸದರಿ ಕ್ರಮವನ್ನು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿಯ ನಿರ್ದೇಶಕರು ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಿಷಯ : . ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಪ್ರತಿ ಮೆ. ಟನ್ ಕಬ್ಬಿಗೆ ರೂ.1/- ರಂತೆ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ವಂತಿಕೆ ಪಾವತಿಸುವ ಸಂಬಂಧ ಸಕ್ಕರೆ ಕಾರ್ಖಾನೆಗಳು ಮಾನ್ಯ ನ್ಯಾಯಾಲಯದಿಂದ ತಂದಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ನ್ಯಾಯವಾದಿಗಳಾದ ಶ್ರೀ. ಮೂರ್ತಿ ದಯಾನಂದ ನಾಯಕ ಇವರ ಬದಲಾಗಿ ಶ್ರೀ ಪ್ರಶಾಂತ ಗೌಡರ ಇವರನ್ನು ನಿಯಮಿಸುವ ಬಗ್ಗೆ.

ಕ್ರಮ : ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ.

12. 2022-23ನೇ ಹಂಗಾಮಿನಲ್ಲಿ ಪ್ರತಿ ಮೆ. ಟನ್‌ಗೆ ಎಫ್‌ಆರ್‌ಪಿ ದರಕ್ಕೂ ಮೇಲ್ಪಟ್ಟು ರೂ.100/- ರಂತೆ ಮತ್ತು ಎಥನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ರೂ.50/- ಹೀಗೆ ಒಟ್ಟು ರೂ.150/- ಗಳನ್ನು ಪಾವತಿಸುವಂತೆ ರಾಜ್ಯ ಸರ್ಕಾರವು ಹೊರಡಿಸಿರುವ ಆದೇಶಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದ ವಿವರಗಳನ್ನು ಚರ್ಚಿಸುವ ಕುರಿತು.

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಮಾತನಾಡಿ 2022-23ನೇ ಹಂಗಾಮಿನಲ್ಲಿ ಪ್ರತಿ ಮೆ. ಟನ್‌ಗೆ ಎಫ್‌ಆರ್‌ಪಿ ದರಕ್ಕೂ ಮೇಲ್ಪಟ್ಟು ರೂ.100/- ರಂತೆ ಮತ್ತು ಎಥನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ರೂ.50/- ಹೀಗೆ ಒಟ್ಟು ರೂ.150/- ಗಳನ್ನು ಪಾವತಿಸುವಂತೆ ರಾಜ್ಯ ಸರ್ಕಾರವು ಹೊರಡಿಸಿರುವ ಆದೇಶಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದ ವಿವರಗಳನ್ನು ಚರ್ಚಿಸುವ ಕುರಿತು ಕೆಳಗಿನ ವಿವರಗಳನ್ನು ಸಭೆಗೆ ನೀಡಿದರು.

- ಈ ವಿಷಯದ ಕುರಿತು ದಿನಾಂಕ 09.11.2022 ರಂದು ರಾಜ್ಯ ಸರ್ಕಾರವು ತಾಂತ್ರಿಕ ಸಮಿತಿಯನ್ನು ರಚಿಸಿ, ಕೇಂದ್ರ ಸರ್ಕಾರವು ಘೋಷಿಸಿದ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಹೆಚ್ಚಿಗೆ ರಾಜ್ಯ ಸರ್ಕಾರದಿಂದ ಕಬ್ಬಿನ ದರವನ್ನು ನಿಗದಿಪಡಿಸುವ ಸಂಬಂಧ ಸಾಧಕ-ಬಾಧಕಗಳ ಬಗ್ಗೆ ಪರಿಶೀಲಿಸಲು ಮತ್ತು ಸಕ್ಕರೆ ಕಾರ್ಖಾನೆಗಳು ಸಕ್ಕರೆ, ಎಥನಾಲ್ ಮತ್ತು ಇತರೆ ಉಪ ಉತ್ಪನ್ನಗಳ ಮಾರಾಟದಿಂದ ಪಡೆಯುವ ಆದಾಯದ ಲೆಕ್ಕಾಚಾರವನ್ನು ಅಧ್ಯಯನ ಮಾಡಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ 17.11.2022 ರಂದು ಸಭೆಯನ್ನು ಜರುಗಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ.
- ಸನ್ 2022-23ನೇ ಹಂಗಾಮಿನಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ಎಫ್‌ಆರ್‌ಪಿ ದರಕ್ಕೂ ಮೇಲ್ಪಟ್ಟು ಹೆಚ್ಚುವರಿ ಕಬ್ಬಿನ ಬಿಲ್ಲನ್ನು ಘೋಷಿಸಬೇಕೆಂದು ಚಳುವಳಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ 18.11.2022 ರಂದು ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಿ, ಸದರಿ ಭಾಗದ ಬಹುತೇಕ ಕಾರ್ಖಾನೆಗಳು ಸಕ್ಕರೆ ಮತ್ತು ಎಥನಾಲ್ ಜೊತೆಗೆ ಇತರೆ ಉಪ ಉತ್ಪನ್ನಗಳನ್ನು ಉತ್ಪಾದಿಸುತ್ತಿರುವುದನ್ನು ಪರಿಗಣಿಸಿ, ಸಕ್ಕರೆ ಕಾರ್ಖಾನೆಗಳು ಪತ್ರಿ ಮೆ.ಟನ್ ಕಬ್ಬಿಗೆ ರೂ.2850/- ರಂತೆ ನಿಗದಿಪಡಿಸುವುದು ಸೂಕ್ತವೆಂದು ಭಾವಿಸಿ, ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ

- ತದನಂತರ ದಿನಾಂಕ 05.12.2022 ರಂದು ನಡೆದ ಕಬ್ಬು ನಿಯಂತ್ರಣ ಮಂಡಳಿಯ ಸಭೆಯಲ್ಲಿ ನಿರ್ಣಯಿಸಿದಂತೆ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013, ತಿದ್ದುಪಡಿ ಅಧಿನಿಯಮ 2014ರ 4(ಎ) ಪ್ರಕಾರ ಅಧಿಸೂಚನೆ ಹೊರಡಿಸಿ, ಎಥನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಪ್ರತಿ ಮೆ.ಟನ್ ಒಂದಕ್ಕೆ ಎಫ್.ಆರ್.ಪಿ ದರದ ಮೇಲೆ ಹೆಚ್ಚುವರಿಯಾಗಿ ರೂ.50/- ನ್ನು ಪಾವತಿಸುವಂತೆ ದಿನಾಂಕ 05.12.2022 ರಂದು ಸೂಚಿಸಲಾಗಿತ್ತು.
- ಸದರಿ ಪ್ರಕರಣದ ವಿಚಾರಣೆಯ ಅವಧಿಯಲ್ಲಿ ಚುನಾವಣಾ ನೀತಿ ಸಂಹಿತೆ ಕೂಡ ಜಾರಿಯಲ್ಲಿದ್ದರಿಂದ ಸರ್ಕಾರದಿಂದ ಹೆಚ್ಚಿನ ತೀರ್ಮಾನಗಳನ್ನು ಕೈಗೊಳ್ಳಲು ವಿಳಂಬವಾಗಿರುತ್ತದೆ. ಈ ವಿಷಯ ಸಂಬಂಧ ದಿನಾಂಕ 06.10.2023 ರಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ತೀರ್ಮಾನದ ಪ್ರಮುಖ ಅಂಶಗಳು ಕೆಳಗಿನಂತೆ ಇವೆ :

1. ದಿನಾಂಕ 05.10.2023 ರಂದು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು (ಪ್ರಭಾರ), ಬೆಂಗಳೂರು ಇವರು ಸಲ್ಲಿಸಿರುವ ಅಫಿಡವಿಟ್ ಕಡೆಗೆ ಅಡಿಷನಲ್ ಅಡ್ವೊಕೇಟ್ ಜನರಲ್ ರವರು ಮಾನ್ಯ ನ್ಯಾಯಾಲಯದ ಗಮನ ಸೆಳೆದು, ಕಬ್ಬಿಗೆ 2022-23ನೇ ಸಾಲಿಗೆ ಆಕ್ಷೇಪಿತ ಹೆಚ್ಚುವರಿ ದರವನ್ನು ನಿಗದಿಪಡಿಸಿದಾಗ 2022-23ನೇ ಹಂಗಾಮು ಚಾಲ್ತಿಯಲ್ಲಿತ್ತು. ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುವಾಗಲೇ 2022-23ನೇ ಹಂಗಾಮು ಮುಕ್ತಾಯಗೊಂಡಿದ್ದು, ವರ್ಷಾಂತ್ಯದ ಆದಾಯಪ್ರಾಪ್ತಿ ವಿವರಗಳು ಸಕ್ಕರೆ ಕಾರ್ಖಾನೆಗಳ ನಿರ್ವಹಿಸುತ್ತದೆ. ಆದ್ದರಿಂದ 2022-23ನೇ ಸಾಲಿನ ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸುವಂತೆ ರಾಜ್ಯದ ಎಲ್ಲಾ 74 ಕಾರ್ಯನಿರತ ಸಕ್ಕರೆ ಕಾರ್ಖಾನೆಗಳಿಗೆ ಪತ್ರ ಬರೆಯಲಾಗಿತ್ತು. ಇದಕ್ಕೆ 35 ಕಾರ್ಖಾನೆಗಳು ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸಿದ್ದು, ಮಾಹಿತಿ ಸಲ್ಲಿಸದ ಉಳಿದ ಕಾರ್ಖಾನೆಗಳಿಗೆ ಸದರಿ ಮಾಹಿತಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ದಿನಾಂಕ 25.09.2023 ಮತ್ತು 30.09.2023 ರಂದು ಪತ್ರ ಬರೆಯಲಾಗಿತ್ತು.
2. ಪ್ರತಿವಾದಿ ರಾಜ್ಯವು ಉಳಿದ ಸಕ್ಕರೆ ಕಾರ್ಖಾನೆಗಳು ಇನ್ನೊಂದು ವಾರದೊಳಗೆ ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸಬಹುದೆಂದು ನಿರೀಕ್ಷಿಸುತ್ತಾ, ಆದಾಯ ಪ್ರಾಪ್ತಿ ಬಗ್ಗೆ ಸೆಕ್ಷನ್ 4-ಸಿ ಎಕ್ಸ್‌ಪರ್ಟ್ ಕಮಿಟಿಯವರು ಆದಷ್ಟು ಶೀಘ್ರವಾಗಿ ವರದಿ ನೀಡಲು ಅನುವಾಗುವಂತೆ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ ರವರಿಗೆ ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಸಲ್ಲಿಸಲು ನಿರ್ದೇಶಿಸುವಂತೆ ಕೋರಿದ್ದರು.

3. ಈ ಹಿನ್ನೆಲೆಯಲ್ಲಿ ವಾದ-ಪ್ರತಿವಾದವನ್ನು ಆಲಿಸಿದ ನ್ಯಾಯಾಲಯವು ಸನ್ 2022-23ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ 74 ಸಕ್ಕರೆ ಕಾರ್ಖಾನೆಗಳ ಪೈಕಿ 35 ಕಾರ್ಖಾನೆಗಳು ಮಾತ್ರ ಆದಾಯಪ್ರಾಪ್ತಿ ಅಂಕಿ-ಅಂಶಗಳ ಮಾಹಿತಿಯನ್ನು ಸಲ್ಲಿಸಿರುತ್ತವೆ. ಇನ್ನುಳಿದ ಕಾರ್ಖಾನೆಗಳು ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಮಾಹಿತಿ ಸಲ್ಲಿಸದೆ ಇರುವ ಕಾರ್ಖಾನೆಗಳು ಎರಡು ವಾರಗಳ ಒಳಗಾಗಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸುವಂತೆ ನಿರ್ದೇಶನ ನೀಡಿ, ಈಗಾಗಲೇ ಹೆಚ್ಚುವರಿಯಾಗಿ ಕಬ್ಬಿನ ಬಿಲ್ಲನ್ನು ಪಾವತಿಸಿದ ಕಾರ್ಖಾನೆಗಳನ್ನು ಹೊರತುಪಡಿಸಿ ಇದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ವಿಚಾರಣೆಗೆ ಮುಕ್ತವಾಗಿರಿಸಿ, ರಿಟ್ ಅರ್ಜಿಗಳನ್ನು ವಿಲೇಗೊಳಿಸಲಾಗಿದೆ.

4. ಈ ವಿಷಯಕ್ಕೆ ಸಂಬಂಧಿಸಿದಂತೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಎಲ್ಲ ಕಾರ್ಖಾನೆಗಳಿಂದ ಮಾಹಿತಿಯನ್ನು ಪಡೆದು ನಿರ್ದೇಶಕರು, ಎಸ್. ನಿಜಲಿಂಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ಆದಾಯಪ್ರಾಪ್ತಿಯ ವರದಿಯನ್ನು ನೀಡುವಂತೆ ಸೂಚಿಸಿ ದಿನಾಂಕ 16.01.2024 ರಂದು ರಾಜ್ಯದ ಸಕ್ಕರೆ ಕಾರ್ಖಾನೆಗಳು ಸಲ್ಲಿಸಿರುವ ಅಫ್‌ಡೆವಿಟ್‌ಗಳ ಪ್ರಕಾರ 2022-23ನೇ ಹಂಗಾಮಿನ ಆದಾಯ ಪ್ರಾಪ್ತಿ ವಿವರಗಳನ್ನು ವಿಶ್ಲೇಷಣೆ ಮಾಡಿರುವ ವರದಿಯನ್ನು ಪಡೆದಿರುತ್ತಾರೆ. ರಾಜ್ಯದ 2022-23ನೇ ಸಾಲಿನ ಹಂಗಾಮಿನಲ್ಲಿ 74 ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಆದಾಯ ಪ್ರಾಪ್ತಿಯ ವಿವರಗಳನ್ನು ಸಹ ಪಡೆಯಲಾಗಿದೆ.

ಅ) ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ 4-ಡಿ ಯಲ್ಲಿರುವಂತೆ ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ದೇಶಿಸಲು ಪರಿಗಣಿಸಬೇಕಾದ ಅಂಶಗಳು ಅಂದರೆ ಕಬ್ಬಿನಿಂದ ವಾಸ್ತವಿಕವಾಗಿ ಪ್ರಾಪ್ತವಾದ ಆದಾಯ ಮತ್ತು ಸಕ್ಕರೆ ಉತ್ಪಾದನೆ ಹಾಗೂ ಅದರ ಉಪ ಉತ್ಪತ್ತಿ ಯೆಂದರೆ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್‌ಮಿಡ್ ಮತ್ತು ಯಾವುದೇ ಇತರೆ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ ಇವುಗಳ ಮಾರಾಟ, ಮಾಡಿರದಿದ್ದಾಗ್ಯೂ, ಮಾರಾಟಗಳು, ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನು ಪರಿಗಣಿಸಿಸಲು ಅವಕಾಶವಿರುತ್ತದೆ.

ಆ) ಆದ್ದರಿಂದ ರಾಜ್ಯದ 74 ಕಾರ್ಖಾನೆಗಳ ಆದಾಯದ ಪ್ರಾಪ್ತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಇದರಲ್ಲಿ ವಾಸ್ತವಿಕವಾಗಿ ಸಕ್ಕರೆ, ಬಗ್ಯಾಸ್, ಕಾಕಂಬಿ ಮತ್ತು ಪ್ರೆಸ್‌ಮಡ್ ಇವುಗಳ ಮಾರಾಟದಿಂದ ವಾಸ್ತವಿಕವಾಗಿ ಪ್ರಾಪ್ತವಾಗಿರುವ ಆದಾಯಗಳ ವಿವರಗಳನ್ನು ಕ್ರೋಢಿಕರಿಸಿ ಪ್ರತಿ ಕಾರ್ಖಾನೆಗೆ ಪ್ರಾಪ್ತವಾಗಿರುವ ಒಟ್ಟು ಆದಾಯದ ಶೇ.70 ರಷ್ಟು ಆದಾಯವನ್ನು ಕಬ್ಬಿನ ದರವೆಂದು ಪರಿಗಣಿಸಿ ಕೇಂದ್ರ ಸರ್ಕಾರವು ಘೋಷಿಸಿದ ಲಾಭದಾಯಕ ಮತ್ತು ನ್ಯಾಯಯುತ ಬೆಲೆಗೆ ಹೋಲಿಸಿ ಪರಿಶೀಲಿಸಲಾಗಿದೆ.

ಇ) 74 ಕಾರ್ಖಾನೆಗಳ ಆದಾಯದ ಪ್ರಾಪ್ತಿಗಳನ್ನು ಪರಿಶೀಲಿಸಿದಾಗ ಕೇವಲ 5 ಕಾರ್ಖಾನೆಗಳು ಕೇಂದ್ರ ಸರ್ಕಾರವು ಘೋಷಿಸಿದ ಲಾಭದಾಯಕ ಮತ್ತು ನ್ಯಾಯಯುತ ಕಬ್ಬಿನ ಬೆಲೆಗಿಂತ ಹೆಚ್ಚಿಗೆ ನೀಡಲು ಅವಕಾಶವಿದೆಯೆಂದು ಕಂಡು ಬಂದಿದೆ. ಆದಾಯ ಪ್ರಾಪ್ತಿ ವಿವರ ವಿಶ್ಲೇಷಣೆಯಂತೆ ಐದು ಸಕ್ಕರೆ ಕಾರ್ಖಾನೆಗಳು ನೀಡಬೇಕಾದ ಹೆಚ್ಚುವರಿ ಮೊತ್ತವು ಕೇಂದ್ರ ಸರ್ಕಾರವು ಘೋಷಿಸಿದ ಲಾಭದಾಯಕ ಮತ್ತು ನ್ಯಾಯಯುತ ಕಬ್ಬಿನ ಬೆಲೆಗಿಂತ ಹೆಚ್ಚಿಗೆ ಇರುತ್ತದೆ. ಅವುಗಳ ವಿವರ ಕೆಳಗಿನಂತೆ ಇರುತ್ತದೆ.

ಅ. ನಂ	ಕಾರ್ಖಾನೆಯ ಹೆಸರು	ಪ್ರತಿ ಮೆ.ಟನ್ನಿಗೆ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ)
1	ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ, ಕಾಕತಿ	253
2	ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ಹಳಿಯಾಳ	119
3	ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನಾನಗರ	53
4	ಶ್ರೀ ಕೇದಾರನಾಥ್ ಶುಗರ್ಸ್ ಅಂಡ್ ಅಗ್ರೋ ಪ್ರಾಡಕ್ಟ್ಸ್ ಲಿ., ಬಾದಾಮಿ	21.00
5	ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ	8.00

ಈ) ಮುಂದುವರೆದು, 69 ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ಬೆಲೆಯನ್ನು ನೀಡಲು ಅರ್ಹ ಇರುವುದಿಲ್ಲವೆಂದು ಕಂಡು ಬಂದಿದೆ. ಈ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ಹಾಲಿ ಇರುವ ನಿಯಮದನುಸಾರ 4ಸಿ ತಾಂತ್ರಿಕ ಸಮಿತಿಯಲ್ಲಿ ಮಂಡಿಸಿ, ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತದೆ. ಆದರೆ, ಈ ವಿಷಯದ ಕ್ಲಿಷ್ಟತೆಯನ್ನು ಪರಿಶೀಲಿಸಿ, ಸದರಿ ವಿಷಯವನ್ನು ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ಚರ್ಚಿಸಿ, ಮುಂದೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಸಲಹೆಗಳನ್ನು ಪಡೆಯಲು ಸಭೆಗೆ ಮಂಡಿಸಲಾಗಿದೆ ಎಂದು ಹೇಳಿದರು.

ಉ) ಈ ವಿಷಯದ ಕುರಿತು ಚರ್ಚಿಸುವಾಗ ಶ್ರೀ ಕುರುಬೂರು ಶಾಂತಕುಮಾರ ಇವರು ಮಾಡನಾಡಿ ಶ್ರೀ ಬನ್ನಾರಿ ಎಂ.ಎನ್ ಸಕ್ಕರೆ ಕಾರ್ಖಾನೆಯವರು ಆದಾಯ ಪ್ರಾಪ್ತಿಯನ್ನು ಪರಿಗಣಿಸುವಾಗ ಕಾಕಂಬಿಯ ಬೆಲೆಯನ್ನು ಕಡಿಮೆ ತೋರಿಸಿರುತ್ತಾರೆ. ಈ ನಿಮಿತ್ತ ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ

ಸಕ್ಕರೆ ನಿರ್ದೇಶಕರು ಇವರು ಮಾತನಾಡಿ ಈಗಾಗಲೇ ಶ್ರೀ. ಕುರುಬೂರು ಶಾಂತಕುಮಾರವರು ಸದಸ್ಯರಾಗಿರುವ ಮಾನ್ಯ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ರೈತರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ದಿಶೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ವರದಿಯನ್ನು ನೀಡುವಂತೆ ಒತ್ತಾಯಿಸಿ, ಸಭೆ ಕರೆದು ಮಾಹಿತಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿರುವಂತೆ ಕೋರಿದರು. ಈ ವಿಷಯದ ಕುರಿತು ಸನ್ಮಾನ್ಯ ಸಚಿವರು ಕೂಡ ಕಾರ್ಖಾನೆಯವರು ತಮ್ಮದೇ ಆದ ಮದ್ಯಸಾರ/ಎಥನಾಲ್ ಘಟಕಗಳಿಗೆ ಕಾಕಂಬಿಯನ್ನು ಮಾರಾಟ ಮಾಡಿ ಕಡಿಮೆ ದರವನ್ನು ದಾಖಲಿಸುವ ಸಾಧ್ಯತೆ ಇರುವುದರಿಂದ ಇದರ ಬಗ್ಗೆ ಹೆಚ್ಚು ಜಾಗೃತಿವಹಿಸುವ ಅವಶ್ಯಕತೆ ಇದೆ ಎಂದರು.

ಊ) ಈ ದಿಸೆಯಲ್ಲಿ ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯವು ನಿರ್ದೇಶನ ನೀಡಿ ಪ್ರಸ್ತುತ ರಿಟ್ ಅನ್ನು ವಿಲೇವಾರಿ ಮಾಡಿರುವುದರಿಂದ ಮತ್ತು 4-ಸಿ ಕಮಿಟಿಯ ವರದಿಯನ್ನು ಸಲ್ಲಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು ಅವಶ್ಯವಿರುವುದೆಂದು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಈ ದಿಶೆಯಲ್ಲಿ 4-ಸಿ ಕಮಿಟಿ ಸಭೆಯನ್ನು ಜರುಗಿಸಿ ವರದಿಯನ್ನು ಪುನಃ ಕಬ್ಬು ನಿಯಂತ್ರಣ ಮಂಡಳಿ ಸಭೆಗೆ ಮಂಡಿಸುವ ಅವಶ್ಯಕತೆ ಇರುವುದರಿಂದ ಸಭೆಯಲ್ಲಿ ಸರ್ವಾನುಮತದಿಂದ 4-ಸಿ ಕಮಿಟಿ ಸಭೆಯನ್ನು ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಜರುಗಿಸಿ ಸದರಿ ಸಮಿತಿಯ ವರದಿಯನ್ನು ಮುಂದಿನ ಕಬ್ಬು ನಿಯಂತ್ರಣ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

ವಿಷಯ : 2022-23ನೇ ಹಂಗಾಮಿನಲ್ಲಿ ಪ್ರತಿ ಮೆ. ಟನ್‌ಗೆ ಎಫ್‌ಆರ್‌ಪಿ ದರಕ್ಕೂ ಮೇಲ್ಪಟ್ಟು ರೂ.100/- ರಂತೆ ಮತ್ತು ಎಥನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ರೂ.50/- ಹೀಗೆ ಒಟ್ಟು ರೂ.150/- ಗಳನ್ನು ಪಾವತಿಸುವ ದಿಶೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದ ವಿವರಗಳನ್ನು ಚರ್ಚಿಸಿ ಆದಾಯ ಪ್ರಾಪ್ತಿಯ ವಿವರಗಳ ವರದಿಗಳನ್ನು ನೀಡಲು 4-ಸಿ ಸಮಿತಿಯ ಸಭೆ ಜರುಗಿಸುವುದು.

ಕ್ರಮ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು

ಸಭೆಯು ವಂದನಾರ್ಪನೆಯೊಂದಿಗೆ ಮುಕ್ತಾಯವಾಯಿತು.

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ
ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು ಮತ್ತು
ಕಬ್ಬು ನಿಯಂತ್ರಣ ಮಂಡಳಿ

ಅನುಬಂಧ - 1 ಸಿ

ದಿನಾಂಕ: 29.11.2024 ರಂದು ಬೆಳಿಗ್ಗೆ 11.00 ಗಂಟೆಗೆ ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು – ಕಬ್ಬು ನಿಯಂತ್ರಣ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮಾರಾಟ ಮಂಡಳಿಯ ಸಭಾಂಗಣ, ಬೆಂಗಳೂರಿನಲ್ಲಿ ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಯ ನಡವಳಿಗಳು.

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡಿ, ಸನ್ಮಾನ್ಯ ಶ್ರೀ. ಶಿವಾನಂದ ಎಸ್. ಪಾಟೀಲ್, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರನ್ನು ಸಭೆಗೆ ಆಹ್ವಾನಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕಾರ್ಯಸೂಚಿಯಂತೆ ಸಭೆಯನ್ನು ಜರುಗಿಸುವಂತೆ ಕೋರಿದರು. ಅದರಂತೆ ಕಬ್ಬು ನಿಯಂತ್ರಣ ಮಂಡಳಿ ಸಭೆಗೆ ಆಗಮಿಸಿದ ಸರ್ಕಾರದ ಎಲ್ಲಾ ರೈತ ಪ್ರತಿನಿಧಿ ಸದಸ್ಯರು, ಅಧಿಕಾರಿಗಳು ಹಾಗೂ ವಿಶೇಷ ಆಹ್ವಾನಿತರು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಸಭೆಯನ್ನು ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವಿಷಯಗಳ ಕಾರ್ಯಸೂಚಿಯಂತೆ ಸಭೆಗೆ ವಿಷಯಗಳನ್ನು ಮಂಡಿಸಿದರು.

1. **ಸಭಾ ನೋಟಿಸು ಓದಿ ದಾಖಲಿಸಲಾಯಿತು.**
2. **ದಿನಾಂಕ 29.06.2024 ರ ಸಭೆಯ ನಡುವಳಿ ಹಾಗೂ ಅದರ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಯಲ್ಲಿ ದೃಢೀಕರಿಸಲಾಯಿತು.**
3. **ಸನ್ 2023–24ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮಿನಿಂದ ತಕ್ಷಣದಿಂದ ಜಾರಿಗೆ ಬರುವಂತೆ ಕಡ್ಡಾಯವಾಗಿ ಎಸ್.ಓ.ಪಿ. ಯನ್ನು ಕಾನೂನು ಮಾಪನಾಶಾಸ್ತ್ರ ಇಲಾಖೆ ಇವರು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಅನುಷ್ಠಾನಗೊಳಿಸುವುದು:**

ಈ ನಿಮಿತ್ತ ಮಾನ್ಯ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ಸರ್ಕಾರದಿಂದ ಕೈಗೊಂಡ ಕ್ರಮಗಳ ಬಗ್ಗೆ ವಿವರಗಳನ್ನು ನೀಡಿದರು.

- ರಾಜ್ಯದ 79 ಸಕ್ಕರೆ ಕಾರ್ಖಾನೆಗಳ ಪೈಕಿ 73 ಕಾರ್ಖಾನೆಗಳು ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಂಡಿದ್ದು, ಆರು ಕಾರ್ಖಾನೆಗಳ ಮಾತ್ರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿವಿಧ ಪೀಠಗಳಲ್ಲಿ ಸರ್ಕಾರವು ಹೊರಡಿಸಿರುವ ಎಸ್‌ಓಪಿ ವಿರುದ್ಧ ಮಧ್ಯಂತರ ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತಾರೆ ಎಂದು ತಿಳಿಸುತ್ತಾ, ಈ ಎಲ್ಲಾ ಪ್ರಕರಣಗಳಿಗೆ ಕಂಡಿಕೆವಾರು ಷರಾ, ಆಕ್ಷೇಪಣೆ ಹೇಳಿಕೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ

ತಿಳಿಸಿದರು. ಮಾನ್ಯ ನ್ಯಾಯಾಲಯದಲ್ಲಿ ಸದರಿ ಪ್ರಕರಣಗಳ ಮುಂದಿನ ವಿಚಾರಣಾ ದಿನಾಂಕ:13.12.2024 ಎಂದು ತಿಳಿಸಿದರು ಹಾಗೂ ಶ್ರೀಮತಿ.ಪ್ರತಿಮಾ ಹೊನ್ನಾಪುರ, ಅಪರ ಅಡ್ವೋಕೇಟ್ ಜನರಲ್, ಇವರು ಸರ್ಕಾರದ ಪರವಾಗಿ ವಾದ ಮಂಡಿಸಿಲಿದ್ದಾರೆಂದು ಸಭೆಗೆ ತಿಳಿಸಿದರು. ಶ್ರೀ.ಕುರುಬೂರು ಶಾಂತಕುಮಾರ, ವಿಶೇಷ ಆಹ್ವಾನಿತರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವ ಸಕ್ಕರೆ ಕಾರ್ಖಾನೆಗಳ ಪಟ್ಟಿಯನ್ನು ಕೋರಿದರು.

ಈ ಕೆಳಗಿನಂತೆ ಆರು ಸಕ್ಕರೆ ಕಾರ್ಖಾನೆಗಳ ಪಟ್ಟಿಯನ್ನು ನಮೂದಿಸಿದರು.

ಕ್ರಸಂ	ಕಾರ್ಖಾನೆಯ ಹೆಸರು
1	ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್, ಮಂಡ್ಯ
2	ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್, ಹಾಸನ
3	ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ, ಬೀದರ್
4	ಭಾಲ್ಕೇಶ್ವರ್ ಶುಗರ್ಸ್ ಲಿ.,
5	ದಾವಣಗೆರೆ ಶುಗರ್ಸ್
6	ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ

ಸದರಿ ವಿಷಯದ ಕುರಿತು ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾನ್ಯ ನ್ಯಾಯಾಲಯದಲ್ಲಿ ನೀಡಿರುವ ತಡೆಯಾಜ್ಞೆಯನ್ನು ಕೂಡಲೇ ತೆರವುಗೊಳಿಸಲು ಸೂಚಿಸಿದರು. ಕೃಷಿ ಆಯುಕ್ತರು ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವ ಹಂಗಾಮಿನ ಮಧ್ಯದ ಅವಧಿಯಲ್ಲಿ ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಕಷ್ಟಸಾಧ್ಯವಾಗುತ್ತದೆ ಎಂದು ಸಕ್ಕರೆ ಕಾರ್ಖಾನೆಗಳು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವ ರಿಟ್ ಅರ್ಜಿಗಳಲ್ಲಿ ತಿಳಿಸಿರುವುದರಿಂದ ಮಾನ್ಯ ನ್ಯಾಯಾಲಯ ತಡೆಯಾಜ್ಞೆ ನೀಡಿರುತ್ತದೆ ಎಂದು ಸಭೆಗೆ ತಿಳಿಸಿದರು. ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮಾತನಾಡಿ, ಈ ಸಂಬಂಧ 27.11.2023 ರಂದು ಕಾನೂನುಮಾಪನ ಶಾಸ್ತ್ರ ನಿಯಂತ್ರಕರು ಎಸ್.ಓ.ಪಿ ಜಾರಿ ಮಾಡಿರುತ್ತಾರೆ. ಆ ಸಂದರ್ಭದಲ್ಲಿ 2023-24ನೇ ಸಾಲಿನ ಕಬ್ಬು ನುರಿಸುವ ಹಂಗಾಮು ಚಾಲ್ತಿಯಲ್ಲಿ ಇದ್ದುದ್ದರಿಂದ ನ್ಯಾಯಾಲಯದಿಂದ ತಡೆಯಾಜ್ಞೆ ಸಿಕ್ಕಿರುತ್ತದೆ. ಆದರೆ, ಪ್ರಸ್ತುತ 2023-24ನೇ ಸಾಲಿನ ಹಂಗಾಮು ಮುಕ್ತಾಯವಾಗಿರುವುದರಿಂದ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಡಿಜಿಟಲೇಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಬೇಕಾಗಿರುತ್ತದೆ ಎಂದು ತಿಳಿಸಿದರು. ಆದರೆ, ಈ ಮೇಲ್ಕಂಡ ಆರು

ಸಕ್ಕರೆ ಕಾರ್ಖಾನೆಗಳು ಡಿಜಿಟಲೇಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಂಡಿರುವುದಿಲ್ಲವೆಂದು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದರೆ ತಡೆಯಾಜ್ಞೆ ತೆರವುಗೊಳಿಸಬಹುದೆಂದು ತಿಳಿಸಿದರು.

ಶ್ರೀ ಬಾಬುರಾವ್ ತುಂಬಾ, ಸದಸ್ಯರು ಕಬ್ಬು ನಿಯಂತ್ರಣ ಮಂಡಳಿ ಇವರು ಈ ಆರು ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ ಜಾರಿಗೊಳಿಸಿ, ಕಡ್ಡಾಯವಾಗಿ ಡಿಜಿಟಲೇಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳಲು ಸೂಚಿಸುವಂತೆ ಸಲಹೆ ನೀಡಿದರು.

ಸದರಿ ವಿಷಯದ ಕುರಿತು ಶ್ರೀ ಬಡಗಳಪುರ ನಾಗೇಂದ್ರ, ಸದಸ್ಯರು, ಕಬ್ಬು ನಿಯಂತ್ರಣ ಮಂಡಳಿ, ಇವರು ಮಾನ್ಯ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ರೈತರ ಹಿತದೃಷ್ಟಿಯಿಂದ ತಕ್ಷಣವೇ ತೆರವುಗೊಳಿಸುವಂತೆ ಕೋರಿದರು. ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡಿ, ರೈತರ ಮೂಲಕ ಮಾನ್ಯ ನ್ಯಾಯಾಲಯದಲ್ಲಿ ಸದರಿ ಪ್ರಕರಣಗಳಿಗೆ ಮಧ್ಯಂತರ ಅರ್ಜಿಯನ್ನು ದಾಖಲಿಸುವಂತೆ ರೈತ ಸಂಘದ ಮುಖಂಡರು ಹಾಗೂ ಮಂಡಳಿಯ ಸದಸ್ಯರಾದ ಶ್ರೀ ಕುರುಬೂರು ಶಾಂತಕುಮಾರ್ ಮತ್ತು ಶ್ರೀ ಬಡಗಲಪುರ ನಾಗೇಂದ್ರ ಇವರಿಗೆ ಸೂಚಿಸಿದರು.

ಕಬ್ಬಿನ ತೂಕದ ಯಂತ್ರಗಳಲ್ಲಿನ ಲೋಪದೋಷಗಳಿಂದಾಗಿ ಕಬ್ಬಿನ ತೂಕದಲ್ಲಿ ವ್ಯತ್ಯಾಸವಾಗಿ ಮೋಸಕ್ಕೆ ಒಳಗಾದ ರೈತರು ಹಾಗೂ ಕಬ್ಬು ಬೆಳೆಗಾರ ಸಂಘಗಳು ತಮ್ಮ ದೂರುಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ /ತಹಶೀಲ್ದಾರ್‌ರವರಿಗೆ ನೇರವಾಗಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸುವಂತೆ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಜಾಹೀರಾತು ನೀಡುವಂತೆ ಸೂಚಿಸಿದರು. ಆಯುಕ್ತರು ಈ ಸಂಬಂಧ ಈಗಾಗಲೇ ಜಾಹೀರಾತು ನೀಡಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಪ್ರಸ್ತುತ ಸಾಲಿನಲ್ಲಿಯೂ ಸಹ ರೈತರಲ್ಲಿ ಅರಿವು ಮೂಡಿಸುವ ಸಂಬಂಧ ಮೇಲ್ಕಂಡಂತೆ ಪತ್ರಿಕೆಗಳಲ್ಲಿ ಜಾಹೀರಾತು ನೀಡಲು ಅಧ್ಯಕ್ಷರು ಸೂಚಿಸಿದರು.

ಶ್ರೀ ಕುರುಬೂರು ಶಾಂತಕುಮಾರ್, ವಿಶೇಷ ಆಹ್ವಾನಿತರು, ಕಬ್ಬು ನಿಯಂತ್ರಣ ಮಂಡಳಿ ಇವರು ಕಬ್ಬನ್ನು ತೂಕ ಮಾಡಿದ ತಕ್ಷಣ ರೈತರ ಮೊಬೈಲ್ ಸಂಖ್ಯೆಗೆ ತೂಕದ ಕುರಿತು ಮಾಹಿತಿ ರವಾನೆಯಾಗಬೇಕೆಂದು ತಿಳಿಸಿದರು. ಸದರಿ ವಿಷಯದ ಕುರಿತು ಶ್ರೀ ಬಾಬುರಾವ್ ತುಂಬಾ ಮತ್ತು ಶ್ರೀ.ಭಕ್ಷಿ, ಇವರು ಈಗಾಗಲೇ ಮಹಾತ್ಮಾಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಗೋದಾವರಿ ಶುಗರ್ಸ್ ಲಿ ಕಾರ್ಖಾನೆಗಳಲ್ಲಿ ಅಳವಡಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಕೃಷಿ ಆಯುಕ್ತರು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಈ ಪ್ರಕ್ರಿಯೆಯನ್ನು ಅಳವಡಿಸಲು ಸಲಹೆ ನೀಡಬಹುದೆಂದು ತಿಳಿಸಿದರು.

ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನಾ ನಗರ, ಬಾಗಲಕೋಟೆ ಈ ಕಾರ್ಖಾನೆಯು ಕಬ್ಬು ನುರಿಸುವ ಹಂಗಾಮಿನ ಪೂರ್ವದಲ್ಲಿ ಸ್ಟಾಂಪಿಂಗ್ ಮಾಡಲು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಂದ ಪ್ರಸ್ತಾವನೆ ಸಲ್ಲಿಸಬೇಕೆಂದು ಕೋರಿದರು.

ಕ್ರಮ: ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ

ಕ್ರಮ: ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

4. **2023-24ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿರುವ ಕಬ್ಬಿನ ಪ್ರಮಾಣ, ಉತ್ಪಾದಿಸಿರುವ ಸಕ್ಕರೆ, ಸಕ್ಕರೆ ಇಳುವರಿ ಹಾಗೂ ಕಬ್ಬು ಬಿಲ್ಲು ಪಾವತಿಸಿರುವ ಹಾಗೂ ಹಿಂದಿನ ಸಾಲುಗಳ ಬಾಕಿ ಬಗ್ಗೆ.**

2023-24 ನೇ ಸಾಲಿನಲ್ಲಿ ರಾಜ್ಯದ 76 ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯವನ್ನು ನಿರ್ವಹಿಸಿರುತ್ತವೆ. ಈ ಕಾರ್ಖಾನೆಗಳು ಸದರಿ ಸಾಲಿನಲ್ಲಿ 585.07 ಲಕ್ಷ ಮೆ.ಟನ್ ಕಬ್ಬನ್ನು ಅರೆದು, 52.96 ಲಕ್ಷ ಮೆ.ಟನ್ ಸಕ್ಕರೆ ಉತ್ಪಾದಿಸಿ ಶೇ.9.05 ಸರಾಸರಿ ಇಳುವರಿಯನ್ನು ಪಡೆದಿರುತ್ತದೆ. ಸದರಿ ಸಾಲಿಗೆ ಈ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಂತೆ (ಎಫ್‌ಆರ್‌ಪಿ) ಪಾವತಿಸಬೇಕಾದ ಒಟ್ಟು ಕಬ್ಬು ಬಿಲ್ ಮೊತ್ತ ರೂ.19898.65 ಕೋಟಿಗಳಾಗಿದ್ದು, ಈ ಪೈಕಿ ಸಕ್ಕರೆ ಕಾರ್ಖಾನೆಗಳು ರೂ.20645.91 ಕೋಟಿಗಳಷ್ಟು ಕಬ್ಬಿನ ಬಿಲ್‌ನ್ನು ಪಾವತಿಸಿರುತ್ತದೆ. ಕೆಲವೊಂದು ಸಕ್ಕರೆ ಕಾರ್ಖಾನೆಗಳು ಎಫ್‌ಆರ್‌ಪಿ ದರಕ್ಕೂ ಮೇಲ್ಪಟ್ಟು ಕಬ್ಬಿನ ಬಿಲ್ಲು ಪಾವತಿಸಿರುತ್ತವೆ. ಸದರಿ ಸಾಲಿಗೆ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಾದ ಯಾವುದೇ ಬಾಕಿಯಿರುವುದಿಲ್ಲ ಹಾಗೂ 2022-23 ಮತ್ತು 2023-24 ನೇ ಸಾಲಿನಲ್ಲಿ ಕರ್ನಾಟಕವು ದೇಶದಲ್ಲಿ ಸಂಪೂರ್ಣ ಕಬ್ಬು ಬಿಲ್ಲು ಪಾವತಿ ಮಾಡಿದ ಪ್ರಥಮ ರಾಜ್ಯ ಎಂದು ತಿಳಿಸಿದರು. ಇದಕ್ಕಾಗಿ ಸಭೆಯಲ್ಲಿ ಒಕ್ಕೊರಲಿನಿಂದ ಮಾನ್ಯ ಸಚಿವರನ್ನು ಅಭಿನಂದಿಸಿದರು.

5. **2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಕಬ್ಬಿನ ಪ್ರಮಾಣ, ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ ಬಿಲ್ಲು ಪಾವತಿ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ, ಪರಿಶೀಲಿಸಿ ವರದಿ ನೀಡಲು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಕ್ಕೆ ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನೊಳಗೊಂಡ ಪ್ರತ್ಯೇಕ ಸಮಿತಿಗಳನ್ನು ರಚಿಸುವ ಬಗ್ಗೆ.**

ದಿನಾಂಕ:29.06.2024 ರಂದು ಮಾನ್ಯ ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕಬ್ಬು ನಿಯಂತ್ರಣ ಸಭೆಯಲ್ಲಿ ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ ಬಿಲ್ಲು ಪಾವತಿ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ, ಪರಿಶೀಲಿಸಿ ವರದಿ ನೀಡಲು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಕ್ಕೆ ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನೊಳಗೊಂಡ ಪ್ರತ್ಯೇಕ ಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಗಿತ್ತು.

ಅದರಂತೆ, ಸದರಿ ವಿಷಯವನ್ನು ಆಡಳಿತಾತ್ಮಕ ದೃಷ್ಟಿಯಿಂದ ಪರಿಶೀಲಿಸಿ ರಾಜ್ಯದ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದ ಭಾಗಗಳಿಗೆ ಸೂಕ್ತವಿರುವ ಪ್ರತ್ಯೇಕ ಸಮಿತಿಗಳನ್ನು ರಚಿಸಲು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಇಲಾಖೆ ಮತ್ತು ಕೃಷಿ ಮಾರುಕಟ್ಟೆ ಸಚಿವರನ್ನು ಕೋರಲು ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ದಿನಾಂಕ:17.08.2024 ರಂದು ಸಕ್ಕರೆ ನಿರ್ದೇಶನಾಲಯದಿಂದ ಪತ್ರ ಬರೆಯಲಾಗಿದೆ ಎಂದು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸಭೆಗೆ ತಿಳಿಸಿದರು. ತಕ್ಷಣದಲ್ಲೇ ಸಮಿತಿಯನ್ನು ರಚಿಸಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

6. 2024–25ನೇ ಸಾಲಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.) ನಿಗದಿಗೊಳಿಸಿರುವ ಬಗ್ಗೆ.

ಕೇಂದ್ರ ಸರ್ಕಾರವು ದಿನಾಂಕ:27.02.2024 ರಂದು 2024–25 ನೇ ಸಾಲಿನ ಸಕ್ಕರೆ ಹಂಗಾಮಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.)ಯನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿರುತ್ತದೆ.

1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.3400/–

2. ಶೇಕಡ 10.25 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 1ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.332/– ರಂತೆ ಹೆಚ್ಚುವರಿ ಬೆಲೆ.

3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.332/–ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು

4. ಶೇಕಡ 9.50 ಅಥವಾ 9.50ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.3151/– ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ.

2023–24ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸಿರುವ 79 ಸಕ್ಕರೆ ಕಾರ್ಖಾನೆಗಳು ಸಲ್ಲಿಸಿದ ಆರ್.ಟಿ 8(ಸಿ) ವರದಿಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2024–25ನೇ ಕಬ್ಬು ನುರಿಸುವ ಹಂಗಾಮಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು ಖರೀದಿ ಮತ್ತು ಸರಬರಾಜು ನಿಯಂತ್ರಣ (ತಿದ್ದುಪಡಿ) ಅಧಿನಿಯಮ–2014ರ

ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಸಕ್ಕರೆ ನಿರ್ದೇಶನಾಲಯದ ಆದೇಶ ದಿನಾಂಕ:06.11.2024 ರನ್ವಯ ಪ್ರಕಟಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ ಎಂದು ಸಕ್ಕರೆ ಆಯುಕ್ತರು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ರಾಜ್ಯದ ಯಾವ ಸಕ್ಕರೆ ಕಾರ್ಖಾನೆಯು ಎಫ್ಆರ್‌ಪಿ ದರಕ್ಕಿಂತ ಹೆಚ್ಚಿನ ಕಬ್ಬಿನ ಬಿಲ್ಲು ಪಾವತಿ ಮಾಡಿದ್ದರೆ, ಅಂತಹ ಕಾರ್ಖಾನೆಯವರನ್ನು ಕರೆಯಿಸಿ ಗೌರವ ಸನ್ಮಾನ ಮಾಡಿಸಬೇಕೆಂದು ತಿಳಿಸಿದರು. ಇದಕ್ಕೆ ಸಕ್ಕರೆ ಆಯುಕ್ತರು ಕಳೆದ ವರ್ಷ ಸನ್ಮಾನಿಸಲಾಗಿದೆ ಹಾಗೂ ಈ ವರ್ಷವು ಕೂಡ ಪುನಃ ಸನ್ಮಾನಿಸಲಾಗುವುದೆಂದು ತಿಳಿಸಿದರು.

7. 2023-24ನೇ ಸಾಲಿಗೆ ಹೊರಡಿಸಿರುವ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚಗಳ ಸಂಬಂಧಿಸಿದ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳು 2024-25 ನೇ ಸಾಲಿನ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸಿರುತ್ತವೆ. ದಿನಾಂಕ:23.11.2024 ರಂದು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಇಲಾಖೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಬ್ಬು ನಿಯಂತ್ರಣ ಮಂಡಳಿಯ ಸಭೆಯಲ್ಲಿ 2023-24 ನೇ ಸಾಲಿಗೆ ಅನ್ವಯವಾಗುವ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಮಾರ್ಗಸೂಚಿಗಳನ್ನು ಅನುಮೋದನೆ ನೀಡಲಾಗಿತ್ತು. ಅದರಂತೆ, ಸಕ್ಕರೆ ನಿರ್ದೇಶನಾಲಯದ ಪತ್ರ ದಿನಾಂಕ:07.12.2023 ರಂದು 2023-24 ನೇ ಹಂಗಾಮಿನ ಕಬ್ಬು ಕಟಾವು ಮತ್ತು ಸಾಗಾಣಿಕ ವೆಚ್ಚದ ಮಾರ್ಗಸೂಚಿಗಳ ವಿವರಗಳನ್ನು ಹೊರಡಿಸಿ ಎಲ್ಲಾ ಸಕ್ಕರೆ ಕಾರ್ಖಾನೆಗಳು ಸದರಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೂಚಿಸಲಾಗಿದೆ ಎಂದು ಸಕ್ಕರೆ ನಿರ್ದೇಶಕರು ಸಭೆಗೆ ತಿಳಿಸಿದರು. ಈ ಭಾರಿ ಮಾರ್ಗಸೂಚಿ ಪರಿಷ್ಕರಣೆ ಅವಶ್ಯವಿರುವುದಿಲ್ಲ ಎಂದು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

ಪ್ರಸ್ತುತ ಕಬ್ಬು ನುರಿಸುವ ಹಂಗಾಮು 2024-25 ರ ಕೇಂದ್ರ ಸರ್ಕಾರದ ನಿಗದಿ ಮಾಡಿದ ನ್ಯಾಯಯುತ ಮತ್ತು ಲಾಭದಾಯಕ ಕಬ್ಬಿನ (FRP) ದರ ಪ್ರತಿಶತ 10.25 ಸಕ್ಕರೆ ಇಳುವರಿಗೆ ಪ್ರತಿ ಟನ್ ಕಬ್ಬಿಗೆ ರೂ.3400/- ರಂತೆ ನಿಗದಿಪಡಿಸಲಾಗಿರುತ್ತದೆ. ಸದರಿ ದರವು ರೈತರಿಗೆ ಮಾನ್ಯವಿಲ್ಲವೆಂದು ಕಬ್ಬು ನಿಯಂತ್ರಣ ಮಂಡಳಿಯ ವಿಶೇಷ ಆಹ್ವಾನಿತರಾದ ಶ್ರೀ. ಕುರುಬೂರ ಶಾಂತಕುಮಾರ ಹಾಗೂ ರೈತ ಸಂಘದ ಮುಖಂಡರು ಸಭೆಗೆ ತಿಳಿಸಿದರು. ಇದರ ಬದಲಾಗಿ ಪ್ರತಿಶತ 9.25 ಸಕ್ಕರೆ ಇಳುವರಿಗೆ ಪ್ರತಿ ಟನ್‌ಗೆ ರೂ.3400/- ರಂತೆ ದರವನ್ನು ನೀಡಲು ವಿನಂತಿಸಿದರು. ಜೊತೆಗೆ ಕಬ್ಬಿನ ಬೇಸಾಯದ ಖರ್ಚು

ವೆಚ್ಚಗಳು ಎಕರೆಗೆ 30 ಟನ್ ಇಳುವರಿ ಹೊಂದಿದಲ್ಲಿ ಕಬ್ಬಿನ ಬೆಳೆಯು ಪೂರಕವಾಗಿರುವುದಿಲ್ಲ. ಅದರಂತೆ ಎಕರೆಗೆ 40 ಟನ್ ಇಳುವರಿ ಹೊಂದಿರುವ ಸಲ್ಪ ಪ್ರಮಾಣದ ಲಾಭದಾಯಕವಾಗುವುದೆಂದು ತಿಳಿಸುತ್ತ, ಕಡಿಮೆ ಅಂದರೆ ಹೆಕ್ಟೇರ್‌ಗೆ 100 ಟನ್ ಇಳುವರಿ ಪೂರಕವಾಗಿರುತ್ತದೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಮಾನ್ಯ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮಾತನಾಡುತ್ತ, ಸಿಎಸಿಪಿ ಸಮಿತಿ ಸಭೆಯಲ್ಲಿ ಪ್ರತಿ ಟನ್ ಕಬ್ಬಿನ ಬೇಸಾಯದ ವೆಚ್ಚವು ರೂ.3750/- ತಗಲುತ್ತದೆ. ಅದಕ್ಕಾಗಿ ಒಂದು ಟನ್‌ಗೆ ರೂ.3750-3950 ರ ದರ ನಿಗದಿಪಡಿಸಲು ಶಿಫಾರಸ್ಸು ಮಾಡಲಾಗಿತ್ತು. ಅಂತಿಮವಾಗಿ ಪ್ರತಿ ಟನ್‌ಗೆ ಶೇ.10.25 ಸಕ್ಕರೆ ಇಳುವರಿಗೆ ರೂ.3400.00 ನಿಗದಿ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿರುತ್ತದೆ. ಅದನ್ನು ಪಾಲಿಸುತ್ತೇವೆಂದು ತಿಳಿಸಿದರು. ದಕ್ಷಿಣ ಕರ್ನಾಟಕದ ಸಕ್ಕರೆ ಕಾರ್ಖಾನೆಗಳ ಇಳುವರಿಯು ಕಳೆದ ಹಂಗಾಮಿನಿಂದ ಕುಂಠಿತಗೊಂಡಿರುವುದು ಕಂಡು ಬಂದಿರುತ್ತದೆ. ಈ ದಿಶೆಯಲ್ಲಿ ದಕ್ಷಣ ಭಾಗದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಸುವ ಸಿಓ 571 ಕಬ್ಬಿನ ತಳಿ (ಸಕ್ಕರೆ ಅಂಶ ಕಡಿಮೆ ಇರುವ ತಳಿ) ಸುಮಾರು 90 ಪ್ರತಿಶತರಷ್ಟು ಇರುತ್ತದೆ. ಈ ತಳಿಯ ಪರ್ಯಾಯವಾಗಿ ಸಕ್ಕರೆ ಇಳುವರಿಯನ್ನು ಹೆಚ್ಚಿಸುವ ಕಬ್ಬಿನ ತಳಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಉತ್ತರ ಭಾಗದಲ್ಲಿ/ಉತ್ತರ ಪ್ರದೇಶ/ಮಹಾರಾಷ್ಟ್ರ ರಾಜ್ಯಗಳ ಸಕ್ಕರೆ ಕಾರ್ಖಾನೆಗಳ ಇಳುವರಿ ಹೆಚ್ಚಿಸಿದ ತಳಿಗಳನ್ನು ಅನುಸರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪರಿಶೀಲಿಸುವಂತೆ ಮಾನ್ಯ ಅಧ್ಯಕ್ಷರು, ಕೃಷಿ ಆಯುಕ್ತರಿಗೆ ತಿಳಿಸಿದರು.

ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಮಾತನಾಡುತ್ತ, ರಾಜ್ಯದ ಸಕ್ಕರೆ ಕಾರ್ಖಾನೆಗಳ ಸಕ್ಕರೆ ಇಳುವರಿ ಪರಿಶೀಲಿಸಲು ಹಾಗೂ ಸೂಕ್ತವಾದ ಕ್ರಮ ಕೈಗೊಳ್ಳಲು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಿದರು.

ಶ್ರೀ ಬಾಬುರಾವ ತುಂಬಾ, ಸದಸ್ಯರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡುತ್ತ, ಪ್ರಸ್ತುತ ಹಂಗಾಮಿನ ನ್ಯಾಯಯುತ ಮತ್ತು ಲಾಭದಾಯಕ ಕಬ್ಬಿನ (FRP) ದರದ ವಿಶ್ಲೇಷಣೆ ಬಗ್ಗೆ ಚರ್ಚಿಸಿ, ಕ್ರಮ ಕೈಗೊಳ್ಳಲು ಮಾನ್ಯ ಸಕ್ಕರೆ ಸಚಿವರ ಮೂಲಕ ಮಾನ್ಯ ಕೇಂದ್ರ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಸಚಿವರಿಗೆ ಮರು ಮಾರ್ಪಾಡು ಮಾಡುವ ಪ್ರಸ್ತಾವನೆಯನ್ನು ಸಲ್ಲಿಸುವಂತೆ ವಿನಂತಿಸಿದರು.

8. <u>ಮಾನ್ಯ ಅಧ್ಯಕ್ಷರ ಅನುಮತಿಯೊಂದಿಗೆ ಹೆಚ್ಚುವರಿ ವಿಷಯದ ಚರ್ಚೆ (4(ಸಿ) ಕಮಿಟಿ ವರದಿ)</u>

ಶ್ರೀ.ರಾಜಗೋಪಾಲ, ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ದಿನಾಂಕ:28.11.2024 ರಂದು ಜರುಗಿದ 4(ಸಿ) ಸಮಿತಿ ಸಭೆಯ ನಡವಳಿಗಳನ್ನು ಪಾವರ ಪಾಯಿಂಟ ಮುಖಾಂತರ ವಿವರಿಸಿದರು. ದಿನಾಂಕ: 29.06.2024 ರಂದು ಜರುಗಿದ ಕಬ್ಬು ನಿಯಂತ್ರಣ ಮಂಡಳಿಯಲ್ಲಿ ನಿರ್ಣಯಿಸಿದಂತೆ 74 ಕಾರ್ಖಾನೆಗಳ ಆದಾಯ ಪ್ರಾಪ್ತಿಗಳನ್ನು ವಿಶ್ಲೇಷಿಸಲಾಗಿದ್ದು,

ಇದರಲ್ಲಿ ಸಕ್ಕರೆ, ಬಗ್ಯಾಸ್, ಕಾಕಂಬಿ, ಪ್ರೆಸ್‌ಮಡ್ ಇವುಗಳ ಮಾರಾಟದಿಂದ ವಾಸ್ತವಿಕವಾಗಿ ಪ್ರಾಪ್ತವಾಗುವ ಒಟ್ಟು ಆದಾಯದ ಜೊತೆಗೆ ಜ್ಯೂಸ್ ಮತ್ತು ಬಿ-ಹೆವಿ ಕಾಕಂಬಿ ವರ್ಗಾವಣೆಯಿಂದ ಕುಂಠಿತಗೊಳ್ಳುವ ಸಕ್ಕರೆ ಇಳುವರಿ ಪ್ರಮಾಣವನ್ನು ಮತ್ತು ಅದರಿಂದ ಉತ್ಪಾದನೆಯಾಗಬಹುದಾದ ಎಥನಾಲ್ ಪ್ರಮಾಣ ಮತ್ತು ಆಧಾಯವನ್ನು ಆಧರಿಸಿ, ಕಾರ್ಖಾನೆಗಳ ಆದಾಯ ಪ್ರಾಪ್ತಿಯನ್ನು ವಿಶ್ಲೇಷಿಸಲು ನಿರ್ಣಯಿಸಲಾಗಿತ್ತು. ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ಈ ಕುರಿತಂತೆ ಸಕ್ಕರೆ ಮತ್ತು ಅದರ ಉಪ ಉತ್ಪನ್ನಗಳ ಜೊತೆಗೆ ಜ್ಯೂಸ್ ಮತ್ತು ಬಿ-ಹೆವಿ ಕಾಕಂಬಿ ವರ್ಗಾವಣೆಯಿಂದ ಕುಂಠಿತಗೊಳ್ಳುವ ಸಕ್ಕರೆ ಇಳುವರಿ ಪ್ರಮಾಣವನ್ನು ಮತ್ತು ಅದರಿಂದ ಉತ್ಪಾದನೆಯಾಗಬಹುದಾದ ಎಥನಾಲ್ ಪ್ರಮಾಣ ಮತ್ತು ಆಧಾಯವನ್ನು 4(ಸಿ) ಸಮಿತಿಗೆ ಸಲ್ಲಿಸಲಾಗಿರುತ್ತದೆ. ಸದರಿ ಸಮಿತಿಯ ಅಧ್ಯಕ್ಷರಾದ ಮಾನ್ಯ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ವರದಿಯನ್ನು ಯಥಾವತ್ತಾಗಿ ಅನುಮೋದಿಸಿರುತ್ತಾರೆ.

9. ತಜ್ಞರ ಸಮಿತಿ ವರದಿ

- ಕಾರ್ಖಾನೆಗಳ ಆದಾಯ ಪರಿಶೀಲನೆ ಮಾಡಲು ಕರ್ನಾಟಕ ಕಬ್ಬು (ಖರೀದಿ ಹಾಗೂ ಸರಬರಾಜು ನಿಯಂತ್ರಣ ತಿದ್ದುಪಡಿ ಅಧಿನಿಯಮದ 4(ಸಿ) ಅಡಿಯ ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿಯ ಸಭೆಯ ನಡವಳಿಗಳಲ್ಲಿ ಕೈಗೊಂಡ ತೀರ್ಮಾನಗಳ ಪ್ರಕಾರ ಒಂದು ಎ.ಆ ಸಕ್ಕರೆ ಬೆಲೆ ರೂ.33/- ರೂಪಾಯಿಗಳನ್ನು ಪರಿಗಣಿಸಲಾಗಿದೆ.
- ಒಂದು ಟನ್ ಕಬ್ಬಿನಿಂದ 10% ಎಂದರೆ 100 ಕೆಜಿ ಬಗ್ಯಾಸ್ ಉಳಿತಾಯವಾಗುತ್ತದೆಂದು ಹಾಗೂ ಒಂದು ಟನ್ ಬಗ್ಯಾಸ್‌ನ ಕನಿಷ್ಠ ಸರಾಸರಿ ಬಲೆ ರೂ.2885/- ರೂಪಾಯಿಗಳನ್ನು ಪರಿಗಣಿಸಲಾಗಿದೆ.
- ಕಾರ್ಖಾನೆಗಳಲ್ಲಿ ಶೇ.5% ಪ್ರೆಸ್‌ಮಡ್ ಅಂದರೆ 50 ಕೆಜಿ ಉತ್ಪಾದನೆ ಆಗುತ್ತದೆಂದು ಹಾಗೂ ಇದರ ಸರಾಸರಿ ಕನಿಷ್ಠ ಬೆಲೆ ರೂ.625/- ಗಳೆಂದು ಪರಿಗಣಿಸಲಾಗಿದೆ.
- ಕಾರ್ಖಾನೆಗಳಲ್ಲಿ 4.6% ಸಿ ಹೆವಿ ಮೊಲ್ಯಾಸಿಸ್ ಉತ್ಪಾದನೆ ಅಂದರೆ ಪ್ರತಿ ಟನ್ ಕಬ್ಬಿಗೆ 46 ಕೆ.ಜಿ. ಉತ್ಪಾದನೆ ಆಗುತ್ತದೆಂದು ಹಾಗೂ ಇದರ ಸರಾಸರಿ ಕನಿಷ್ಠ ಬೆಲೆ ರೂ.7500/- ರೂಪಾಯಿಗಳೆಂದು ಪರಿಗಣಿಸಲಾಗಿದೆ.
- ಕಾರ್ಖಾನೆಗಳು ಖಖ8(ಛಿ) ವರದಿಯ ಮೋಲ್ ಬಾಲೆನ್ಸ್‌ನಲ್ಲಿ ನಮೂದಿಸಿದ ಒಂದು ಟನ್ ಕಬ್ಬಿನಿಂದ ಸಿರಪ್ ಮತ್ತು ಬಿ ಹೆವಿ ಮೊಲ್ಯಾಸಿಸ್‌ನಲ್ಲಿ ವ್ಯಯವಾಗಿರುವ ಸಕ್ಕರೆ ಪ್ರಮಾಣದ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ

- ಆದಾಯ ವಿಶ್ಲೇಷಣೆಗೆ ಒಂದು ಟನ್ ಸಕ್ಕರೆಯಿಂದ 600 ಲೀಟರ್‌ಎಥನಾಲ್ ಉತ್ಪಾದನೆ ಆಗುವುದೆಂದು ಪರಿಗಣಿಸಲಾಗಿದೆ.
- ಪ್ರತ್ಯೇಕ ಕಾರ್ಖಾನೆಯ ಉತ್ಪನ್ನಗಳ ಆದಾಯದೊಂದಿಗೆ 46 ಕಿಲೋ ಕಾಕಂಬಿಯ ಆದಾಯವನ್ನು ರೂ.750/– ರಂತೆ ಪ್ರತಿಟನ್‌ಗೆ ರೂ.345 ಗಳನ್ನು ಸೇರಿಸಲಾಗಿದೆ.
- ಕಾರ್ಖಾನೆ ಪಡೆಯುತ್ತಿರುವ ಕಬ್ಬಿನಲ್ಲಿರುವ ಒಟ್ಟು ಸಕ್ಕರೆ ಇಳುವರಿ ತಿಳಿಯಲು F. No.4/1/2018-(BP&E)(Part)Government of India Ministry of consumer affairs, Food and Public Distribution (Department of Food & Public distribution) Directorate of Sugar & Vegetable Oils dated: 21.12.2023 ನೀಡಿರುವ ಸೂತ್ರ ಹೀಗಿದೆ:

$$\textbf{Sugar Recovery\% cane} = \textbf{Pol in Mixed juice \% cane X}\frac{(J-35.6)K}{0.644J}$$

Where J is the juice purity and value of K may be considered 1.002 for deemed production of plantation white sugar.

2022–23ನೇ ಹಂಗಾಮಿನ ಕಾರ್ಯನಿರ್ವಹಿಸಿದ 74 ಕಾರ್ಖಾನೆಗಳನ್ನು ಉತ್ಪನ್ನಗಳ ಆಧಾರದ ಮೇಲೆ 6 ವರ್ಗಗಳಾಗಿ ವಿಂಗಡಿಸಬಹುದಾಗಿದೆ ಕೆಳಗಿನಂತೆ ಮಂಡಿಸಿದರು.

ಕ್ರ ಸಂ	ಸಕ್ಕರೆ ಕಾರ್ಖಾನೆಗಳ ಉತ್ಪನ್ನಗಳು	ಎಥನಾಲ್ ಘಟಕದ ಸ್ಥಿತಿ	ಕಾರ್ಖಾನೆಗಳ ಸಂಖ್ಯೆ
1	ಸಕ್ಕರೆ + ಎಥನಾಲ್ (ಸಿರಪ್ ಹಾಗೂ ಬಿ ಹೆವಿ ಮೊಲ್ಯಾಸಿಸ್ ಆಧಾರಿತ) + ಬಗಾಸ್ + ಪ್ರೆಸ್ ಮಡ್	ಮದ್ಯಸಾರ ಘಟಕ ಸಹಿತ	22
2	ಸಕ್ಕರೆ + ಎಥನಾಲ್ (ಸಿರಪ್ ಹಾಗೂ ಸಿ ಹೆವಿ ಮೊಲ್ಯಾಸಿಸ್ ಆಧಾರಿತ) + ಬಗಾಸ್ + ಪ್ರೆಸ್ ಮಡ್	ಮದ್ಯಸಾರ ಘಟಕ ಸಹಿತ	03
3	ಸಕ್ಕರೆ + ಸಿ ಹೆವಿ ಮೊಲ್ಯಾಸಿಸ್ + ಬಗಾಸ್ + ಪ್ರೆಸ್ ಮಡ್	ಮದ್ಯಸಾರ ಘಟಕ ಸಹಿತ	06
4	ಸಕ್ಕರೆ ಎಥನಾಲ್ (ಬಿ ಮತ್ತು ಸಿ ಹೆವಿ ಮೊಲ್ಯಾಸಿಸ್ ಆಧಾರಿತ) + ಬಗಾಸ್ + ಪ್ರೆಸ್ ಮಡ್	ಮದ್ಯಸಾರ ಘಟಕ ರಹಿತ	33
5	ಸಕ್ಕರೆ + ಎಥನಾಲ್ (ಬಿ ಮತ್ತು ಸಿ ಹೆವಿ ಮೊಲ್ಯಾಸಿಸ್ ಆಧಾರಿತ) + ಬಗಾಸ್ + ಪ್ರೆಸ್ ಮಡ್	ಮದ್ಯಸಾರ ಘಟಕ ಸಹಿತ (ಅನ್ಯ ಘಟಕ)	06
6	ಸಕ್ಕರೆ + ಎಥನಾಲ್ (ಬಿ ಮತ್ತು ಸಿ ಹೆವಿ ಮೊಲ್ಯಾಸಿಸ್ ಆಧಾರಿತ) +ಬಗಾಸ್ + ಪ್ರೆಸ್ ಮಡ್	ಮದ್ಯಸಾರ ಘಟಕ ನಿರ್ಮಾಣ ಹಂತದಲ್ಲಿ	04
		ಒಟ್ಟು	74

ಸಕ್ಕರೆ ಕಾರ್ಖಾನೆಗಳ ಸಕ್ಕರೆ ಮತ್ತು ಉಪ ಉತ್ಪನ್ನಗಳ ಗರಿಷ್ಠ ಇಳುವರಿ ಮತ್ತು ದರವನ್ನು ಆಧರಿಸಿ ಮತ್ತು ಹಿಂದಿನ 2022-23 ನೇ ಹಂಗಾಮಿನ 4(ಸಿ) ಸಮಿತಿಯಲ್ಲಿ ಅನುಮೋದಿಸಿರುವ ಕೈಗೊಂಡಿರುವ ಅಂಕಿಅಂಶಗಳು ಮತ್ತು ವರದಿಯನ್ನು ಸಭೆಗೆ ಮಂಡಿಸಿದರು. ರೈತ ಸಂಘದ ಮುಖಂಡರು ಹಾಗೂ ಮಂಡಳಿಯ ಸದಸ್ಯರಾದ ಶ್ರೀ ಕುರುಬೂರು ಶಾಂತಕುಮಾರ್ ಮತ್ತು ಶ್ರೀ ಬಡಗಲಪುರ ನಾಗೇಂದ್ರ ಹಾಗೂ ಮಂಡಳಿಯ ಸಭೆಯಲ್ಲಿ ಭಾಗವಹಿಸಿದ್ದ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಮಾತನಾಡಿ, 4(ಸಿ) ಸಮಿತಿಯಲ್ಲಿ ಅನುಮೋದಿಸಿರುವ ಅಂಕಿ-ಅಂಶಗಳು/ಮಾಹಿತಿಯನ್ನು ನಮಗೆ ನಿನ್ನೆಯಷ್ಟೆ ನೀಡಿರುತ್ತಾರೆ. ಇದರಲ್ಲಿ, ಹಲವಾರು ತಾಂತ್ರಿಕ ಅಂಶಗಳು ಇರುವುದರಿಂದ ಅದನ್ನು ಅಭ್ಯಾಸಿಸಲು ಕಾಲವಕಾಶ ಬೇಕಾಗಿರುವುದರಿಂದ, ಸದರಿ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸಿ ತೀರ್ಮಾನ ತೆಗೆದುಕೊಳ್ಳುವಂತೆ ವಿನಂತಿಸಿದರು.

ಮುಂದುವರೆದು, ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಮಾತನಾಡುತ್ತ, ಸದರಿ ವಿಷಯದ ಬಗ್ಗೆ ತೀರ್ಮಾನ ಮತ್ತು ನಿರ್ಣಯ ಮಾಡುವ ಮುನ್ನ ಆಳವಾದ ಚರ್ಚೆ ಇರುವುದರಿಂದ ಕಬ್ಬು ನಿಯಂತ್ರಣ ಮಂಡಳಿ ಸಮಿತಿ ಸದಸ್ಯರ ಅಭಿಪ್ರಾಯವನ್ನು ಪಡೆದು ಮುಂದಿನ ಸಭೆಗೆ ಮಂಡಿಸಲು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸೂಚಿಸಿದರು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ
ಮಾರುಕಟ್ಟೆ ಸಚಿವರು ಹಾಗೂ
ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ

ಅನುಬಂಧ -10

ದಿನಾಂಕ: 10.06.2025 ರಂದು ಬೆಳಿಗ್ಗೆ 11.00 ಗಂಟೆಗೆ ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು – ಕಬ್ಬು ನಿಯಂತ್ರಣ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮಾರಾಟ ಮಂಡಳಿಯ ಸಭಾಂಗಣ, ಬೆಂಗಳೂರಿನಲ್ಲಿ ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಯ ನಡವಳಿಗಳು.

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡಿ, ಸಭೆಯ ಆರಂಭದಲ್ಲಿ ಸನ್ಮಾನ್ಯ ಶ್ರೀ. ಶಿವಾನಂದ ಎಸ್. ಪಾಟೀಲ್, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರನ್ನು ಸಭೆಗೆ ಸ್ವಾಗತಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕಾರ್ಯಸೂಚಿಯಂತೆ ಸಭೆಯನ್ನು ನಡೆಸಿಕೊಡುವಂತೆ ಕೋರಿದರು. ಮುಂದುವರೆದು ಕಬ್ಬು ನಿಯಂತ್ರಣ ಮಂಡಳಿ ಸಭೆಗೆ ಆಗಮಿಸಿದ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಎಲ್ಲಾ ಅಧಿಕಾರಿಗಳು, ರೈತ ಪ್ರತಿನಿಧಿ ಸದಸ್ಯರು ಹಾಗೂ ವಿಶೇಷ ಆಹ್ವಾನಿತರು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಸಭೆಯ ಪ್ರಾರಂಭದಲ್ಲಿ ಮಾನ್ಯ ಆಯುಕ್ತರು ಮಾತನಾಡಿ, ಹೊಸದಾಗಿ ಕಾರ್ಯ ವರದಿ ಮಾಡಿಕೊಂಡಿರುವ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂ.ಎಸ್.ಎಮ್.ಇ ಮತ್ತು ಗಣಿ) ಇವರನ್ನು ಮಂಡಳಿಗೆ ಪರಿಚಯಿಸಿದರು.

ಸಭೆಯಲ್ಲಿ ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವಿಷಯಗಳ ಕಾರ್ಯಸೂಚಿಯಂತೆ ವಿಷಯಗಳನ್ನು ಮಂಡಿಸಿದರು.

1. **ಸಭಾ ನೋಟಿಸು ಓದಿ ದಾಖಲಿಸಲಾಯಿತು.**

2. **ದಿನಾಂಕ 29.11.2024 ರ ಸಭೆಯ ನಡುವಳಿ ಹಾಗೂ ಅದರ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಯಲ್ಲಿ ದೃಢೀಕರಿಸಲಾಯಿತು.**

2(i). **ಸನ್ 2023-24ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮಿನಿಂದ ತಕ್ಷಣದಿಂದ ಜಾರಿಗೆ ಬರುವಂತೆ ಕಡ್ಡಾಯವಾಗಿ ಎಸ್.ಓ.ಪಿ. ಯನ್ನು ಕಾನೂನು ಮಾಪನಾಶಾಸ್ತ್ರ ಇಲಾಖೆ ಇವರು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಅನುಷ್ಠಾನಗೊಳಿಸುವುದು:**

ಈ ನಿಮಿತ್ತ ಮಾನ್ಯ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ಸರ್ಕಾರದಿಂದ ಕೈಗೊಂಡ ಕ್ರಮಗಳ ಬಗ್ಗೆ ವಿವರಗಳನ್ನು ನೀಡಿದರು.

ರಾಜ್ಯದ 79 ಸಕ್ಕರೆ ಕಾರ್ಖಾನೆಗಳ ಪೈಕಿ 73 ಕಾರ್ಖಾನೆಗಳು ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಂಡಿದ್ದು, ಆರು ಕಾರ್ಖಾನೆಗಳು ಮಾತ್ರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿವಿಧ ಪೀಠಗಳಲ್ಲಿ ಸರ್ಕಾರವು ಹೊರಡಿಸಿರುವ ಎಸ್‌ಓಪಿ ವಿರುದ್ಧ ಮಧ್ಯಂತರ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದರು. ಈಗ ಘನ ನ್ಯಾಯಾಲಯವು ಕಬ್ಬು ನುರಿಯುವ ಅವಧಿ ಮುಗಿದ ನಂತರ SOP ಗಳನ್ನು ಅಳವಡಿಸಿಕೊಳ್ಳಲು ಆದೇಶ ಹೊರಡಿಸಿರುತ್ತದೆ. ಅದರಂತೆ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ, ಇಲಾಖೆ ಇವರು ಕ್ರಮ ವಹಿಸಬೇಕಾಗಿರುತ್ತದೆ ಎಂದು ಕಾನೂನು ಮಾಪನ ಶಾಸ್ತ್ರ, ಇಲಾಖೆ ಅಧಿಕಾರಿ ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡುತ್ತಾ ಎಸ್‌ಓಪಿ ಯನ್ನು ಅಳವಡಿಸದೇ ಇರುವ ಕಾರ್ಖಾನೆಗಳು 2025-2026ನೇ ಸಾಲಿನ ಹಂಗಾಮಿನಿಂದ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳ ತಕ್ಕದ್ದು ಎಂದು ತಿಳಿಸುತ್ತಾ, ನಿಯಂತ್ರಕರು ಕಾನೂನು ಮಾಪನ ಶಾಸ್ತ್ರ, ಇವರಿಗೆ ಕಬ್ಬು ಅರೆಯುವ ಪ್ರಾರಂಭದ ಮುನ್ನ ಸ್ಯಾಂಪಿಂಗ್ ಮಾಡುವ ಅಧಿಕಾರ ಕಾನೂನು ಮಾಪನ ಶಾಸ್ತ್ರ, ಇಲಾಖೆಗೆ ಇರುತ್ತದೆ. ಆದ್ದರಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳು ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳ ತಕ್ಕದ್ದು ಎಂದು ಸೂಚಿಸಿದರು.

ರೈತ ಪ್ರತಿನಿಧಿಗಳಾದ ಶ್ರೀ ಬಡಗಲಪುರ ನಾಗೇಂದ್ರ ಮತ್ತು ಶ್ರೀ ರಂಗನಗೌಡ ಶಿವನಗೌಡ ಪಾಟೀಲ್ ಇವರು ಮಾತನಾಡಿ ಈ ಕೂಡಲೇ ಉಳಿದ ಸಕ್ಕರೆ ಕಾರ್ಖಾನೆಗಳು ಸಹ ಎಸ್.ಓ.ಪಿ. ಯನ್ನು ಅಳವಡಿಸಿಕೊಳ್ಳಬೇಕೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ಅಧ್ಯಕ್ಷರು ಮಾತನಾಡಿ ಸಂಬಂಧಿಸಿದ ಕಾರ್ಯವನ್ನು ಈ ಸಾಲಿನ ಕಬ್ಬು ಅರೆಯುವ ಮುನ್ನ ಇದನ್ನು ಅಳವಡಿಸಿಕೊಳ್ಳಲು ಅಗತ್ಯ ಕ್ರಮ ವಹಿಸುವಂತೆ ನಿಯಂತ್ರಕರು ಕಾನೂನು ಮಾಪನ ಶಾಸ್ತ್ರ, ಇವರಿಗೆ ಸೂಚಿಸಿದರು.

ವಿ.ಜೆ. ರವಿ, ಕೋರಮಂಡಲ್ ಶುಗರ್ಸ್ ಲಿ., ಕಾರ್ಖಾನೆಯ ಪ್ರತಿನಿಧಿ ಇವರು ಮಾತನಾಡಿ 2025-2026 ನೇ ಹಂಗಾಮಿನಿಂದ ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ., ಮದ್ದೂರು, ಮಂಡ್ಯ ಜಿಲ್ಲೆ ಮತ್ತು ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ., (ಗುತ್ತಿಗೆದಾರರು ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,) ಶ್ರೀನಿವಾಸಪುರ, ಹಾಸನ ಜಿಲ್ಲೆ ಈ ಕಾರ್ಖಾನೆಗಳು ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳುವುತ್ತಿರುವುದಾಗಿ ಸಭೆಗೆ ತಿಳಿಸಿದರು.

ಮುಂದುವರೆದು ಮಾನ್ಯ ಆಯುಕ್ತರು, ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಂಡ ನಂತರ ರೈತರು ಕಬ್ಬಿನ ತೂಕದಲ್ಲಿ ಮೋಸವಾಗುತ್ತಿರುವ ಕುರಿತು ಯಾವುದೇ ದೂರುಗಳು ಬಂದಿರುವುದಿಲ್ಲ ಎಂದು ತಿಳಿಸಿದರು. ಕಾನೂನು ಮಾಪನ ಶಾಸ್ತ್ರ, ಇಲಾಖೆಯಿಂದ ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳದೇ ಇರುವ ಕಾರ್ಖಾನೆಗಳಿಗೆ ಕಬ್ಬು ಅರೆಯುವ ಕಾರ್ಯದ ಮುನ್ನ ಸ್ಯಾಂಪಿಂಗ್‌ನ್ನು ಮಾಡಬಾರದು ಎಂದು ತಮ್ಮ ಅಭಿಪ್ರಾಯ ತಿಳಿಸಿದರು.

ಶ್ರೀ ಬಾಲಚಂದ್ರ ಭಕ್ತಿ, ಗೋದಾವರಿ ಬಯೋರಫನರೀಸ್ ಲಿ., ಕಾರ್ಖಾನೆಯ ಪ್ರತಿನಿಧಿ ಇವರು ಮಾತನಾಡಿ ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳು ಟ್ಯಾಂಪರ್ ಪ್ರೂಫ್ ಆಗಿದ್ದು ಕಬ್ಬಿನ ತೂಕದಲ್ಲಿ ಯಾವುದೇ ಮೋಸಕ್ಕೆ ಅವಕಾಶವಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಶ್ರೀ ವಿ.ಜಿ ರವಿ, ಕೋರಮಂಡಲ್ ಶುಗರ್ಸ ಲಿ., ಕಾರ್ಖಾನೆಯ ಪ್ರತಿನಿಧಿ ಇವರು ಮಾತನಾಡಿ ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳು ಟ್ಯಾಂಪರ್ ಪ್ರೂಫ್ ಆಗಿದ್ದು ಕಬ್ಬಿನ ತೂಕದಲ್ಲಿ ಯಾವುದೇ ಮೋಸಕ್ಕೆ ಅವಕಾಶವಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ಮಾತನಾಡಿ ಕಬ್ಬು ಅರೆಯುವ ಪ್ರಾರಂಭದ ಮುನ್ನ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಸ್ಟ್ಯಾಂಪಿಂಗ್ ಮಾಡಬೇಕಾಗಿರುತ್ತದೆ ಹಾಗೂ ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳದೇ ಇರುವ ಕಾರ್ಖಾನೆಗಳಿಗೆ ಈಗಾಗಲೇ ನೋಟೀಸ್ ಜಾರಿಗೊಳಿಸಲಾಗಿದ್ದು, ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳದಿದ್ದರೆ ಸ್ಟ್ಯಾಂಪಿಂಗ್ ಮಾಡಲಾಗುವುದಿಲ್ಲ ಎಂದು ತಿಳಿಸಿದರು.

ಮುಂದುವರೆದು ಅನಲಾಗ್‌ದಿಂದ ಡಿಜಿಟಲೈಸ್ಡ್ ವೇ-ಬ್ರಿಡ್ಜ್ ಅಳವಡಿಸಿಕೊಂಡಲ್ಲಿ ಡಿಜಿಟಲೈಸ್ಡ್ ಲೋಡ್ಸ್ ಸೆಲ್ಸ್ ಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಸದರಿ ಲೋಡ್ಸ್ ಸೆಲ್ಸ್ ಗಳನ್ನು ಟಾಂಪರಿಂಗ್ ಮಾಡಲು ಸಾಧ್ಯವಿರುವುದಿಲ್ಲ ಏಕೆಂದರೆ ಕಾನೂನು ಮಾಪನ ಶಾಸ್ತ್ರ ಇಲಾಖೆ ವತಿಯಿಂದ ಸೀಲ್ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ಎಲ್ಲಾ ಸದಸ್ಯರ ಅಭಿಪ್ರಾಯ ಪಡೆದು ಈ ಕೆಳಗಿನಂತೆ ತೀರ್ಮಾನಿಸಿದರು.

1. ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳನ್ನು ಅಳವಡಿಸಿಕೊಂಡಿರುವುದರಿಂದ ಆಗುತ್ತಿರುವ ಪ್ರಯೋಜನಗಳ ಕುರಿತು ಜಾಹಿರಾತು ಹೊರಡಿಸಲು ನಿಯಂತ್ರಕರು ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ಕ್ರಮ ವಹಿಸತಕ್ಕದ್ದು
2. ಕಬ್ಬು ಬೆಳೆಗಾರ ರೈತರು ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳ ತೂಕದಲ್ಲಿ ಆಗುತ್ತಿರುವ ಮೋಸದ ಬಗ್ಗೆ ಮಾಹಿತಿ ನೀಡಿ ಅದನ್ನು ಸಾಬೀತು ಪಡಿಸಿದಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ವತಿಯಿಂದ ರೂ. 5 ಲಕ್ಷಗಳ ಬಹುಮಾನ ನೀಡಲಾಗುವುದು.
3. ಪ್ರಸ್ತುತ ರಾಜ್ಯದ 170 ತಾಲ್ಲೂಕುಗಳಲ್ಲಿ ಎಪಿಎಂಸಿ ಇಲಾಖೆ ವತಿಯಿಂದ ಅಳವಡಿಸಿರುವ ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಗಳಲ್ಲಿ ರೈತರಿಗೆ ಉಚಿತವಾಗಿ ಕಬ್ಬಿನ ತೂಕ ಮಾಡಲು ಈಗಾಗಲೇ ಅನುಕೂಲ ಮಾಡಲಾಗಿದೆ ಎಂಬ ವಿಷಯವನ್ನು ರಾಜ್ಯದ ರೈತರಿಗೆ ತಿಳಿಸಲು ಕಾನೂನಕು ಮಾಪನ ಶಾಸ್ತ್ರ ಇಲಾಖೆ ಜಾಹಿರಾತು ಹೊರಡಿಸುವುದು.
4. ಕಾನೂನು ಮಾಪನ ಶಾಸ್ತ್ರ ಇಲಾಖೆ ವತಿಯಿಂದ ನಿಯಂತ್ರಕರು ಕಬ್ಬು ಇರುವ ಕಾರ್ಖಾನೆಗಳು ಕಬ್ಬು ಬೆಳೆಯುವ ಪ್ರದೇಶ ಮತ್ತು ಕಬ್ಬು ನುರಿಯುವ ಕಾರ್ಖಾನೆಗಳ ಜಿಲ್ಲೆಗಳಲ್ಲಿ ಇರುವ ಎಲ್ಲಾ ಜನ ಪ್ರತಿನಿಧಿಗಳಾದ ಮಾನ್ಯ ಶಾಸಕರು, ಮಾನ್ಯ ಮಂತ್ರಿಗಳು,

ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ಮಾನ್ಯ ಕೇಂದ್ರ ಮಂತ್ರಿಗಳು ಇವರಿಗೆ ರಾಜ್ಯ ಸರ್ಕಾರದ ವತಿಯಿಂದ ಕೈಗೊಂಡಿರುವ ಮತ್ತು ಸಕ್ಕರೆ ಕಾರ್ಖಾನೆಗಳು ಡಿಜಿಟಲೈಸ್ಡ್ ವೇ-ಬ್ರಿಡ್ಜ್‌ಳನ್ನು ಅಳವಡಿಸಿರುವ ಬಗ್ಗೆ ಮತ್ತು ಅವುಗಳ ಪ್ರಯೋಜನಗಳ ಕುರಿತು ಪತ್ರದ ಮೂಲಕ ಕಾನೂನು ಮಾಪನ ಶಾಸ್ತ್ರ ನಿಯಂತ್ರಕರು ಪತ್ರ ಮುಖೇನ ಮಾಹಿತಿ ನೀಡುವುದು.

ಕ್ರಮ: ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ

2(ii) 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಕಬ್ಬಿನ ಪ್ರಮಾಣ, ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ ಬಿಲ್ಲು ಪಾವತಿ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಲು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಕ್ಕೆ ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನೊಳಗೊಂಡ ಪ್ರತ್ಯೇಕ ಸಮಿತಿಗಳನ್ನು ರಚಿಸುವ ಬಗ್ಗೆ.

ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಕಬ್ಬಿನ ಪ್ರಮಾಣ, ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ ಬಿಲ್ಲು ಪಾವತಿ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಲು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಕ್ಕೆ ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನೊಳಗೊಂಡ ಪ್ರತ್ಯೇಕ ಸಮಿತಿಗೆ Legal sanctity ನೀಡುವ ಬಗ್ಗೆ ಚರ್ಚಿಸಿದರು.

ಶ್ರೀ ಬಡಗಲ್‌ಪುರ ನಾಗೇಂದ್ರ, ರೈತರ ಪ್ರತಿನಿಧಿ ರೈತರ ಪ್ರತಿನಿಧಿ ಇವರ ಮಾತನಾಡಿ ಸದರಿ ಸಮಿತಿಗಳಿಗೆ Legal sanctity ನೀಡುವ ಸಂಬಂಧ ಕಾನೂನಿನ ಮಾನ್ಯತೆ ನೀಡುವ ಸಂಬಂಧ ಅಗತ್ಯ ತಿದ್ದುಪಡಿ ಬೇಕಿರುತ್ತದೆ ಎಂದು ಸಭೆಗೆ ತಮ್ಮ ಅಭಿಪ್ರಾಯ ತಿಳಿಸಿದರು.

ಮಾನ್ಯ ಆಯುಕ್ತರು, ಮಾತನಾಡಿ ಈ ಸಂಬಂಧ ತಾತ್ಕಾಲಿಕವಾಗಿ ಯಾವುದಾದರೂ ಕಾರ್ಖಾನೆಯ ಮೇಲೆ ತೂಕ ಮಾಡುವ ವಿಷಯದಲ್ಲಿ ಹಾಗೂ ರಿಕವರಿ ವಿಷಯದಲ್ಲಿ ಅನುಮಾನ ವ್ಯಕ್ತ ಪಡಿಸುವ ರೈತ ಮುಖಂಡರು, ಕಬ್ಬು ಬೆಳೆಯುವ ಮುಖಂಡರು ಸದರಿ ಕಾರ್ಖಾನೆಗೆ ಬೇಟಿ ನೀಡುವ ಸಂಬಂಧ ಗೌಪ್ಯವಾಗಿ ಅರ್ಜಿ ನೀಡಿದಲ್ಲಿ ಅದರಂತೆ ಗೌಪ್ಯವಾಗಿ ಆದೇಶ ಹೊರಡಿಸಿ ಸಂಬಂಧಿಸಿದ ರೈತರು/ ಕಬ್ಬು ಬೆಳೆಗಾರರ ತಂಡದಲ್ಲಿ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಪ್ರತಿನಿಧಿ ಮತ್ತು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರ ಪ್ರತಿನಿಧಿಗಳೊಂದಿಗೆ, ಮಂಡಳಿಯ ಸದಸ್ಯರ ತಂಡ ರಚಿಸಿ ಕಾರ್ಖಾನೆಗಳಿಗೆ ಬೇಟಿ ನೀಡಿ ಕಾರ್ಖಾನೆಗಳು ನುರಿಸುವ ಕಬ್ಬಿನ ಪ್ರಮಾಣ, ತೂಕ, ಇಳುವರಿ, ಕಟಾವು ಮತ್ತು ಸಾಗಾಣಿಕೆ, ಕಬ್ಬಿನ

ಬಿಲ್ಲು ಪಾವತಿ ಹಾಗೂ ಇನ್ನಿತರೆ ವಿಷಯಗಳ ಕುರಿತು ಪರಿಶೀಲಿಸಲು ಅನುವು ಮಾಡಿಕೊಡುವುದಾಗಿ ತಿಳಿಸಿದರು.

ಅದಕ್ಕೆ ಮಾನ್ಯ ಅಧ್ಯಕ್ಷರು ಮೇಲಿನಂತೆ ಕ್ರಮ ವಹಿಸಲು ಸೂಚಿಸಿದರು.

ಕ್ರಮ: ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

ಕ್ರಮ: ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ

2(iii) ಮಾನ್ಯ ಅಧ್ಯಕ್ಷರ ಅನುಮತಿಯೊಂದಿಗೆ ಹೆಚ್ಚುವರಿ ವಿಷಯದ ಚರ್ಚೆ 4(ಸಿ) ಕಮಿಟಿ ವರದಿ)

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ-2014 ರನ್ವಯ 2022-23 ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳ ಆದಾಯ ಪ್ರಾಪ್ತಿಗಳ ವಿಶ್ಲೇಷಣೆಯಿಂದ ಕೇಂದ್ರ ಸರ್ಕಾರ ಘೋಷಿಸಿದ ಲಾಭದಾಯಕ ಮತ್ತು ಕಬ್ಬಿನ ಬೆಲೆಗಿಂತ ಹೆಚ್ಚಿಗೆ ಪಾವತಿಸಬೇಕಾದ 12 ಕಾರ್ಖಾನೆಗಳ ವಿವರಗಳನ್ನು ಸಭೆಗೆ ಮಂಡಿಸಲಾಯಿತು.

ಶ್ರೀ ವಿ.ಜೆ ರವಿ, ಕೋರಮಂಡಲ್ ಶುಗರ್ಸ್ ಲಿ., ಮತ್ತು ಶ್ರೀ ಬಾಲಚಂದ್ರ ಭಕ್ಷಿ, ಗೋದಾವರಿ ಬಯೋರಫನರೀಸ್ ಲಿ., ಕಾರ್ಖಾನೆಗಳ ಪ್ರತಿನಿಧಿಗಳು ಮಾತನಾಡುತ್ತಾ 2022-23ನೇ ಹಂಗಾಮಿನಲ್ಲಿ ಪರಿಷ್ಕೃತ ಕಬ್ಬು ದರ ನಿಗದಿ ಮಾಡುವ 4(ಸಿ) ತಜ್ಞರ ಕಮಿಟಿ ರಚಿಸಲಾಗಿತ್ತು. ಇದರಲ್ಲಿ ಕಬ್ಬಿನ ಉಪ ಉತ್ಪನ್ನಗಳ ಆದಾಯ ಹಂಚಿಕೆಯ ಪ್ರಮಾಣ ಮತ್ತು ಪರಿಗಣಿಸಿರುವ ದರವನ್ನು ಮರು ಪರಿಶೀಲನೆ ಮಾಡುವಂತೆ ತಮ್ಮ ಅಭಿಪ್ರಾಯನ್ನು ಸಭೆಗೆ ತಿಳಿಸಿದರು.

ಮಾನ್ಯ ಆಯುಕ್ತರು, ಸದರಿ ವಿಷಯವನ್ನು ದಿನಾಂಕ: 29.11.2024 ರಂದು ನಡೆದ ಕಬ್ಬು ನಿಯಂತ್ರಣ ಮಂಡಳಿಯಲ್ಲಿ ಚರ್ಚಿಸಲಾಗಿದ್ದು, ಕಾರ್ಖಾನೆಗಳು ಈ ಬಗ್ಗೆ ಯಾವುದೇ ಅಭಿಪ್ರಾಯ/ ಮನವಿಯನ್ನು ಇಲ್ಲಿಯವರೆಗೂ ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ವಿಷಯಕ್ಕೆ ಮತ್ತೊಮ್ಮೆ ಕಾಲಾವಕಾಶ ನೀಡಲಾಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರೀ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ನಿರ್ದೇಶಕರು ಮತ್ತು ತಜ್ಞರ ತಂಡ ನೀಡಿರುವ ವರದಿಯಂತೆ ಹೆಚ್ಚುವರಿ ಕಬ್ಬಿನ ಹಣ ಪಾವತಿಸಬೇಕಾಗಿರುವ 12 ಸಕ್ಕರೆ ಕಾರ್ಖಾನೆಗಳ ಪೈಕಿ ಈಗಾಗಲೇ ಕೆಲವು ಸಕ್ಕರೆ ಕಾರ್ಖಾನೆಗಳು ಹಣ ಪಾವತಿಸಿರುತ್ತವೆ. ಇನ್ನು ಉಳಿದ ಸಕ್ಕರೆ ಕಾರ್ಖಾನೆಗಳು ರೂ. 25.46 ಕೋಟಿಗಳನ್ನು ರೈತರಿಗೆ ಪಾವತಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಸದರಿ ವಿಷಯವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಮತ್ತು ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ನೀಡಿದ ಸಲಹೆಯಂತೆ ಸದರಿ ವಿಷಯದಲ್ಲಿ ಈ

ಸಭೆಯ ನಿರ್ಣಯವನ್ನು ಘನ ನ್ಯಾಯಾಲಯದ ಮುಂದೆ ಸಲ್ಲಿಸಿರುವುದ ಅವಶ್ಯವಾಗಿರುತ್ತದೆ ಎಂದು ತಿಳಿಸಿದರು.

ಈ ಸಂಬಂಧ 4-ಸಿ ಕಮಿಟಿ ಯವರು ಸಲ್ಲಿಸಿರುವ ವರದಿಯನ್ನು ಘನ ನ್ಯಾಯಲಯಕ್ಕೆ ಸಲ್ಲಿಸುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

3 & 4) 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿರುವ ಕಬ್ಬಿನ ಪ್ರಮಾಣ, ಉತ್ಪಾದಿಸಿರುವ ಸಕ್ಕರೆ, ಸಕ್ಕರೆ ಇಳುವರಿ ಹಾಗೂ ಕಬ್ಬು ಬಿಲ್ಲು ಪಾವತಿಸಿರುವ ಹಾಗೂ ಬಾಕಿ ಉಳಿಸಿಕೊಂಡಿರುವ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ರೈತರಿಗೆ ಕಬ್ಬು ಬಿಲ್ಲು ಪಾವತಿ ಸಂಬಂಧ ವಸೂಲಾತಿ ಪ್ರಮಾಣ ಪತ್ರ ಹೊರಡಿಸಿರುವ ಬಗ್ಗೆ.

ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡಿ ಸಕ್ಕರೆ ಕಾರ್ಖಾನೆಗಳು ಕಬ್ಬು (ನಿಯಂತ್ರಣ) ಆದೇಶ 1966 ರನ್ವಯ 14 ದಿನಗಳೊಳಗಾಗಿ ರೈತರಿಗೆ ಕಬ್ಬಿನ ಹಣ ಪಾವತಿಸಬೇಕಾಗಿರುತ್ತದೆ. ಆದರೆ ಕೇಂದ್ರ ಸರ್ಕಾರವು ಹೊರಡಿಸಿರುವ ಆದೇಶದಂತೆ ಮಾಸಿಕವಾಗಿ ಸಕ್ಕರೆಯನ್ನು ಮಾರಾಟ ಮಾಡಬೇಕಿರುತ್ತದೆ. ಇದರಿಂದ ಕಾರ್ಖಾನೆಗಳಿಗೆ 14 ದಿನಗಳೊಳಗಾಗಿ ಕಬ್ಬಿನ ಹಣವನ್ನು ಪಾವತಿಸಲು ಆಗುತ್ತಿರುವುದಿಲ್ಲ ಎಂದು ಸಭೆ ತಿಳಿಸಿದರು.

ಮುಂದುವರೆದು ಮಾನ್ಯ ಆಯುಕ್ತರು, ಮಾತನಾಡಿ ರೈತರಿಗೆ ಕಬ್ಬಿನ ಬಿಲ್ಲನ್ನು ಪಾವತಿಸುವ ಸಂಬಂಧ ಸಕ್ಕರೆ ಕಾರ್ಖಾನೆಗಳಿಗೆ ಆಗುತ್ತಿರುವ ತೊಂದರೆಗಳ ಕುರಿತು ಈ ಕೆಳಗಿನಂತೆ ವಿಶ್ಲೇಷಿಸಿದರು.

1) ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಸಕ್ಕರೆ ದಾಸ್ತಾನು ಹೆಚ್ಚಾಗಿದ್ದರೂ ಸಹ ಕೇಂದ್ರ ಸರ್ಕಾರದಿಂದ ಮಾಸಿಕವಾಗಿ ಹೊರಡಿಸುವ ಸಕ್ಕರೆ ಮಾರಾಟದ ಆದೇಶವು ಕಡಿಮೆ ಪ್ರಮಾಣದಲ್ಲಿರುವುದರಿಂದ ರೈತರಿಗೆ ನಿಗದಿತ ಸಮಯದಲ್ಲಿ ಹಣ ಪಾವತಿಸಲು ಸಕ್ಕರೆ ಕಾರ್ಖಾನೆಗಳಿಗೆ ಅವಕಾಶ ಸಿಗುತ್ತಿಲ್ಲ.
2) ರಾಜ್ಯದ ಎಸ್ಕಾಂಸ್ ಸಂಸ್ಥೆಗಳು ಸಹ ವಿದ್ಯುತ್ ಘಟಕ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ನಿಗದಿತ ಅವಧಿಯಲ್ಲಿ ಹಣ ಪಾವತಿಸುತ್ತಿಲ್ಲ.
3) ಬಿ-ಹೇವಿ ಮತ್ತು ಸಿ-ಹೇವಿ ಮೊಲಾಸಿಸ್‌ನಿಂದ ಉತ್ಪಾದಿಸುವ ಎಥಾನಾಲ್‌ನಲ್ಲಿ ಸಲ್ಫರ್ ಪ್ರಮಾಣ ಇರುವುದರಿಂದ ಓಎಂಸಿಸ್‌ಗಳು 3 ತಿಂಗಳಾದರೂ ಸಹ ಖರೀದಿಸುತ್ತಿಲ್ಲ.

ಇದಲ್ಲದೆ ಕಾರ್ಖಾನೆಗಳು ಹೆಚ್ಚಿನ ಸಕ್ಕರೆ ಪ್ರಮಾಣ ಮಾರಾಟ ಮಾಡಲು ಅವಕಾಶ ನೀಡುವಂತೆ ಸಲ್ಲಿಸುವ ಮನವಿಗಳನ್ನು ಪರಿಗಣಿಸಿ, ಸಕ್ಕರೆ ನಿರ್ದೇಶನಾಲಯದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಕಾರ್ಖಾನೆಗಳು ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಅನುಕೂಲ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ತೇಜಸ್ವಿ ಪಟೇಲ್ ಮತ್ತು ಶ್ರೀ ಬಡಗಲ್‌ಪುರ ನಾಗೇಂದ್ರ ಇವರು ಮಾತನಾಡಿ ಸಕ್ಕರೆಯನ್ನು ಕೇಂದ್ರ ಸರ್ಕಾರದ ಅಗತ್ಯ ವಸ್ತುಗಳ ಕಾಯ್ದೆಯಿಂದ ಹೊರಗೆ ತರುವ ವಿಷಯವನ್ನು ಪ್ರಸ್ತಾಪಿಸಿದರು. ಇದಲ್ಲದೇ ಸಕ್ಕರೆಯನ್ನು ಎರಡು ರೀತಿಯಾಗಿ ಡೊಮೆಸ್ಟಿಕ್ ಮತ್ತು ಕಮರ್ಷಿಯಲ್ ಆಗಿ ವರ್ಗೀಕರಿಸಬೇಕೆಂದು ಡೊಮೆಸ್ಟಿಕ್ ಸಕ್ಕರೆಯನ್ನು ಕಡಿಮೆ ದರದಲ್ಲಿ ಹಾಗೂ ಕಮರ್ಷಿಯಲ್ ಸಕ್ಕರೆಯನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡಲು ಸಕ್ಕರೆ ಕಾರ್ಖಾನೆಗಳಿಗೆ ಅವಕಾಶ ಮಾಡಬೇಕೆಂದು ಸಭೆಗೆ ತಿಳಿಸಿದರು.

ಮಾನ್ಯ ಆಯುಕ್ತರು, ರೈತ ಪ್ರತಿನಿಧಿಗಳ ಮತ್ತು ಸಕ್ಕರೆ ಕಾರ್ಖಾನೆಗಳ ಮನವಿಯನ್ನು ಪರಿಗಣಿಸಿ, ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸಕ್ಕರೆಯ ಕನಿಷ್ಠ ಮಾರಾಟ ದರವನ್ನು ರೂ.31 ರಿಂದ ರೂ.41.50 ಕ್ಕೆ ಹೆಚ್ಚಿಸಲು ಹಾಗೂ ಎಥಾನಾಲ್ ದರವನ್ನು ರೂ. 74 ಕ್ಕೆ ಹೆಚ್ಚಿಸುವಂತೆ ಶಿಫಾರಸ್ಸು ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಇದಲ್ಲದೆ ರೈತ ಮುಖಂಡರು ಸಭೆಗೆ ಪ್ರಸ್ತಾಪಿದ ಸಕ್ಕರೆ ವರ್ಗೀಕರಣದ ಕುರಿತು ಮನವಿ ಸಲ್ಲಿಸಲು ಸೂಚಿಸಿದರು.

ಮುಂದುವರೆದು 2024-25ನೇ ಹಂಗಾಮಿನಲ್ಲಿ 47 ಸಕ್ಕರೆ ಕಾರ್ಖಾನೆಗಳಿಗೆ ವಸೂಲಾತಿ ಪ್ರಮಾಣ ಪತ್ರವನ್ನು (Recovery Certificate) ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಜಾರಿಗೊಳಿಸಲಾಗಿದೆ ಎಂದು ತಿಳಿಸುತ್ತಾ, ಈ ಪೈಕಿ 31 ಸಕ್ಕರೆ ಕಾರ್ಖಾನೆಗಳು ರೈತರಿಗೆ ಪೂರ್ಣವಾಗಿ ಹಣ ಪಾವತಿಸಲಾಗಿದ್ದು ಉಳಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾಗಿರುವ ಕಬ್ಬು ಬಿಲ್ಲು ಬಾಕಿ ಕುರಿತು ಮಾಹಿತಿಯನ್ನು ಸಭೆಗೆ ತಿಳಿಸಿದರು. ಕಬ್ಬು ಬಿಲ್ಲು ಪಾವತಿಸುವ ಸಂಬಂಧ ಸಕ್ಕರೆ ಕಾರ್ಖಾನೆಗಳು ದಾಖಲಿಸಿರುವ ಪ್ರಕರಣಗಳಿಗೆ ಈಗಾಗಲೇ ಆಕ್ಷೇಪಣಾ ಹೇಳಿಕೆಗಳನ್ನು ಮತ್ತು ಮಧ್ಯಂತರ ತಡಯಾಜ್ಞೆಯನ್ನು ತೆರವುಗೊಳಿಸಲು ಅರ್ಜಿಯನ್ನು ಸಲ್ಲಿಸುವಂತೆ ಸರ್ಕಾರದ ವಕೀಲರು, ಅಪರ ಅಡ್ವೋಕೇಟ್ ಜನರಲ್, ಅಡ್ವೋಕೇಟ್ ಜನರಲ್ ರವರಿಗೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ಮಾತನಾಡಿ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರಿಗೆ ಸರ್ಕಾರದ ಕಾರ್ಯದರ್ಶಿಗಳು ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಮತ್ತು ಅಡ್ವೋಕೇಟ್ ಜನರಲ್ ಇವರೊಂದಿಗೆ ಸಭೆ ಕರೆದು ಈ ಸಂಬಂಧ ತ್ವರಿತವಾಗಿ ಪ್ರಕರಣಗಳನ್ನು ವಿಲೇ ಮಾಡಲು ಸೂಚನೆ ನೀಡುವಂತೆ ತಿಳಿಸಿದರು.

ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು, ಈ ಸಂಬಂಧ ತಡಯಾಜ್ಞೆಯನ್ನು ತೆರವುಗೊಲಿಸಲು ಅಗತ್ಯ ಕ್ರಮ ವಹಿಸುವಂತೆ ಸಭೆ ನಿರ್ಣಯಿಸಿತು.

ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು

5. **2025-26ನೇ ಸಾಲಿಗೆ ಕೇಂದ್ರ ಸರ್ಕಾರವು ಸಕ್ಕರೆ ಕಾರ್ಖಾನೆಗಳಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.) ನಿಗದಿಗೊಳಿಸಿರುವ ಬಗ್ಗೆ.**

ಮಾನ್ಯ ಆಯುಕ್ತರು, ಮಾತನಾಡಿ ಸಿಎಸಿಪಿ ರವರ ಶಿಫಾರಸುಗಳ ಅನ್ವಯ ಕೇಂದ್ರ ಸರ್ಕಾರವು ದಿನಾಂಕ:06.05.2025 ರಂದು 2025-26ನೇ ಸಕ್ಕರೆ ಹಂಗಾಮಿಗೆ ಪ್ರತಿ ಟನ್ ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಪಡಿಸಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ರಿಕವರಿ ಆಧಾರದ ಮೇಲೆ ಕೇಂದ್ರ ಸರ್ಕಾರದ ಎಫ್. ಆರ್.ಪಿ ಆದೇಶವನ್ನು ಅಳವಡಿಸಿಕೊಳ್ಳುವಂತೆ ಪತ್ರ ಬರೆಯಲು ಸಭೆ ತೀರ್ಮಾನಿಸಿತು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು

6. **2025-26ನೇ ಸಾಲಿಗೆ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚಗಳ ಸಂಬಂಧಿಸಿದ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.**

ಮಹಾರಾಷ್ಟ್ರ ರಾಜ್ಯದಲ್ಲಿ ಕಬ್ಬು ಕಟಾವು ದರವನ್ನು ಹೆಚ್ಚಿಸಿರುವುದರಿಂದ ರಾಜ್ಯದಲ್ಲಿ ಕಬ್ಬು ಕಟಾವು ಮತ್ತು ಸಾಗಾಣಿಕ ದರಗಳಲ್ಲಿನ ವ್ಯತ್ಯಾಸಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:21.04.2025 ರಂದು ಕರ್ನಾಟಕ ಕಬ್ಬು ಖರೀದಿ ಮತ್ತು ಸರಬರಾಜು ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2014 ರಡಿಯಲ್ಲಿ ರಚಿಸಲಾದ ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿಯಲ್ಲಿ (4-ಸಿ) ಚರ್ಚಿಸಲಾಗಿರುತ್ತದೆ ಎಂದು ಮಾನ್ಯ ಆಯುಕ್ತರು ಸಭೆಗೆ ತಿಳಿಸಿದರು. ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿಯಲ್ಲಿ (4-ಸಿ) ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಕುರಿತು ತೀರ್ಮಾನಿಸಿದ ದರವನ್ನು ಸಭೆಗೆ ಮಂಡಿಸಿದರು.

ಶ್ರೀ ರಂಗಣ್ಣ ಗೌಡ ಶಿವಣ್ಣ ಗೌಡ ಪಾಟೀಲ್, ರೈತ ಮುಖಂಡರು ಇವರು ಮಾತನಾಡುತ್ತಾ ಹೊರ ರಾಜ್ಯದಿಂದ ಬರುವ ಕಬ್ಬು ಕಟಾವು ಕಾರ್ಮಿಕರಂತೆ ಸ್ಥಳೀಯ ಕಬ್ಬು ಕಟಾವು ಕಾರ್ಮಿಕರಿಗೂ ಸಹ ಪ್ರತಿ ಮೆ.ಟನ್ ಕಬ್ಬಿಗೆ ರೂ.114 ರಷ್ಟು ಹೆಚ್ಚಿಸಬೇಕೆಂದು ಸಭೆಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಮಾನ್ಯ ಆಯುಕ್ತರು ಪ್ರತಿಕ್ರಿಯಿಸುತ್ತಾ ಈಗಾಗಲೇ ಪರಿಷ್ಕೃತ ಕಬ್ಬು ಕಟಾವು ದರದಲ್ಲಿ ಅಳವಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ವಿ.ಜಿ ರವಿ ಮತ್ತು ಶ್ರೀ ಬಾಲಚಂದ್ರ ಭಕ್ತಿ, ಕಾರ್ಖಾನೆಗಳ ಪ್ರತಿನಿಧಿಗಳು ಮಾತನಾಡಿ ಕಬ್ಬು ಕಟಾವು ಮತ್ತು ಸಾಗಾಣಿಕ ವೆಚ್ಚಗಳನ್ನು ಪರಿಷ್ಕರಿಸಿರುವುದನ್ನು ಸಹಮತಿಸಿದರು.

2025-26ನೇ ಸಾಲಿಗೆ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚಗಳ ಸಂಬಂಧ ಈ ಸಭೆಗೆ ಮಂಡಿಸಿರುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವಂತೆ ಹಾಗೂ ಈ ಸಂಬಂಧ

ಆದೇಶ ಹೊರಡಿಸಲು ಆಯುಕ್ತರಿಗೆ ಮಾನ್ಯ ಅಧ್ಯಕ್ಷರು, ಕಬ್ಬು ನಿಯಂತ್ರಣ ಮಂಡಳಿ ಇವರು ತಿಳಿಸಿದರು. ಇದನ್ನು ಸಭೆಯು ಅನುಮೋದಿಸಿತು.

ಕ್ರಮ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು.

7. **2025-26ನೇ ಸಾಲಿನ ಕಬ್ಬು ಅರೆಯುವ ಹಂಗಾಮು ಪ್ರಾರಂಭಿಸಲು ದಿನಾಂಕ ನಿಗದಿಗೊಳಿಸುವ ಬಗ್ಗೆ.**

ಮಾನ್ಯ ಆಯುಕ್ತರು ಮಾತನಾಡುತ್ತಾ ಸರ್ಕಾರದ ಆದೇಶ ಸಂಖ್ಯೆ: ಸಿಐ 148 ಎಸ್‌ಜಿಎಫ್ 2025 ದಿನಾಂಕ:30.05.2025 ರಂದು ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ 2025-26 ನೇ ಹಂಗಾಮಿನ ಕಬ್ಬು ನುರಿಸುವ ಕಾರ್ಯವನ್ನು ಕಡ್ಡಾಯವಾಗಿ ದಿನಾಂಕ: 22.06.2025 ರಿಂದ ಪ್ರಾರಂಭಿಸಲು ಅನುಮತಿ ನೀಡಿ ಆದೇಶಿಸಿರುತ್ತದೆ ಎಂದು ಸಭೆಗೆ ತಿಳಿಸಿದರು. ಇನ್ನುಳಿದ 12 ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಯುವ ಕಾರ್ಯವನ್ನು ಪ್ರಾರಂಭಿಸುವ ದಿನಾಂಕ ನಿಗದಿ ಪಡಿಸಬೇಕೆಂದು ಕೋರಿದರು.

